ಹುಬ್ಬಳ್ಳಿ ಗುರುವಾರ, 25 ಜೂನ್ 2026 ಸಂಪುಟ 16, ಸಂಚಿಕೆ 92, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ RNI No.KARKAN/2011/64413
epaper.hosadigantha.com
hosadigantha.com
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಕಾಶ್ಮೀರ ಮುಂದೆಯೂ ನಮ್ಮ ಆಂತರಿಕ ವಿಚಾರ

• ಪುಟ 2

ಶೀಘ್ರ ಮನೆ ಹಂಚಿಕೆಗೆ ಡಿ.ಕೆ.ಶಿವಕುಮಾರ್ ಸೂಚನೆ
ವಸತಿ ವಿಳಂಬಕ್ಕೆ ಸಿಎಂ ಸಿಟ್ಟು

• **ಬೆಂಗಳೂರು:** ಗ್ರಾಮೀಣ ವಸತಿ ಮನೆಗಳ ನಿರ್ಮಾಣ, ನಿವೇಶನಗಳ ಹಂಚಿಕೆಯಲ್ಲಿ ನಿಧಾನಗತಿಗೆ ಅಧಿಕಾರಿಗಳ ವಿರುದ್ಧ ಸಿಟ್ಟಾದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಎಷ್ಟು ವರ್ಷ ಕಾಯಬೇಕು. ಮೊದಲು ಮನೆ ಹಂಚಿಕೆ ಮಾಡಿ ಎಂದು ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಬುಧವಾರ ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಹಲವು ವರ್ಷಗಳ ಹಿಂದೆಯೇ ಮನೆಗಾಗಿ ಅರ್ಜಿ ಸಲ್ಲಿಸಿದವರು ಇನ್ನೂ ಕಾಯುತ್ತಿದ್ದಾರೆ. ಅವರೆಲ್ಲ ಠೇವಣಿ ಕಟ್ಟಿದ್ದಾರೆ. ಈ ಅರ್ಜಿಗಳ ಮೇಲೆ ಹಿಂದಿನ ಸರ್ಕಾರದ ವಸತಿ ಸಚಿವ ಸೋಮಣ್ಣ ಅವರ ಫೋಟೋ ಇದೆ. ಅವರಿಗಿನ್ನೂ ಮನೆ ಕೊಟ್ಟಿಲ್ಲ, ಪಾಪ ಅವರೆಲ್ಲಾ ಇನ್ನೂ ಎಷ್ಟು ವರ್ಷ ಕಾಯಬೇಕು ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಫಲಾನುಭವಿಗಳ ಪಟ್ಟಿ ಬೇಗ ಕೊಡಲು ಶಾಸಕರ ಜತೆ ಮಾತನಾಡುವೆ. ನೈಜ ಫಲಾನುಭವಿಗಳಿಗೇ ಸವಲತ್ತು ಸಿಗಬೇಕು.

➡ಪುಟ 9

ಯಾವುದೇ ವಸತಿ ಯೋಜನೆಗೆ ಕೈಹಾಕುವ ಮೊದಲೇ ಸ್ಪಷ್ಟ ಯೋಜನೆ ಇಟ್ಟುಕೊಳ್ಳಿ. ಯಾವುದೇ ಪ್ರಮುಖ ತೀರ್ಮಾನಗಳ ಬಗ್ಗೆ ನನ್ನ ಜತೆ ಚರ್ಚೆ ಆಗತ್ಯ. ಮನೆ ನಿರ್ಮಿಸಿದ ನಂತರ ಮಾರಾಟಕ್ಕೆ ಒದ್ದಾಡುವುದು ಬೇಡ. ನೀವು ಗುಣಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಇರಬೇಕು.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಕಿರುಸುದ್ದಿ

ಟಿಬಿ ಡ್ಯಾಂ ಗೇಟ್‌ಗೆ ಇಂದು ಚಾಲನೆ
• ಪುಟ 3
ಭಾರೀ ಮಳೆ: ಮುಂಬೈ, ಅರುಣಾಚಲ ಜನ ತತ್ತರ
• ಪುಟ 2
ಒಂದೇ ಕುಟುಂಬದ ಐವರು ಕಾವೇರಿ ಪಾಲು
• ಪುಟ 4
ರಾಮಮಂದಿರ ಸ್ಫೋಟಕ್ಕೆ ಶಂಕಿತ ಉಗ್ರ ಸಂಚು
• ಪುಟ 3
ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ವಿಜಯೇಂದ್ರ
• ಪುಟ 3

ರಾಜ್ಯಕ್ಕೆ ಹೊರೆಯಾದರೂ ಜಾರಿ: ಸಚಿವ ಈಶ್ವರ ಖಂಡ್ರೆ ಹೇಳಿಕೆ
ಜು.1ರಿಂದ ವಿಬಿ ಜಿರಾಮ್‌ಜಿ

• **ಬೆಂಗಳೂರು:** ಗ್ರಾಮೀಣ ಭಾಗದ ಕುಟುಂಬಗಳಿಗೆ ಉದ್ಯೋಗದ ಖಾತ್ರಿ ನೀಡಿದ್ದ ನರೇಗಾ ಹೊಸ ಸ್ವರೂಪ ವಿಕಸಿತ ಭಾರತ್ ಜಿ ರಾಮ್‌ಜಿಯಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾದರೂ ಗ್ರಾಮೀಣ ಜನರ, ಮಹಿಳೆಯರ, ವಂಚಿತರ, ದುರ್ಬಲರ ಹಿತದೃಷ್ಟಿಯಿಂದ ಜುಲೈ 1ರಿಂದಲೇ ಜಾರಿಗೆ ತರಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಪಂಚಾಯತ್ ರಾಜ್ ಅಯುಕ್ತಾಲಯದಲ್ಲಿ ಉನ್ನತಾಧಿಕಾರಿಗಳೊಂದಿಗೆ ನಡೆದ ಸಭೆಯ ಬಳಿಕ ಮಾತನಾಡಿದ ಅವರು, ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮನ್‌ರೇಗಾ ಯೋಜನೆಯಲ್ಲಿ ಕೇಂದ್ರ ಸರ್ಕಾರ 90:10 ಅನುಪಾತದಲ್ಲಿ ವೇತನ ಭರಿಸುತ್ತಿತ್ತು. ರಾಜ್ಯ ಸರ್ಕಾರ ಕೇವಲ 10ರಷ್ಟು ಹಣ ನೀಡುತ್ತಿತ್ತು. ಆದರೆ, ಈಗ 60:40ರ ಅನುಪಾತದಲ್ಲಿ ವೆಚ್ಚ ಭರಿಸಬೇಕಾಗಿದ್ದು ರಾಜ್ಯಗಳ ಮೇಲೆ ಹೆಚ್ಚಿನ ಹೊರೆ ಆಗುತ್ತಿದೆ. ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ ಮನ್‌ರೇಗಾ ಅಡಿಯಲ್ಲಿ 56,492 ಕೋಟಿ ರೂ. ಭರಿಸಿದ್ದರೆ, ರಾಜ್ಯ ಸರ್ಕಾರ 4,821 ಕೋಟಿ ರೂ. ಮಾತ್ರ ಭರಿಸಿ ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗ ಒದಗಿಸಿತ್ತು.

➡ಪುಟ 9

ವಿಬಿ ಜಿ ರಾಮ್‌ಜಿ ಕಾಯಿದೆ ತರುವ ಮುನ್ನ ಕೇಂದ್ರ ರಾಜ್ಯಗಳ ಸಲಹೆ ಪಡೆಯಬೇಕಾಗಿತ್ತು. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳನ್ನು ಬಿಟ್ಟುಕಾಯಿದೆ ರೂಪಿಸಿದ ಬಗ್ಗೆಯೂ ಕರ್ನಾಟಕದ ವಿರೋಧವಿದೆ. ಇದನ್ನು ಸುಪ್ರೀಂನಲ್ಲಿ ಪ್ರಶ್ನಿಸಲಾಗುತ್ತಿದೆ.
■ ಈಶ್ವರ್ ಖಂಡ್ರೆ, ಸಚಿವ

ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಿ

ಜೂ.28ರಂದು ದೆಹಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೊಂದಿಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಇದ್ದು, ಈ ಸಭೆಯಲ್ಲಿ ಈ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು. ಬೇಡಿಕೆ ಆಧಾರದಲ್ಲಿ ಉದ್ಯೋಗ ನೀಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ನಮ್ಮ ರಾಜ್ಯದಲ್ಲಿ 375 ರೂ. ಕೂಲಿ ಇದೆ. ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡಿದೆ. ಇದಕ್ಕೆ ಹೊಂದುವಂತೆ ಕೇಂದ್ರವೂ ಕನಿಷ್ಠ ಕೂಲಿ ಹೆಚ್ಚಿಸಬೇಕು ಎಂದು ಈಶ್ವರ ಖಂಡ್ರೆ ಒತ್ತಾಯಿಸಿದರು.

➡ಪುಟ 9

ರಾಜ್ಯದ 6 ಕಡೆ ಇಡಿ ದಾಳಿ

ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ಮಂಜುನಾಥ ಮನೆ ಸೇರಿ 6 ಕಡೆ ಕಾರ್ಯಾಚರಣೆ

• **ಬೆಳಗಾವಿ/ಮೈಸೂರು:** ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಅವರ ಮನೆ, ಕಚೇರಿ ಸೇರಿದಂತೆ ರಾಜ್ಯದ ಆರು ಕಡೆ ಬುಧವಾರ ಏಕಕಾಲಕ್ಕೆ ಜಾರಿ ನಿರ್ದೇಶನಾಲಯ(ಇಡಿ) ದಾಳಿ ನಡೆಸಿದ್ದು, ಮಂಜುನಾಥ್ ಅವರ ಆಪ್ತೆ ಆಪ್ತೆ ಯಮುನಾ ಅವರನ್ನು ಮೈಸೂರಿನಲ್ಲಿ ತೀವ್ರ ವಿಚಾರಣೆ ನಡೆಸಿದರು. ಬೆಂಗಳೂರು, ಗೋವಾ ಇಡಿ ಕಚೇರಿ ಅಧಿಕಾರಿಗಳು ಬುಧವಾರ ಬೆಳಗ್ಗೆ ಈ ದಾಳಿ ನಡೆಸಿದ್ದು, ಶೋಧ ಕಾರ್ಯ ಕೈಗೊಂಡಿದ್ದಾರೆ. ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ ಹಾಗೂ ಸಚಿವ ಸತೀಶ ಜಾರಕಿಹೊಳಿ ಸಹೋದರಿಯ ಪತಿ ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪ ಕೇಳಿಬಂದಿದ್ದವು.

• ವಿವರ ಪುಟ 9

ಬಂಡವಾಳ ಹೂಡಲು ಯುಪಿಗೆ ಬನ್ನಿ: ಯೋಗಿ

• **ಬೆಂಗಳೂರು:** ಭಾರತದ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯ ಉತ್ತರ ಪ್ರದೇಶವು ಬಂಡವಾಳ ಹೂಡಲು ಹೇಳಿ ಮಾಡಿಸಿದಂತಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪೂರಕ ವಾತಾವರಣವಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ– 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನವ ಭಾರತದ ನವ ಉತ್ತರ ಪ್ರದೇಶಕ್ಕೆ ಉದ್ಯಮಿಗಳನ್ನು ಆಹ್ವಾನಿಸಲು ನಾನಿಲ್ಲಿಗೆ ಬಂದಿದ್ದೇನೆ. ಉತ್ತರ ಪ್ರದೇಶದಲ್ಲಿ ವಿಪುಲ ಅವಕಾಶಗಳಿವೆ ಎಂದು ಹೇಳಿದರು.

• ವಿವರ ಪುಟ 9

ಕಿರುಸುದ್ದಿ

ಇಂದು ಕಸಾಪ ಉಪನ್ಯಾಸ

ಧಾರವಾಡ: ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ತಾಲೂಕು ಘಟಕಗಳ ದತ್ತಿ ಅಂಗವಾಗಿ ದತ್ತಿ ಉಪನ್ಯಾಸ, ಪ್ರತಿಭಾ ಪುರಸ್ಕಾರ, ಕನ್ನಡ ನಾಡು-ನುಡಿ ಗೀತ ಗಾಯನ ಜೂ.25ರ ಬೆಳಗ್ಗೆ 11ಕ್ಕೆ ತಾಲೂಕಿನ ಅಮ್ಮಿನಬಾವಿ ಶ್ರೀಶಾಂತೇಶ್ವರ ಪ್ರೌಢಶಾಲೆಯಲ್ಲಿ ಜರುಗಲಿದೆ.

ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಉದ್ಘಾಟಿಸಲಿದ್ದು, ಶಾಂತೇಶ್ವರ ಪ್ರೌಢಶಾಲೆ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಎಸ್.ಎಂ. ಹುಲಗೂರ ಅಧ್ಯಕ್ಷತೆ ವಹಿಸುವರು. ಹವ್ಯಾಸಿ ಪತ್ರಕರ್ತ ಗುರುಮೂರ್ತಿ ಯರಗಂಬಳಿಮಠ, ಗುರು ತಿಗಡಿ ಅತಿಥಿಗಳಾಗಿ ಪಾಲ್ಗೊಳ್ಳುವರು. ವಿಶ್ರಾಂತ ಅಧ್ಯಾಪಕ ಸುರೇಶ ಕುಲಕರ್ಣಿ ಉಪನ್ಯಾಸ ನೀಡಲಿದ್ದು, ಕಲಾವಿದೆ ಪ್ರಮಿಳಾ ಜಕ್ಕಣ್ಣವರ ಗೀತಗಾಯನ ಮಾಡುವರು.

ವಿದ್ಯಾರ್ಥಿನಿಯರಾದ ವಿನೋದಾ ಕಂಬಳಿ, ಅಕ್ಷತಾ ರುದ್ರಪ್ಪನವರ, ಲಕ್ಷ್ಮೀ ಕರಡಿಗುಡ್ಡಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಗುವುದು. ಪ್ರೌಢಶಾಲೆ ಮುಖ್ಯೋಧ್ಯಾಪಕ ಎನ್.ಬಿ.ಅಮರಗೋಳ, ಕಸಾಪ ತಾಲೂಕಾಧ್ಯಕ್ಷ ಮಹಾಂತೇಶ ನರೇಗಲ್ಲ, ಜಿಲ್ಲಾ ಕಾರ್ಯದರ್ಶಿ ಪ್ರೊ.ಕೆ.ಎಸ್.ಕೌಜಲಗಿ, ಡಾ.ಜಿನದತ್ತ ಹಡಗಲಿ ಪಾಲ್ಗೊಳ್ಳಲಿದ್ದಾರೆ ಎಂದು ಕಸಾಪ ತಾಲೂಕು ಕಾರ್ಯದರ್ಶಿ ಮಾರ್ತಾಂಡಪ್ಪ ಕತ್ತಿ ತಿಳಿಸಿದ್ದಾರೆ.

ವಿನಾಯಿತಿ ನೀಡಿ ಆದೇಶ

ಹುಬ್ಬಳ್ಳಿ: ಪ್ರಸ್ತುತ ವರ್ಷ ಮೇ 31 ರಂದು ಅಥವಾ ಅದಕ್ಕೂ ಮುಂಚಿತವಾಗಿ ಪೂರ್ಣಗೊಂಡಿರುವ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಹಾಗೂ ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಪೂರ್ಣಗೊಂಡಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ಪಡೆಯುವುದರಿಂದ ಒಂದು ಬಾರಿ ವಿನಾಯಿತಿ ನೀಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಇದರ ಸದುಪಯೋಗ ಪಡೆಯುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ. ಹೆಸ್ಕಾಂ ವ್ಯಾಪ್ತಿಯ ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ, ಗದಗ, ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಹ 2400 ಚದರ ಅಡಿಗಳವರೆಗೆ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ + 3 ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿದ್ದು, 31.05.2026ರ ಒಳಗಾಗಿ ಪೂರ್ಣಗೊಂಡ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಈ ಆದೇಶವು 2026ರ ಮೇ 31ರೊಳಗೆ 1) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು. 2) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡು ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿದ್ದು, ಶಾಶ್ವತ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸದಿರುವ ಪ್ರಕರಣಗಳು. 3) ವಸತಿ ಕಟ್ಟಡ ನಿರ್ಮಾಣ ಪೂರ್ಣಗೊಂಡು ವಿದ್ಯುತ್ ಸಂಪರ್ಕಕ್ಕಾಗಿ (ತಾತ್ಕಾಲಿಕ/ ಶಾಶ್ವತ) ಅರ್ಜಿ ಸಲ್ಲಿಸದೆ ಇರುವ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 15 ದಿನಗಳ ವರೆಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಒಂದು ಬಾರಿಯ ಕ್ರಮವಾಗಿ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರು ವಾಸಿಸುವ ಮನೆ, ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ, ರೇಷ್ಮೆ ಗೂಡಿನ ಮನೆಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಸ್ವಾಧೀನಾನುಭವ (ಒಸಿ) ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ದೊಡ್ಡ ಹಗರಣ: ಪಾಟೀಲ್

ನವಲಗುಂದ: ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆ ಈಗ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹಗರಣವಾಗಿ ಮಾರ್ಪಟ್ಟಿದೆ ಎಂದು ಬಿಜೆಪಿ ಧಾರವಾಡ ಗ್ರಾಮಾಂತರ ಸಾಮಾಜಿಕ ಜಾಲತಾಣ ಪ್ರಕೋಷ್ಠ ಸಂಚಾಲಕ ಪವನ ಪಾಟೀಲ್ ಆರೋಪಿಸಿದರು.

ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ ಬರೋಬ್ಬರಿ 46.52 ಕೋಟಿ ರೂ. ಪಾವತಿಯಾಗಿರುವುದು ಮತ್ತು 19,020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದನ್ನು ಸ್ವತಃ ಸಿಎಜಿ ವರದಿಯೇ ಬಯಲಿಗೆಳೆದಿದೆ. 10 ಲಕ್ಷಕ್ಕೂ ಅಧಿಕ ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ಅರ್ಹರಿಗೆ ತಲುಪಬೇಕಾದ ಸಾರ್ವಜನಿಕರ ತೆರಿಗೆ ಹಣವನ್ನು ವ್ಯವಸ್ಥಿತವಾಗಿ ನುಂಗಿ ನೀರು ಕುಡಿಯಲಾಗಿದೆ ಎಂದು ಆರೋಪಿಸಿದರು. ಕೋಟ್ಯಂತರ ಅರ್ಹ ತಾಯಂದಿರಿಗೆ ನೀಡಬೇಕಿದ್ದ 2 ತಿಂಗಳ (ಫೆಬ್ರವರಿ-ಮಾರ್ಚ್ 2025) ಬರೋಬ್ಬರಿ 5,000 ಕೋಟಿ ರೂ. ಹಣ ಫಲಾನುಭವಿಗಳಿಗೆ ತಲುಪದೆ ನಾಪತ್ತೆಯಾಗಿದ್ದು, ಅದಕ್ಕೆ ಈ ಕಾಂಗ್ರೆಸ್ ಸರ್ಕಾರ ಇನ್ನೂ ಉತ್ತರ ನೀಡಿಲ್ಲ. ಬಡ ತಾಯಂದಿರಿಗೆ ನೀಡಬೇಕಾದ ಈ 5,000 ಕೋಟಿ ರೂ. ಎಲ್ಲಿ ಹೋಯಿತು? ಎಂದು ಸರ್ಕಾರ ಉತ್ತರಿಸದ ಹಿನ್ನೆಲೆಯಲ್ಲಿ ಹೈಕೋರ್ಟ್ ಆಕ್ಷೇಪಿಸಿ ನೋಟಿಸ್ ಜಾರಿ ಮಾಡಿದೆ. ಇಷ್ಟೆಲ್ಲಾ ನಡೆದರೂ ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಕಾಂಗ್ರೆಸ್‌ನವರು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಹುಬ್ಬಳ್ಳಿ: ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರ ಜನ್ಮದಿನದ ನಿಮಿತ್ತವಾಗಿ ಹುಬ್ಬಳ್ಳಿ ಗೋಕುಲ್ ರಸ್ತೆ ಕ್ಯೂಬಿಕ್ಸ್ ಹೊಟೆಲಿನಲ್ಲಿ ರಾಷ್ಟೋತ್ಥಾನ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಅಭಿಮಾನಿಗಳಿಂದ ಬೃಹತ್ ರಕ್ತದಾನ ಶಿಬಿರ ರಕ್ತದಾನ ಶಿಬಿರ ಏರ್ಪಡಿಸಲಾಯಿತು. ಶಿಬಿರದಲ್ಲಿ 185ಕ್ಕೂ ಹೆಚ್ಚು ರಕ್ತದಾನಿಗಳು ಪಾಲ್ಗೊಂಡರು.

ಶಾಲಾ ಕಾಮಗಾರಿ ಆರಂಭಕ್ಕೆ ಆಗ್ರಹಿಸಿ ಪ್ರತಿಭಟನೆ

ಧಾರವಾಡ: ನನೆಗುದಿಗೆ ಬಿದ್ದಿರುವ ಸರ್ಕಾರಿ ಪ್ರೌಢಶಾಲೆ ಕಟ್ಟಡ ಕಾಮಗಾರಿ ತಕ್ಷಣ ಆರಂಭಿಸಲು ಒತ್ತಾಯಿಸಿ ಕರಡಿಕೊಪ್ಪ, ಕುರಡಿಕೇರಿ, ಕಂಪ್ಲಿಕೊಪ್ಪ, ವೀರಾಪುರ ಗ್ರಾಮಗಳ ಗ್ರಾಮಸ್ಥರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿ ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆಗಾಗಿ ಅನುಮೋದನೆ ನೀಡಿತ್ತು. ಕಳೆದ ಎರಡು ವರ್ಷದಿಂದ ಕಾಮಗಾರಿ ನಡೆಯದ ಬಗ್ಗೆ ದೂರಿದರು. ಜಮೀನಿನ ಮೇರೆ ಗುರುತಿಸಿ, ಕಬ್ಬೆ ಪಡೆಯುವುದು, ಎರಡು ವರ್ಷಗಳೊಳಗೆ ಅಭಿವೃದ್ಧಿ ಪಡಿಸುವುದು ಸೇರಿದಂತೆ 8 ಷರತ್ತುಗಳನ್ನು ವಿಸಿ ಆದೇಶಿಸಲಾಗಿತ್ತು. ಅದರೆ ಈವರೆಗೆ ಅನುಷ್ಠಾನಕ್ಕೆ ಬರದ ಬಗ್ಗೆ ದೇವರಾಜ ಕೋಟೆನ್ನವರ ಆರೋಪಿಸಿದರು. ಕರಡಿಕೊಪ್ಪ ಗ್ರಾಪಂ ವ್ಯಾಪ್ತಿಯ ಕುರಡಿಕೇರಿ ಹದ್ದಿನ 51 ಎಕರೆ 12 ಗುಂಟೆ ಜಮೀನಿನ ಪೈಕಿ 3 ಎಕರೆ ಜಮೀನು ಪ್ರೌಢಶಾಲೆ ನಿರ್ಮಾಣಕ್ಕಾಗಿ ಅಧಿಕೃತವಾಗಿ ಮಂಜೂರಾಗಿದ್ದು, ಷರತ್ತುಗಳು ಜಾರಿಯಲ್ಲಿ ಅಧಿಕಾರಿಗಳು ವಿಫಲರಾಗಿದ್ದಾಗಿ ದೂರಿದರು. ಮಂಜೂರಾದ ಜಾಗದ ಕಂದಾಯ ದಾಖಲಾತಿ ಕಾನೂನುಬದ್ಧವಾಗಿ ಸರಿಪಡಿಸದ ಕಾರಣ ಸರ್ಕಾರದಿಂದ ಬಿಡುಗಡೆಯಾಗಿದ್ದ ಅನುದಾನವು ಮೂರು ಬಾರಿ ಬಳಸದ ಕಾರಣ ಸರ್ಕಾರದ ಖಜಾನೆಗೆ ಮರಳಿ ಜಮೆ ಆಗಿದೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದರು. ಮಂಜೂರಾದ ಪ್ರೌಢಶಾಲೆಯ ಜಾಗದ ಕಂದಾಯ ದಾಖಲಾತಿ 15 ದಿನಗಳ ಒಳಗೆ ಸರಿಪಡಿಸಲು ಕಂದಾಯ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಆಗ್ರಹಿಸಿ, ಬಳಿಕ ಶಾಲೆಯ ಜಾಗದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಧಾರವಾಡ: ನನೆಗುದಿಗೆ ಬಿದ್ದಿರುವ ಸರ್ಕಾರಿ ಪ್ರೌಢಶಾಲೆ ಕಟ್ಟಡ ಕಾಮಗಾರಿ ತಕ್ಷಣ ಆರಂಭಿಸಲು ಒತ್ತಾಯಿಸಿ ಕರಡಿಕೊಪ್ಪ, ಕುರಡಿಕೇರಿ, ಕಂಪ್ಲಿಕೊಪ್ಪ, ವೀರಾಪುರ ಗ್ರಾಮಗಳ ಗ್ರಾಮಸ್ಥರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೌಶಲ್ಯ ಪ್ರಗತಿ ಪರಿಶೀಲನಾ ಸಭೆ | ಅಧ್ಯಕ್ಷೆ ಕಾಂತಾ ನಾಯಕ ತೀರ್ಮಾನ

ವಿಭಾಗ ಮಟ್ಟದ ಉದ್ಯೋಗ ಮೇಳ

ಧಾರವಾಡ: ಬೆಳಗಾವಿ ವಿಭಾಗ ಮಟ್ಟದ ಉದ್ಯೋಗ ಮೇಳ ಆಯೋಜನೆ ಬಗ್ಗೆ ಚರ್ಚಿಸುತ್ತಿದ್ದು, ಅಗತ್ಯ ಮಾಹಿತಿ ಪಡೆದು ಶೀಘ್ರದಲ್ಲೇ ಉದ್ಯೋಗ ಮೇಳವನ್ನು ಆಯೋಜಿಸಲು ತೀರ್ಮಾನಿಸುವುದಾಗಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ನೂತನ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಕೌಶಲ್ಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳು ಕೈಗಾರಿಕಾ ಮತ್ತು ವಿದ್ಯಾ ಕೇಂದ್ರಗಳಾಗಿವೆ. ಸಾಕಷ್ಟು ಕೈಗಾರಿಕೆಗಳು ಹುಬ್ಬಳ್ಳಿ-ಧಾರವಾಡದಲ್ಲಿವೆ ಎಂದರು.

ಇದೇ ವೇಳೆ ನಲ್ ಜಲ್ ಮಿತ್ರ ಯೋಜನೆಯಡಿ ತರಬೇತಿ ಪಡೆದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ, ಟೂಲ್ ಕಿಟ್ ಹಾಗೂ ಸಮವಸ್ತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ದ್ಯಾಬೇರಿ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಜಿಲ್ಲೆಯ ಕೈಗಾರಿಕೋದ್ಯಮಿಗಳು ಉಪಸ್ಥಿತರಿದ್ದರು.

- ಮುಂದಿನ ದಿನಗಳಲ್ಲಿ ಕೈಗಾರಿಕೋದ್ಯಮಿಗಳ ಸಭೆ
- ಕೈಗಾರಿಕೆಗಳಲ್ಲಿ ಅವಶ್ಯ ಕೌಶಲ್ಯಗಳ ಬಗ್ಗೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಕ್ರಮ ವಹಿಸಲಿ
- ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಹೊಸ ಅಭ್ಯರ್ಥಿಗಳಿಗೆ ಕೆಲಸಕ್ಕೆ ಅನುಸಾರವಾಗಿ ವೇತನ ನೀಡಬೇಕಿದೆ ಎಂದ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ

ಗೌರವ ಸಂಭಾವನೆ ನೀಡಿ

ನನ್ನ ವೃತ್ತಿ ನನ್ನ ಆಯ್ಕೆ ಹಾಗೂ ಕಲಿಕಾ ಕೌಶಲ್ಯ ಬಗ್ಗೆ ಜಾಗೃತಿ ಮೂಡಿಸಲು ತಿಳಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು, ಉದ್ಯೋಗ ಆಧಾರಿತ ತರಬೇತಿ ನೀಡುವುದು ಅಗತ್ಯವಿದೆ. ಆ ನಿಟ್ಟಿನಲ್ಲಿ ತರಬೇತಿ ಜೊತೆ ಗೌರವ ಸಂಭಾವನೆ ನೀಡಬೇಕಿದೆ. ಧಾರವಾಡದಲ್ಲಿ ಸಾಕಷ್ಟು ಅಭ್ಯರ್ಥಿಗಳು ಸರ್ಕಾರಿ ಉದ್ಯೋಗಕ್ಕೆ ತಯಾರಿ ನಡೆಸುತ್ತಿದ್ದಾರೆ. ನವಲಗುಂದದ ಅಭಿಯಾನ ಫೌಂಡೇಶನ್ ಯೋಗ ಮ್ಯಾಟ್ ತಯಾರಿ ಕುರಿತು ತರಬೇತಿ ನೀಡಲು ಮುಂದಾಗಬೇಕು ಎಂದರು.

ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವುದು ಬಹಳಷ್ಟು ಮುಖ್ಯ. ಆರ್ಹ ಅಭ್ಯರ್ಥಿಗಳು ಕೆಲಸ ಸಿಗದೆ ನಿರಾಶರಾಗಬಾರದು. ಯುವನಿಧಿ ಯೋಜನೆಯ ಫಲಾನುಭವಿಗಳಿಗೆ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ನೀಡಬೇಕು.

■ ಕಾಂತಾ ನಾಯಕ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ

ಪದವೀಧರರಿಗೆ ಉದ್ಯೋಗ ಸಿಗಲಿ

ಅಲ್ಪಾವಧಿ-ದೀರ್ಘಾವಧಿ ಕೆಲಸದ ಮಾಹಿತಿ ಒದಗಿಸಬೇಕು. ಐಟಿಐ ಕಲಿಕಾರ್ಥಿಗೆ ಸಾಕಷ್ಟು ಉದ್ಯೋಗಾವಕಾಶ ದೊರೆಯುತ್ತಿವೆ. ಪದವೀಧರರಿಗೂ ಉದ್ಯೋಗಗಳು ದೊರೆಯಬೇಕು. ಫ್ಯೂಚರ್ ಸ್ಕಿಲ್ ಯೋಜನೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಬೇಕಿದೆ . ಗೃಹಲಕ್ಷ್ಮೀ ಯೋಜನೆಯಂತೆ ಕೌಶಲ್ಯ ತರಬೇತಿ ಮತ್ತು ಯೋಜನೆಗಳ ಸಾಧನಾ ವರದಿ ನೀಡಬೇಕು. ಪಾರಂಪರಿಕ, ಪ್ರಾದೇಶಿಕ ಕಲೆಗಳು ನಶಿಸಿ ಹೋಗದಂತೆ ಕ್ರಮ ವಹಿಸಬೇಕು ಎಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ ಹೇಳಿದರು.

ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರಿಗೆ ಒತ್ತಾಯ

ನವಲಗುಂದ: ಪಟ್ಟಣದ ವ್ಯಾಪ್ತಿಯಲ್ಲಿ ಸದ್ಯ ಯಾವುದೇ ಸರ್ಕಾರಿ ಪ್ರೌಢ ಶಾಲೆ ಇಲ್ಲದಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು ಕೂಡಲೇ ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡಬೇಕೆಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಆಗ್ರಹಿಸಿದರು.

ಈ ಕುರಿತು ಸಾರ್ವಜನಿಕರೊಂದಿಗೆ ತಹಶೀಲ್ದಾರ್ ಸುಧೀರ ಸಾಹುಕಾರ ಅವರ ಮೂಲಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಮನವಿ ನೀಡಿ ಮಾತನಾಡಿದ ಅವರು, ಇಲ್ಲಿನ ಬಹುತೇಕ ಕುಟುಂಬಗಳು ಕೃಷಿ ಹಾಗೂ ಕೂಲಿ ಕಾರ್ಮಿಕರನ್ನೇ ನೆಚ್ಚಿಕೊಂಡಿವೆ. ಬಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಖಾಸಗಿ ಶಾಲೆಗಳ ದುಬಾರಿ ಶುಲ್ಕ ಭರಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರಿ ಪ್ರೌಢ ಶಾಲೆಯಿಲ್ಲದ ಕಾರಣ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಸುತ್ತಮುತ್ತಲಿನ ಊರುಗಳಿಗೆ ಆಲೆಯಬೇಕಾದ ಪರಿಸ್ಥಿತಿ ಇದೆ. ಇದು ಅವರ ಸುರಕ್ಷತೆಗೂ ಆತಂಕ ತಂದಿದ್ದು ಒಂದು ಸರ್ಕಾರಿ ಪ್ರೌಢ ಶಾಲೆ ಮಂಜೂರು ಮಾಡಿಕೊಡುವಂತೆ ಮನವಿಯಲ್ಲಿ ಆಗ್ರಹ ಮಾಡಿದರು.

ಶಿವಣ್ಣಲಕ್ಕುಂಡಿಮಾತನಾಡಿ, ಸರ್ಕಾರದ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀತಿಯಡಿ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕಿದೆ. ಪಟ್ಟಣದಲ್ಲೇ ಸರ್ಕಾರಿ ಪ್ರೌಢಶಾಲೆ ಆರಂಭವಾದರೆ ನೂರಾರು ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸು ನನಸಾಗಲಿದೆ. ಆದ್ದರಿಂದ ಪಟ್ಟಣದ ಬಡ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಹೊಸ ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡಲು ಆಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಬಶೀರಅಹ್ಮದ ಹುನಗುಂದ, ಬಸವರಾಜ ಮಲ್ಲದಾಸರ, ಬಾಪುಸಾಬ ತಾಸೇದ, ಇಬ್ರಾಹಿಂಸಾಬ ಶಿರಕೋಳ, ಗಂಧರ್ವ ಹುಬ್ಬಳ್ಳಿ, ಇಮಾಮಸಾಬ ಹಳ್ಳಿಕೇರಿ, ರಮಜಾನ ನಿಗಧಿ, ರಸೂಲಸಾಬ ಭರ್ಮಾವತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ಕಲಘಟಗಿ: ಪಟ್ಟಣದ ಜಿಇ ಸ್ಕೂಲ್‌ನಲ್ಲಿ ಯೋಗ ದಿನಾಚರಣೆಯ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಸಂತೋಷ್ ಬಿಜಾಪುರ ಯೋಗ ದಿನಾಚರಣೆಯ ಮಹತ್ವ ಕುರಿತು ತಿಳಿಸಿದರು. ಶಿಕ್ಷಕ ಸಿ ಎನ್ ಹಂಚಿನಮನಿ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಸಂಯೋಜಿಸಿದರು. ಸಂತೋಷ್ ಇಟಗಿ ಸೂರ್ಯ ನಮಸ್ಕಾರದೊಂದಿಗೆ ಯೋಗ ಮಂತ್ರವನ್ನು ಉಚ್ಚರಿಸಿ ವಿದ್ಯಾರ್ಥಿಗಳಲ್ಲಿ ಅರಿವು, ಅಭಿಮಾನ, ಗೌರವ ಮೂಡಿಸುವಲ್ಲಿ ಯೋಗದ ಮಹತ್ವವನ್ನು ತಿಳಿಸಿದರು. ಸಹ ಶಿಕ್ಷಕಿಯರ

ಆರ್‌ಎಸ್‌ಎಸ್ ಮತ್ತು ತುರ್ತು ಪರಿಸ್ಥಿತಿಯ ಹೋರಾಟದ ಪ್ರಮುಖ ಅಂಕಿ-ಅಂಶಗಳು

25 ಜೂನ್
1975
ತುರ್ತು ಪರಿಸ್ಥಿತಿ ಘೋಷಣೆ

4 ಜುಲೈ
1975
ಆರೆಸ್ಸೆಸ್ ಮೇಲೆ ನಿಷೇಧ

1,30,000
ಒಟ್ಟು ಸತ್ಯಾಗ್ರಹಿಗಳು

80,000
ನಂತರದ ಸತ್ಯಾಗ್ರಹಗಳಲ್ಲಿ ಬಂಧಿತರಾದ ಸ್ವಯಂಸೇವಕರು

1,00,000+
ಸಂಘದ ಸ್ವಯಂಸೇವಕರು

30,000
ಮೀಸಾ ಬಂಧಿತರು

25,000+
ಸಂಘ ಸಂಬಂಧಿತ ಬಂಧಿತರು



100
ಪ್ರಾಣತ್ಯಾಗ ಮಾಡಿದ ಕಾರ್ಯಕರ್ತರು

23,015
ಮತ್ತೊಂದು ವರದಿಯ ಪ್ರಕಾರ ಆರ್‌ಎಸ್‌ಎಸ್ ಬಂಧಿತರು

1975 ರ ಜೂನ್ 25ರಂದು ದೇಶದಲ್ಲಿ ಹೇರಲಾದ ತುರ್ತು ಪರಿಸ್ಥಿತಿ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಅತ್ಯಂತ ಕರಾಳ ಅಧ್ಯಾಯ. ಈ ದಮನಕಾರಿ ಮತ್ತು ಸರ್ವಾಧಿಕಾರಿ ಆಡಳಿತದ ವಿರುದ್ಧ ದೇಶದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಮರುಸ್ಥಾಪಿಸಲು ನಡೆದ ಹೋರಾಟದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಪಾತ್ರವನ್ನು ವಹಿಸಿತ್ತು. ಆಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಸರ್ಕಾರ ಜಾರಿಗೊಳಿಸಿದ್ದ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ, ಸಂಘದ ಸಾವಿರಾರು ಸ್ವಯಂಸೇವಕರು ಬೀದಿಗಿಳಿದರು, ಜೈಲು ಸೇರಿದರು ಮತ್ತು ಅಮಾನವೀಯ ಕಿರುಕುಳಗಳನ್ನು ಎದುರಿಸಿ ಬಲಿದಾನಗೈದರು. ಈ ಹೋರಾಟ ಕೇವಲ ಸಂಘದ ಮೇಲಿನ ನಿಷೇಧವನ್ನು ಹಿಂಪಡೆಯುವುದಕ್ಕಾಗಿರಲಿಲ್ಲ. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಪುನಃ ಸ್ಥಾಪಿಸುವ ಪವಿತ್ರ ಉದ್ದೇಶ ಇದರ ಹಿಂದಿತ್ತು.

ಕರಾಳ ತುರ್ತು ಪರಿಸ್ಥಿತಿ ವಿರುದ್ಧ ಸಂಘಟಿತ ಪ್ರತಿರೋಧ

ಸಂವಿಧಾನ, ನಾಗರಿಕ ಹಕ್ಕುಗಳಿಗಾಗಿ ಸ್ವಯಂಸೇವಕರ ಬಲಿದಾನ

ಸಂವಿಧಾನ ರಕ್ಷಿಸಲು ಹೋರಾಡಿದ ಸಂಘ

ಡಾ.ಸುಧಾಕರ ಹೊಸಳ್ಳಿ, ಸಂವಿಧಾನ ತಜ್ಞರು, ಮಂಡ್ಯ

ಭಾರತದಲ್ಲಿ ಅಂಬೇಡ್ಕರ್ ಮತ್ತು ಸಂವಿಧಾನ ಈ ಎರಡರ ಕುರಿತು ಅತ್ಯಂತ ಯೋಜನಾ ಬದ್ಧವಾಗಿ ಪಿತೂರಿ ಮಾಡುತ್ತಲೇ ಬರಲಾಗಿದೆ. ಕಾರಣ ಬಹಳ ಸ್ಪಷ್ಟವಾದದ್ದು, ಸಂವಿಧಾನ ಮತ್ತು ಅಂಬೇಡ್ಕರರ ಬಗೆಗೆ ಮೂಲ ಸ್ವತ್ವದ ಮಾಹಿತಿ ಸಮಾಜಕ್ಕೆ ದೊರಕುವುದು ತಮ್ಮ ರಾಷ್ಟ್ರ ವಿಘಟನಾ ಕಾರ್ಯಕ್ಕೆ ತೊಡಕಾಗುತ್ತದೆ ಎಂಬ ಎಡಪಂಥೀಯರ ಆತಂಕ .

ಸದಾ ರಾಷ್ಟ್ರದ ಒಳಿತಿಗಾಗಿ, ರಾಷ್ಟ್ರದ ಐಕ್ಯತೆಗಾಗಿ, ಭಾರತದ ಉನ್ನತಿಗಾಗಿ ತಮ್ಮ ಸಂಶೋಧನೆಯನ್ನು ಮೀಸಲಿಟ್ಟಿದ್ದ ಅಂಬೇಡ್ಕರರಿಗೆ ಭಾರತ ವಿರೋಧಿ ಪಟ್ಟ ಕಟ್ಟುವುದು ಸವಾಲಿನ ಕೆಲಸವೇ ಆಗಿತ್ತು. ಹಾಗೆ ಸಂವಿಧಾನವು ಭಾರತವನ್ನು ಜಾಗತಿಕ ಗುರುವಾಗಿಸಲು ಏಣಿಯಾಗಿತ್ತು ಎಂಬುದನ್ನು ಭಿನ್ನ ಅರ್ಥದಲ್ಲಿ ಸ್ಥಾಪಿಸುವುದು ತೀವ್ರ ಶ್ರಮ ನಿರೀಕ್ಷೆ ಮಾಡುವ ಕಾಯಕವೇ.

ಆದರೆ ಎಡಪಂಥೀಯರು, ಕಮ್ಯುನಿಸ್ಟರು ತಮ್ಮ ಅಧಿಕ ಶ್ರಮದೊಂದಿಗೆ ಇಂತಹ ವಾಮ ಯೋಜನೆಯನ್ನು ಮುಂದುವರಿಸುತ್ತಲೇ ಬಂದಿದ್ದಾರೆ.

ಈಗ ಹೊಸದಾಗಿ ಆರ್‌ಎಸ್‌ಎಸ್ ನೋಂದಾಣಿ ಎಂಬ ಹಳೆಯ ವಿಷಯ ಹೊಸ ರೂಪದಲ್ಲಿ ಚರ್ಚೆಯಲ್ಲಿದೆ. ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ, ಈ ಸಂದರ್ಭದಲ್ಲಿ ಭಾರತ ಸಂವಿಧಾನದ ಮೇಲೆ ಎಮರ್ಜೆನ್ಸಿ ಎಂಬ ದುರಾಕ್ರಮಣ ಮಾಡಿದ ಕಾರ್ಯಕ್ಕೆ 51 ವರ್ಷಗಳು ತುಂಬಿದೆ.

ಸಂವಿಧಾನ ರಕ್ಷಕರೆಂಬ ಸ್ವ-ಹಣೆಪಟ್ಟಿ ಕಟ್ಟಿಕೊಂಡವರು, ಸಂವಿಧಾನಕ್ಕೆ ಮಾಡಿದ ಅಪಚಾರ, ಮುಂದುವರಿದು ಅತ್ಯಾಚಾರ, ಎಷ್ಟು ಕ್ರೂರ ಎಂಬುದನ್ನು 51 ವರ್ಷಗಳ ನಂತರವೂ ಸಮರ್ಥವಾಗಿ ವಿಶ್ಲೇಷಿಸುವುದು ಕಷ್ಟಸಾಧ್ಯ.

ಇಂತದ್ದೊಂದು ಕಠಿಣ ಗಳಿಗೆಯಲ್ಲಿ ಆರ್‌ಎಸ್‌ಎಸ್ ಭೂಗತ ಹೋರಾಟ ಮಾಡಿ ದೇಶದ ತರುಣರನ್ನು ಪ್ರೇರೇಪಿಸಿ, ಸಂವಿಧಾನ ರಕ್ಷಣೆಗಾಗಿ ಅದರ ಆಶಯಗಳ ಕಾಪಾಡುವ, ಗುರಿಯಡಿಗೆ ಸಾಗುವಂತೆ ಮಾಡುವಲ್ಲಿ ಆರ್‌ಎಸ್‌ಎಸ್ ನಿರ್ವಹಿಸಿದ ಪಾತ್ರವನ್ನು ಸರಳ ರೇಖೆಯಲ್ಲಿ ವಿವರಿಸುವುದು ಕಠಿಣವಾದದ್ದೆ?.

77 ವರ್ಷಗಳ ಹಿಂದೆ ಸ್ವತಂತ್ರ ಭಾರತದ ಸಾರ್ವಭೌಮತೆಯ ಪ್ರತೀಕವಾಗಿ ಸ್ವಂತ ಸಂವಿಧಾನ ಹೊಂದುವ ಆಶಯದಿಂದ, ಬಾಬು ರಾಜೇಂದ್ರ ಪ್ರಸಾದ್ ನೇತೃತ್ವದ ಸಂವಿಧಾನ ರಚನಾ ಸಭೆ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರರ ನೇತೃತ್ವದ ಕರಡು ರಚನಾ ಸಮಿತಿಯ ನೇತೃತ್ವದಲ್ಲಿ ಸಂವಿಧಾನವನ್ನು ದೇಶಿಯವಾಗಿ ರಚಿಸಿ, ನವೆಂಬರ್ 26, 1949ರಂದು ಆತ್ಮಾರ್ಪಣೆ ಮಾಡಿಕೊಳ್ಳಲಾಯಿತು.

ಸಂವಿಧಾನದ ಒಳಗೆ ಸುದೀರ್ಘವಾದ ವಿಧಿಗಳು, ನಿಯಮಗಳು, ಇದ್ದಾಗಿಯೂ ಅವುಗಳ ಒಟ್ಟಾರೆ ಪ್ರಧಾನ ಫಲಿತಾಂಶ ಪ್ರಜೆಗಳಿಗೆ ನೀಡಬಹುದಾದ ಗರಿಷ್ಠ ಹಕ್ಕುಗಳೇ ಆಗಿದ್ದವು.

ಸಂವಿಧಾನದ ಕುರಿತು ಮಾತನಾಡುವಾಗ ಅಂಬೇಡ್ಕರರು ನಾವು ಈ ಸಂವಿಧಾನದಲ್ಲಿ ಪ್ರಜೆಗಳಿಗೆ ವಿಶೇಷ ಮೂಲಭೂತ ಹಕ್ಕುಗಳನ್ನು ನೀಡಿದ್ದು, ಆದರಲ್ಲೂ ಅಂತಹ ಹಕ್ಕುಗಳಿಗೆ ಯಾವುದೇ ಧಕ್ಕೆ ತಗಲಿದರೂ, 32ನೇ ವಿಧಿಯ ಅನುಸಾರ ಸರ್ವೋಚ್ಚ ನ್ಯಾಯಾಲಯದ ರಕ್ಷಣೆ ಪಡೆಯುವಂತೆ ನಿಯಮ ಮಾಡಲಾಗಿದೆ, ಇದು ಸಂವಿಧಾನದ ಶ್ರೇಷ್ಠತೆಯ ಸೂಚಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

1946ರಿಂದ 1949ರ ಸಂವಿಧಾನ ರಚನಾ ಸಭೆಯ ಚರ್ಚೆಯ ವೇಳೆಯಲ್ಲಿ ವ್ಯಕ್ತಿಯ ವೈಯಕ್ತಿಕ ಮತ್ತು ಜೀವಿಸುವ ಹಕ್ಕು (20ಮತ್ತು 21ನೇ ವಿಧಿ) ಯಾವುದೇ ಸಂದರ್ಭದಲ್ಲಿ ನಿರ್ಬಂಧಕ್ಕೆ ಒಳಗಾಗಬಾರದು ಒಂದೊಮ್ಮೆ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಾದಾಗಲೂ ಈ ಹಕ್ಕುಗಳಿಗೆ ನಿರ್ಬಂಧ ಹೇರುವ ಅಧಿಕಾರ ಸರ್ಕಾರಗಳಿಗೆ ಇರುವುದಿಲ್ಲ ಎಂಬ ನಿಯಮವನ್ನು ತುಲನಾತ್ಮಕ ಚರ್ಚೆಯ ಮುಖಾಂತರ ಅಂಗೀಕಾರ ಮಾಡಿದ್ದರು.

ತುರ್ತು ಪರಿಸ್ಥಿತಿಗೆ 352, 356, 360ನೇ ವಿಧಿಗಳಲ್ಲಿ ಅವಕಾಶ ಕಲ್ಪಿಸುವಾಗಲೂ, ವ್ಯಕ್ತಿ ಪ್ರಧಾನವಾದ ಈ ಹಕ್ಕುಗಳು ನಿರ್ಬಂಧವಾಗಲೇ ಬಾರದೆಂಬ ಸದುದ್ದೇಶದಿಂದ ಸಂವಿಧಾನದ ಒಳಗೆ ಆ ನಿಬಂಧನೆಯನ್ನು ಹೇರಲಾಗಿತ್ತು. ಜೀವಿಸುವ ಹಕ್ಕನ್ನು ಕಸೆದುಕೊಳ್ಳುವುದು ಪ್ರಕೃತಿ ನಿಯಮಕ್ಕು ವಿರುದ್ಧವೇ ಹೌದು.

ಆದರೆ, ಇಂದಿಗೆ 51 ವರ್ಷಗಳ ಹಿಂದೆ ಸಂವಿಧಾನದ ಮತ್ತು ಸಂವಿಧಾನ ರಚನಾಕಾರರ ಆಶಯ ಸೋತು ಹೋಗಿತ್ತು ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ, ಹೇಗೆ ಪರತಂತ್ರ ಗೊತ್ತಿಲ್ಲದ ಯುವಕರು ಸ್ವಾತಂತ್ರ್ಯದ ಮಹತ್ವವನ್ನು ಪೂರ್ಣ ಪ್ರಮಾಣದಲ್ಲಿ ಅರಿಯಲಾರರೋ, ಹಾಗೆ ತುರ್ತು ಪರಿಸ್ಥಿತಿಯ ಸ್ವಅನುಭವವಿಲ್ಲದವರು ತುರ್ತು ಪರಿಸ್ಥಿತಿಯ ಕರಾಳತೆಯನ್ನು ಗುರುತಿಸಲಾರರು.

ಅಂದು ಜೂನ್ 25, 1975 ರಂದು ಪ್ರಧಾನಮಂತ್ರಿಯೊಬ್ಬರ ಅಧಿಕಾರದ ಉಳಿವಿಗಾಗಿ ಸಂವಿಧಾನ ಸೋತಿತ್ತು, ಪ್ರಜೆಗಳು ಸೋತಿದ್ದರು, ಹಕ್ಕುಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದವು.

ತುರ್ತು ಪರಿಸ್ಥಿತಿ ವೇಳೆ ಆರೆಸ್ಸೆಸ್ ಯುವ ಪ್ರಚಾರಕರಾಗಿದ್ದ ನರೇಂದ್ರ ಮೋದಿ

ಜೂನ್ 12, 1975 ಅಲಹಾಬಾದ್ ಹೈಕೋರ್ಟ್‌ನ ನ್ಯಾಯಾಧೀಶರಾದ ಜಗ ಮೋಹನ್ ಲಾಲ್ ಸಿನ್ಹಾ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಇಂದಿರಾ ಗಾಂಧಿಯವರ ಚುನಾವಣಾ ದಾವೆಯನ್ನು ಪರಿಶೀಲಿಸಿ,ಅವರ ಆಯ್ಕೆಯನ್ನು ಅಸಿಂಧುಗೊಳಿಸಿದರು, ಮುಂದುವರಿದು, ಮುಂದಿನ ಆರು ವರ್ಷಗಳವರೆಗೆ ಚುನಾವಣೆಗೂ ನಿಲ್ಲಬಾರದೆಂದು ಆದೇಶ ನೀಡಲಾಗಿತ್ತು.

ಇಂಥದ್ದೊಂದು ನ್ಯಾಯಾಂಗ ಆದೇಶದ ವಿರುದ್ಧ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಂವಿಧಾನಿಕ ನಿಯಮಗಳನ್ನೇ ಬುಡಮೇಲು ಮಾಡಿದ್ದು ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಅತ್ಯಂತ ಕರಾಳ ಅಧ್ಯಾಯ. ಹೈಕೋರ್ಟ್‌ನ ಆದೇಶದ ವಿರುದ್ಧ ಸುಪ್ರೀಂ ಕದ ತಟ್ಟಿದ್ದ ಇಂದಿರಾ ಗಾಂಧಿ ಅವರಿಗೆ ಜೂನ್ 24 ,1975ರಲ್ಲಿ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್‌ರವರು ಷರತ್ತು ಬದ್ಧ ತಡೆಒಡ್ಡಿದು, ಸಂಸತ್ತಿನ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವಂತಿಲ್ಲ ಎಂಬ ಆದೇಶವಿತ್ತಿದ್ದರು, ಜೂನ್ 25ರ ತಡರಾತ್ರಿಯಲ್ಲಿ ತುರ್ತು ಪರಿಸ್ಥಿತಿ ಎಂಬ ಸಂವಿಧಾನದ ಜಾಗೃತಿಕ ಶಕ್ತಿ ತಂಡವನ್ನು ಕೇವಲ ಅಧಿಕಾರದ ಉಳಿವಿಗಾಗಿ ರಾಷ್ಟ್ರದ ಮೇಲೆ ಹೇರಲಾಯಿತು.

1973ರ ಕೇಶವಾನಂದ ಭಾರತಿ/ವರ್ಸಸ್ ಕೇರಳ ಭಾರತದ ನ್ಯಾಯಾಂಗ ಇತಿಹಾಸದಲ್ಲೇ ಅತ್ಯಂತ ಪ್ರಮುಖ ನ್ಯಾಯಿಕ ವಿಮರ್ಶಾಧಿಕಾರಕ್ಕೆ ಸಾಕ್ಷಿಯಾದಂತ ಪ್ರಕರಣದಲ್ಲಿ ಸಂಸತ್ತು ಮಾಡುವ ಯಾವುದೇ ಸಾಂವಿಧಾನಿಕ ತಿದ್ದುಪಡಿಗಳು ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುವಂತಿಲ್ಲ ಎಂಬ ತೀರ್ಪಿನ ನಡುವೆಯೂ, ಜುಲೈ 24, 1975ಕ್ಕೆ ತಂದ 38ನೇ ತಿದ್ದುಪಡಿ(ರಾಷ್ಟ್ರಪತಿಗಳ ಘೋಷಿಸುವ ತುರ್ತು ಪರಿಸ್ಥಿತಿಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ), ಆಗಸ್ಟ್ 5 1975ರ 39ನೇ ತಿದ್ದುಪಡಿ (ರಾಷ್ಟ್ರಪತಿ, ಪ್ರಧಾನ ಮಂತ್ರಿ, ಸಭಾಪತಿ, ಉಪರಾಷ್ಟ್ರಪತಿಗಳ ಬಗ್ಗೆ ನ್ಯಾಯಾಲಯಗಳು ವಿಚಾರಣೆ ನಡೆಸುವಂತಿಲ್ಲ), 40ನೇ ತಿದ್ದುಪಡಿ (ದೇಶದ ಮಾಧ್ಯಮಗಳ ಮೇಲೆ ನಿರ್ಬಂಧ), ಆಗಸ್ಟ್ 9, 1975 41ನೇ ತಿದ್ದುಪಡಿ (ಪ್ರಧಾನಿ, ರಾಷ್ಟ್ರಪತಿ ಸ್ಪೀಕರ್, ರಾಜ್ಯಪಾಲರು ಅವರು ಹುದ್ದೆಗೆ ಬರುವುದಕ್ಕಿಂತ ಮೊದಲಿನ ಪ್ರಕರಣಗಳನ್ನು ನ್ಯಾಯಾಲಯಗಳು ವಿಚಾರಣೆ ಮಾಡುವಂತಿಲ್ಲ)

ಈ ತಿದ್ದುಪಡಿಗಳು ಇಂದಿರಾಗಾಂಧಿಯವರ ಅಧಿಕಾರವನ್ನು ರಕ್ಷಣೆ ಮಾಡುವಲ್ಲಿ ಯಶಸ್ವಿಯಾದದ್ದು ದಿಟ. ಆದರೆ, ಒಟ್ಟು ಭಾರತ ಅಪಜಯ ಕಂಡಿತ್ತು.

ಸಂವಿಧಾನ ಶಿಲ್ಪಿ ಅಂಬೇಡ್ಕರರ ಮಾತ್ತೊಂದು ಮಾತು ನೆನಪಾಗುತ್ತದೆ, ಸಂವಿಧಾನವೆಂಬ ಪ್ರಗತಿಯ ತೇರನ್ನು ಇಲ್ಲಿಯವರೆಗೆ ಎಳೆದು ತಂದಿದ್ದೇನೆ, ಸಾಧ್ಯವಾದರೆ ಮುಂದಕ್ಕೆ ತಳ್ಳಿ, ಆದರೆ ಹಿಂದಕ್ಕೆ ತಳ್ಳುವ ಕೆಲಸ ದಯವಿಟ್ಟು ಯಾರು ಮಾಡಬೇಡಿ.

ತುರ್ತು ಪರಿಸ್ಥಿತಿ ಇದಿಷ್ಟೇ ಅಸಂವಿಧಾನಿಕ ನಡೆಗಳಿಗೆ ನಿದರ್ಶನವೇ ಎಂದು ಅವಲೋಕಿಸಿದರೆ, ಪಟ್ಟಿ ಬೆಳೆಯುತ್ತದೆ, ಡಿಸೆಂಬರ್ 18, 1975 ಸಂವಿಧಾನಕ್ಕೆ ತಂದ 42ನೇ ತಿದ್ದುಪಡಿ, ಈ ತಿದ್ದುಪಡಿ ಮೂಲ ಸಂವಿಧಾನದ ಆಶಯಗಳಿಗೆ ತಿಲಾಂಜಲಿ ಇಟ್ಟ ಅಪಕೀರ್ತಿಗೆ ಭಾಜನವಾಗಿದೆ, ಎರಡು ವರ್ಷ 11 ತಿಂಗಳು 18 ದಿವಸ ಸಂವಿಧಾನ ರಚನಾಕಾರರು ತಮ್ಮ ಅದಮ್ಯವಾದ ಜ್ಞಾನ, ಚರ್ಚೆ, ಮೌಲ್ಯಮಾಪನದ ಜತೆಗೆ ಸಂವಿಧಾನಕ್ಕೆ ಕಟ್ಟಿಕೊಟ್ಟಿದ್ದ 395 ವಿಧಿಗಳಲ್ಲಿ 59 ವಿಧಿಗಳನ್ನು ಒಟ್ಟಿಗೆ ತಿರುಚಿದ ಕಪ್ಪು ದಿನವದು.

ಕೆಟಿಷಾ ಎಂಬುವರು 15, ನವಂಬರ್ 1948ರಲ್ಲಿ ಎರಡನೇ ಬಾರಿಗೆ ಅಂಬೇಡ್ಕರರ ಎದುರಿಗೆ ನಿಂತು ಜಾತ್ಯಾತೀತತೆ ಮತ್ತು ಸಮಾಜವಾದಿ ಪದವನ್ನು ಸಂವಿಧಾನದ ಭಾಗವನ್ನಾಗಿ ಮಾಡಬೇಕೆಂಬ ತಿದ್ದುಪಡಿ ಮಾಡಿಸಿದಾಗ, ಅಂಬೇಡ್ಕರರು ಅತ್ಯಂತ ಕಠೋರವಾಗಿ ಸದರಿ ತಿದ್ದುಪಡಿಗಳಿಗೆ ವಿರೋಧ ವ್ಯಕ್ತಪಡಿಸಿ ಈ ನೆಲದ ಗುಣಕ್ಕೆ ವಿರುದ್ಧವಾದ ಜಾತ್ಯಾತೀತತೆಯನ್ನು ಸಂವಿಧಾನದ ಭಾಗವನ್ನಾಗಿ ಮಾಡಲಾರೆ ಎಂದಿದ್ದರು.

ಇಂತಹ ಆಶಯವನ್ನು ಕಮರಿಸಿ ಪ್ರಸ್ತಾವನೆಗೆ ಎರಡು ಅಂಶಗಳನ್ನು ತುರುಕಲಾಯಿತು. (ಇದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ) ಒಂದೇ ತಿದ್ದುಪಡಿಯಲ್ಲಿ ಅದು ಕೇವಲ 26 ವರ್ಷಗಳ ಅಂತರದಲ್ಲಿ 59 ವಿಧಿಗಳನ್ನು ಮಾರ್ಪಡಿಸುವುದು ಎಂದರೆ, ಒಂದು ಸಂವಿಧಾನ ಅಷ್ಟು ಅಶಕ್ತವಾಗಿತ್ತೇ? ಅಥವಾ ಉದ್ದೇಶಪೂರ್ವಕವಾಗಿ ಅಶಕ್ತವಾಗಿಸಲಾಯಿತೇ? ಚರ್ಚಿತ ವಿಷಯ.

ಏಪ್ರಿಲ್ 28, 1976 ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎನ್. ರೇ, ಎಚ್.ಎಮ್ಬೆಗ್, ವೈ.ವಿ. ಚಂದ್ರಚೂಡ್, ಪಿ.ಎನ್. ಭಗವತಿ ಒಳಗೊಂಡ ನ್ಯಾಯಪೀಠವು ಅಂಬೇಡ್ಕರ್ ನೀಡಿದ್ದ ಹೇಬಿಯಸ್ ಕಾರ್ಪಸ್ (ನಾಗರೀಕನ ಅಕ್ರಮ ಬಂಧನ ಕುರಿತು ರಕ್ಷಣೆ) ಅರ್ಜಿಯನ್ನು ದಾಖಲಿಸುವ ಅಧಿಕಾರ ನಾಗರಿಕರಿಗಿಲ್ಲ ಎಂಬ ತೀರ್ಪು ನೀಡಿತು. (ನ್ಯಾಯಮೂರ್ತಿ ಎಚ್.ಆರ್. ಖನ್ನ ವಿರೋಧ ವ್ಯಕ್ತಪಡಿಸಿದ್ದರು).

ಬಹಳ ಮುಖ್ಯವಾಗಿ ಆ ಕಾಲಘಟ್ಟದಲ್ಲಿ ತಂದ ಮೀಸಾ ಕಾನೂನು1.1 ಲಕ್ಷ ಜನರನ್ನು ಬಂಧಿಸಿತ್ತು. ಈ ಕಾನೂನು ಜಗತ್ತಿನ ಯಾವ ಪ್ರಜಾಪ್ರಭುತ್ವ ರಾಷ್ಟ್ರ ಇಂದಿಗೂ ಜಾರಿಗೆ ತರಲಾರದಂತಹ ಅನಿರೀಕ್ಷಿಣವಾದದ್ದು. ಬಂಧನದ ಉದ್ದೇಶ, ಬಂಧಿತರ ಬಗೆಗಿನ ಮಾಹಿತಿ ಕೇಳುವುದೇ ಅಪರಾಧ ಎನ್ನುವ ಈ ಕಾನೂನು, ಅಂಬೇಡ್ಕರರ, ಸಂವಿಧಾನದ ಮಾನವ ಸ್ಫೂರ್ತಿಯನ್ನೇ ತಿರಸ್ಕರಿಸಿ ನಿಂತದ್ದು.

ಸಂಸತ್ತು ನಡೆಸಲು ಕೋರಮ್ ಅಗತ್ಯವಿಲ್ಲವೆಂಬ ನಿಯಮ ಜಾರಿ, ಕೇವಲ ನಾಲ್ಕು ದಿನಗಳಲ್ಲಿ ಸಂವಿಧಾನಕ್ಕೆ ಮಹತ್ವದ ತಿದ್ದುಪಡಿಗಳನ್ನು ತಂದದ್ದು, 253 ಪತ್ರಕರ್ತರ ಬಂಧನ, ಈ ಎಲ್ಲಾ ಅವಗಡಗಳನ್ನು ಗಮನಿಸಿದಾಗ ಇಂದಿರಾಗಾಂಧಿಯವರನ್ನು ಅಲಹಾಬಾದ್ ಕೋರ್ಟು ಸೋಲಿಸುವ ಬದಲು ಗೆಲ್ಲಿಸಿ ಬಿಡಬೇಕಿತ್ತೇನೋ ಎನಿಸುತ್ತದೆ.

ಕೋರ್ಟ್ ಇಂದಿರಾ ಗಾಂಧಿಯನ್ನು ಸೋಲಿಸುವಾಗ, ತಾನು ಸೋಲಬಹುದು, ಪ್ರಜಾಪ್ರಭುತ್ವವು ಸೋಲಬಹುದು, ಸಂವಿಧಾನವು ಸೋಲಬಹುದು, ದೇಶವೇ ಸೋಲಬಹುದೆಂದು ಎಣಿಸಿರಲಾರದು.

ಸಂವಿಧಾನ ಮೀರುವ, ಪ್ರಜಾಪ್ರಭುತ್ವ ವಿರೋಧಿಸುವ, ಪ್ರವೃತ್ತಿ ಕಾಂಗ್ರೆಸ್‌ಗೆ ಆರಂಭದಿಂದಲೂ ಬಂದ ಬಳುವಳಿ. ಏಕಾಏಕಿ 1975ರಲ್ಲಿ ಹೇರಿದ್ದಲ್ಲ.



ಬದಲಾಗಿ ಇದಕ್ಕೊಂದು ದೊಡ್ಡ ಹಿನ್ನೆಲೆಯೂ ಇದೆ. ಕೀನ್ಯಾ ದೇಶಕ್ಕೆ ಭೇಟಿ ಕೊಟ್ಟಾಗ ಇಂದಿರಾ ಗಾಂಧಿಯವರು, ದೇಶವನ್ನು ಬಲಾಢ್ಯವಾಗಿ ಕಟ್ಟಲು, ಬಡತನವನ್ನು ದೂರ ಮಾಡಲು ನಿರಕ್ಷರತೆಯನ್ನು ಕೊನೆಗಾಣಿಸಲು ಯಾವ ಪ್ರತಿಪಕ್ಷವೂ ಇಲ್ಲದಿರುವುದೇ ವಾಸಿ ಎಂಬ ಸರ್ವಾಧಿಕಾರದ ಸಮರ್ಥನೆ ಮಾತನ್ನು ಆಡಿದ್ದರು. (ವೈ ಎಮರ್ಜೆನ್ಸಿ? – ಆಮಿಯ ರಾವ್)

1973ರಲ್ಲಿ ಕಾಂಗ್ರೆಸ್ ಸಂಸತ್ ಸದಸ್ಯ ಶಶಿಭೂಷಣ್ ಭಾರತಕ್ಕೆ ಮರ್ಯಾದಾಧಾರಿತ ಸರ್ವಾಧಿಕಾರಿ ಸೂಕ್ತ ಎಂದು ಹೇಳಿದ್ದರು.

ಬಾಂಗ್ಲಾದೇಶದಲ್ಲಿ ಶೇಕ್ ಮುಜುಬೂರ್, ಸಂಸದೀಯ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಿ ಅಧ್ಯಕ್ಷ ಪದ್ಧತಿಯನ್ನು ಜಾರಿಗೆ ತಂದಾಗ ಇಂದಿರಾಗಾಂಧಿ ಅವರು ಆ ಕ್ರಮವನ್ನು ಸ್ವಾಗತಿಸಿ 1975ರಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ಸಂದರ್ಶನ ನೀಡಿದ್ದರು.

ಈ ವೇಳೆ ಮಾತನಾಡುತ್ತಾ ಮೂಲಭೂತ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಹಲವಾರು ದೇಶಗಳು ಜನತಂತ್ರ ವಿಧಾನವನ್ನು ಕೈಬಿಟ್ಟಿವೆ. ಏಕೆಂದರೆ ಆಗ ದೇಶದ ಅಡಿಪಾಯವನ್ನು ಹಾಕಬೇಕಾಗಿರುತ್ತದೆ ಆಡಿಪಾಯ ಆಗದಿದ್ದರೆ, ಮುಂದೆ ಏನು ಮಾಡಲಿಕ್ಕೂ ಆಗದು ಎಂದಿದ್ದರು.

ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಬರುವಾ, ಭಾರತದಲ್ಲಿ ಸದ್ಯಕ್ಕೆ ವಿರೋಧ ಪಕ್ಷ ಅಪ್ರಸ್ತುತ ಎನ್ನುತ್ತಾ, 1975 ಜೂನ್ 18ರ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಇಂದಿರಾ ಅಂದರೆ ಇಂಡಿಯಾ ಅಂದರೆ ಇಂದಿರಾ ಎಂಬ ಸರ್ವಾಧಿಕಾರಿ ಹೇಳಿಕೆ ನೀಡಿದ್ದರು. ಇಂತಹ ಘಟನಾವಳಿಗಳನ್ನು ಪರಾಮರ್ಶೆ ಮಾಡಿದರೆ, ಕಾಂಗ್ರೆಸ್ ಮತ್ತು ಅದರ ನಾಯಕರು ಸಂವಿಧಾನದ ಮೇಲೆ ಮಾಡಿದ ಆಕ್ರಮಣ ಪೂರ್ವ ನಿಯೋಜಿತ ಎಂಬುದು ಲಭ್ಯವಾಗುವ ಸತ್ಯ.

ದೇಶ ಇಂತ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾಗ ಆ

ತಿಂಗಳೊಳಗೆ ಕೆಕೆಆರ್‌ಡಿಬಿ ಕಾರ್ಯದರ್ಶಿ ನೇಮಿಸಿ: ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾತ್ರ ನೇಮಕ ಮಾಡಬೇಕು ಎಂಬುದು ದೋಷಪೂರಿತ ವಾದ ಎಂದು ಕರ್ನಾಟಕ ಹೈಕೋರ್ಟ್ ಬುಧವಾರ ಹೇಳಿದ್ದು, ತಿಂಗಳಲ್ಲಿ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಕೆಕೆಆರ್‌ಡಿಬಿ ಕಾರ್ಯದರ್ಶಿಯನ್ನಾಗಿ ನೇಮಿಸಬೇಕು ಎಂದು ನಿರ್ದೇಶಿಸಿದೆ.

ಕೆಕೆಆರ್‌ಡಿಬಿ ಅಧ್ಯಕ್ಷರಾಗಿರುವ ಡಾ.ಅಜಯ್ ಸಿಂಗ್ ನೇಮಕಾತಿ ಮತ್ತು ಕೊಪ್ಪಳ ಜಿಲ್ಲಾಧಿಕಾರಿ ನಳಿನಿ ಅತುಲ್ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿರುವುದು ಹಾಗೂ ಕೆಕೆಆರ್‌ಡಿಬಿಯಲ್ಲಿನ ಅಕ್ರಮದ ತನಿಖೆಗೆ ನಿರ್ದೇಶಿಸುವಂತೆ ಕೋರಿ ಅಹಿಂದ ಚಿಂತಕರ ವೇದಿಕೆಯ ಸಾಯಿಬಣ್ಣಾ ಜಮಾದಾರ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠವು ಇತ್ಯರ್ಥಪಡಿಸಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ 2013 ಆದೇಶಕ್ಕೆ ತಿದ್ದುಪಡಿ ಮಾಡಿ, 2020ರ ಜ. 27ರಂದು ಹೊರಡಿಸಿರುವ ಆದೇಶವನ್ನು ಉಲ್ಲೇಖಿಸಿದರು. ತಿದ್ದುಪಡಿಯಲ್ಲಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಪೈಕಿ ಒಂದು ಜಿಲ್ಲಾ ಉಸ್ತುವಾರಿ ಸಚಿವರು ಎಂದಿದ್ದನ್ನು ಕೈಬಿಟ್ಟು, ನಾಮನಿರ್ದೇಶನ ಮಾಡಲ್ಪಟ್ಟ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಿಸಬಹುದು ಎಂದು ತಿದ್ದುಪಡಿ ಮಾಡಲಾಗಿದೆ ಎಂದು ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಪೀಠದ ಗಮನಕ್ಕೆ ತಂದರು.

ಇದನ್ನು ಒಪ್ಪಿದ ಪೀಠವು ಸಚಿವರನ್ನು ಮಾತ್ರ ಕೆಕೆಆರ್‌ಡಿಬಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು ಎಂಬ ಅರ್ಜಿದಾರರ ವಾದ ದೋಷಪೂರಿತವಾಗಿದೆ ಎಂದಿತು. ಇನ್ನು ಕಾರ್ಯದರ್ಶಿ ನೇಮಕಕ್ಕೆ ಸಂಬಂಧಿಸಿದಂತೆ 4 ವಾರಗಳಲ್ಲಿ ಅಗತ್ಯವಾದ ಆದೇಶ ಹೊರಡಿಸಲಾಗುವುದು ಎಂದು ಅಡ್ವೊಕೇಟ್ ಜನರಲ್ ತಿಳಿಸಿದರು. ಈ ಹೇಳಿಕೆಯನ್ನು ದಾಖಲಿಸಿಕೊಂಡ ಪೀಠವು 4 ವಾರಗಳಲ್ಲಿ ಕೆಕೆಆರ್‌ಡಿಬಿಗೆ ಸೂಕ್ತ ಅರ್ಹತೆ ಹೊಂದಿರುವ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಬೇಕು ಎಂದು ನಿರ್ದೇಶಿಸಿತು.

ರಾಮ ಬಾಣ



ಸ್ವಾತಂತ್ರ್ಯ ದಿನಾಚರಣೆಗೆ ಸ್ಪರ್ಧೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ-2026ರ ಅಂಗವಾಗಿ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮತ್ತು ರಾಷ್ಟ್ರಭಕ್ತಿಯನ್ನು ಉತ್ತೇಜಿಸುವ ಉದ್ದೇಶದಿಂದ ಸಮಗ್ರ ಶಿಕ್ಷಣ ಕರ್ನಾಟಕವು ರಕ್ಷಣಾ ಸಚಿವಾಲಯ, ಮೈ ಗೌ (ಎಂವೈ, ಜಿಒವಿ) ಹಾಗೂ ಮೈ ಭಾರತ್ ಸಹಯೋಗದೊಂದಿಗೆ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ವಿವಿಧ ಆನ್‌ಲೈನ್ ಸ್ಪರ್ಧೆಗಳನ್ನು ಆಯೋಜಿಸಿದೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಜು.17ರವರೆಗೆ ಅವಕಾಶ ಕಲ್ಪಿಸಲಾಗಿದೆ.

2047ರ ಒಳಗೆ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣದಲ್ಲಿ ಕೃತಕ ಬುದ್ಧಿಮತ್ತೆ (ಎಐ)ಯ ಪಾತ್ರ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. 500 ರಿಂದ 600 ಪದಗಳ ಮಿತಿಯಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ (ದ್ವಿ ಭಾಷೀಯ) ಪ್ರಬಂಧ ಬರೆಯಬೇಕಿದ್ದು, ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ.

ಇದೇ ವೇಳೆ ಭಾರತ 1947ರಿಂದ ಭಾರತ 2047ರ ವಿಷಯದ ಅಡಿಯಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಬಹುಮಾನ ಹಾಗೂ 20 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ವಿವಿಧ ಕ್ಷೇತ್ರಗಳ ಸಾಧನೆಗಳ ಕುರಿತು ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲಭ್ಯವಿರುವ ಈ ಸ್ಪರ್ಧೆಯಲ್ಲಿ 5 ನಿಮಿಷಗಳ ಅವಧಿಯಲ್ಲಿ 20 ಪ್ರಶ್ನೆಗಳಿಗೆ ಉತ್ತರಿಸಬೇಕಿದೆ. ಮೊದಲ ಮೂರು ವಿಜೇತರಿಗೆ ತಲಾ 15 ಸಾವಿರ ರೂ. ಹಾಗೂ 50 ಸಮಾಧಾನಕರ ಬಹುಮಾನಗಳಾಗಿ ತಲಾ 5 ಸಾವಿರ ರೂ. ನೀಡಲಾಗುತ್ತದೆ. ಪ್ರಬಂಧ, ಚಿತ್ರಕಲೆ ಮತ್ತು ರಸಪ್ರಶ್ನೆ ಸ್ಪರ್ಧೆಗಳಲ್ಲಿ ಆಯ್ಕೆಯಾಗುವ ತಲಾ 200 ಅಗ್ರ ಸ್ಪರ್ಧಿಗಳಿಗೆ ಅವರೊಬ್ಬ ಸಹಚರರೊಂದಿಗೆ ಆ.15ರಂದು ದಿಲ್ಲಿಯ ಕೆಂಪುಕೋಟೆಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ವೀಕ್ಷಿಸಲು ಇ-ಆಹ್ವಾನ ಪತ್ರಿಕೆ ನೀಡಲಾಗುತ್ತದೆ. ಆದರೆ ಪ್ರಯಾಣ, ವಸತಿ ಮತ್ತು ಆಹಾರ ವೆಚ್ಚವನ್ನು ಸ್ಪರ್ಧಿಗಳೇ ಭರಿಸಬೇಕಾಗುತ್ತದೆ ಎಂದು ಸಮಗ್ರ ಶಿಕ್ಷಣ ಕರ್ನಾಟಕ ಸೂಚನೆ ನೀಡಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ,
ದಕ್ಷಿಣಾಯನ, ಗ್ರೀಷ್ಮ ಋತು,
ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ,
ನಕ್ಷತ್ರ: ಸ್ವಾತಿ

ದಿನದ ಮಾತು

ಕೆಡುಕಿನ ಮನೋಭಾವದವನಿಗೆ ಸಂತಸವೆಂಬುದು ಯಾವಾಗಲೂ ಮರೀಚಿಕೆಯೇ.

▲ಗೌತಮ ಬುದ್ಧ

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡಬೇಕೇ ಹೊರತು ಅಲ್ಪಜ್ಞಾನಿಗಳು ತಾವು ಹೇಳಿದ್ದೇ ಧರ್ಮ ಅಂತ ಬಿಂಬಿಸಿಕೊಂಡು ಸಮಾಜವನ್ನು ತಪ್ಪು ದಾರಿಗೆ ಎಳೆಯುವುದು ಸರಿಯಲ್ಲ
- ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ
- ಧರ್ಮವನ್ನು ವ್ಯಾಪಾರವನ್ನಾಗಿ ಮಾಡಿಕೊಳ್ಳುವ ಮಂದಿಗೆ ಅದೆಲ್ಲ ಬೇಕಿಲ್ಲ, ವ್ಯಾಪಾರವೇ ಅವರ ಧರ್ಮ!

ದಿನ ಭವಿಷ್ಯ

ಮೇಷ
ನಿಮ್ಮ ನಡೆ ಕೆಲವರಿಗೆ ತಪ್ಪರ್ಥ ಮೂಡಿಸಬಹುದು. ಅಸಮಾಧಾನ ತರುವ ಬೆಳವಣಿಗೆ. ಆಪ್ತ ಬಂಧು ಭೇಟಿಯಿಂದ ಸಮಾಧಾನ.

ವೃಷಭ
ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ವರ್ತಿಸಬೇಡಿ. ಶೀತ, ಜ್ವರದ ಸಮಸ್ಯೆ ಕಾಡಬಹುದು.

ಮಿಥುನ
ಕೆಲದಿನಗಳ ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ.

ಕಟಕ
ಆರ್ಥಿಕ ಪ್ರಗತಿ ಉತ್ತಮ. ಆದರೆ ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ಸಿಂಹ
ಅನ್ಯರ ಮೆಚ್ಚಿಸಲು ಅನವಶ್ಯ ಪ್ರಯತ್ನ ಬೇಡ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಕೌಟುಂಬಿಕ ಬಿಕ್ಕಟ್ಟು ಪರಿಹಾರ ಕಷ್ಟವಾದೀತು.

ಕನ್ಯಾ
ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಆನಿರೀಕ್ಷಿತ ಖರ್ಚು ಬಂದೀತು. ಆತ್ಮೀಯ ಬಂಧು ಭೇಟಿ.

ತುಲಾ
ನಡೆನುಡಿಯಲ್ಲಿ ಎಚ್ಚರ ವಹಿಸಿ. ಜಗಳಕ್ಕೆ ಆಸ್ಪದ ಕೊಡಬೇಡಿ. ಗೌರವಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ವೃಶ್ಚಿಕ
ಜೀವನದ ಹೊಸ ಪಾಠ ಕಲಿಯುವಂತಹ ಪ್ರಸಂಗ ಸಂಭವ. ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಧನು
ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಆದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಮಕರ
ನಿಮ್ಮ ಪಾಲಿಗೆ ಮಹತ್ವದ ದಿನ. ಬಯಸಿದ ಬೆಳವಣಿಗೆ ಸಂಭವ. ದೊಡ್ಡ ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ಕುಂಭ
ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಇರಲಿ.

ಮೀನ
ಈ ದಿನ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಮನೆಯಲ್ಲಿ ಕಲಹವಾದೀತು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 2,7,5,1

ನಾಲ್ವರು ಜಲಸಮಾಧಿ

ಮಂಡ್ಯ: ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆಯಲು ಹೋದ ಒಂದೇ ಕುಟುಂಬದ ಓರ್ವ ವ್ಯಕ್ತಿ, ನಾಲ್ಕು ಮಹಿಳೆಯರು ಸೇರಿದಂತೆ ಐವರು ಜಲ ಸಮಾಧಿಯಾಗಿರುವ ಘಟನೆ ಮಳವಳ್ಳಿ ತಾಲೂಕಿನ ಮುತ್ತತ್ತಿ ಬಳಿ ನಡೆದಿದೆ. ಚನ್ನಪಟ್ಟಣ ತಾಲೂಕಿನ ಬ್ಯಾಡರಹಳ್ಳಿಯ ಚೈತ್ರಾ (20), ಶ್ವೇತಾ(38), ವಿಜಯಮ್ಮ (50), ಪ್ರಿಯಾಂಕ(28) ಹಾಗೂ ಮಹೇಶ್ (30) ಎಂಬುವರೇ ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ಮುತ್ತತ್ತಿಯ ಮುತ್ತುರಾಯಸ್ವಾಮಿ ದೇವಾಲಯಕ್ಕೆ ಆಗಮಿಸಿದ್ದ ಮಹೇಶ್ ಇತರರು, ಬುಧವಾರ ಸಂಜೆ ಸುಮಾರು 5 ಗಂಟೆ ಸಮಯದಲ್ಲಿ ಕಾವೇರಿ ನದಿ ಬಳಿ ಸೆಲ್ಫಿ ತೆಗೆದುಕೊಳ್ಳಲು ಹೋಗಿದ್ದಾರೆ. ಕಾಲೇಜು ನದಿಯಲ್ಲಿ ಬಿದ್ದು ಜಲಸಮಾಧಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉ.ಪ್ರ.ಜಾಗತಿಕ ಬೆಳವಣಿಗೆ ಸಂವಾದ: ಹೂಡಿಕೆದಾರರ ರೋಡ್ ಶೋ

ಉ.ಪ್ರ.ಪ್ರಗತಿಗೆ ಯೋಗಿ ಹೆಮ್ಮೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ವಿಕಾಸದ ಹೊಸ ಆಯಾಮ ಸೃಷ್ಟಿಸಿದೆ. ಭಾರತದ ಕುರಿತ ಜಗತ್ತಿನ ದೃಷ್ಟಿಕೋನವನ್ನು ಅವರು ಬದಲಿಸಿದ್ದಾರೆ. ಜಾಗತಿಕ ಹೂಡಿಕೆಯನ್ನು ಭಾರತ ಆಕರ್ಷಿಸುತ್ತಿದೆ. ಉತ್ತರ ಪ್ರದೇಶವು ಕಳೆದ 9 ವರ್ಷಗಳಲ್ಲಿ ಭಾರತದ ಪ್ರಗತಿಯಲ್ಲಿ ಸಹಭಾಗಿಯಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.

ನಗರದ ಖಾಸಗಿ ಹೊಟೇಲಿನಲ್ಲಿ ಬುಧವಾರ ಆಯೋಜಿಸಿದ ಉತ್ತರ ಪ್ರದೇಶ ಜಾಗತಿಕ ಬೆಳವಣಿಗೆ ಸಂವಾದ- 2026 ಹೂಡಿಕೆದಾರರ ರೋಡ್ ಶೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ 9 ವರ್ಷಗಳ ಉ.ಪ್ರದೇಶದ ಪ್ರಗತಿಯನ್ನು ಅವಲೋಕನ ಮಾಡಬೇಕು. ಇದಕ್ಕಾಗಿ ಖುದ್ದು ಉ.ಪ್ರದೇಶಕ್ಕೆ ಬಂದು ನಮ್ಮ ರಾಜ್ಯದ ವಿಕಾಸವನ್ನು ಕಣ್ತುಂಬಿಕೊಳ್ಳಬಹುದು. 9 ವರ್ಷಕ್ಕೂ ಮುನ್ನ ಯುಪಿಯಲ್ಲಿ ಸಮರ್ಥ ಆಡಳಿತವಿರಲಿಲ್ಲ, ರಾಜ್ಯದಲ್ಲಿ ಅಭಿವೃದ್ಧಿ ಹೆಸರೇ ಇರಲಿಲ್ಲ, ಉತ್ತರ ಭಾರತದ ರೋಗಗ್ರಸ್ತ ರಾಜ್ಯಗಳಲ್ಲಿ ಉ.ಪ್ರದೇಶವೂ ಒಂದಾಗಿತ್ತು. ಕೆಟ್ಟ ವಾತಾವರಣ ಅಲ್ಲಿತ್ತು. ಈಗಿನ ಉತ್ತರ ಪ್ರದೇಶದ ಬಗ್ಗೆ ಹೇಳಲು ನನಗೆ ಬಹಳ ಸಂತೋಷವಾಗುತ್ತಿದೆ. ಈಗ ಅಲ್ಲಿ ಎಲ್ಲವೂ ಇದೆ, ಅಲ್ಲಿರುವುದು ಬೇರೆ ಕಡೆ ಇಲ್ಲ, ಬೇರೆ ಕಡೆ ಇರುವುದೆಲ್ಲವೂ ಅಲ್ಲಿನ ಯಾವುದಾದರೊಂದು ಕಡೆ ಸಿಗುತ್ತದೆ ಎಂದು ವಿವರಿಸಿದರು.

ಕೇವಲ ಕೈಗಾರಿಕೆಗಳಿಗೆ ಮಾತ್ರವಲ್ಲದೇ ಉತ್ತರ ಪ್ರದೇಶದಲ್ಲಿ ಕೃಷಿಗೂ ಉತ್ತಮ ಅವಕಾಶಗಳಿವೆ. ಐದು ಕೃಷಿ ವಿಶ್ವವಿದ್ಯಾಲಯಗಳಿವೆ. ಕೃಷಿ ಕ್ಷೇತ್ರ

ಉತ್ತರ ಪ್ರದೇಶವು ಪ್ರಸಕ್ತ ಸುರಕ್ಷಿತವಾಗಿದೆ. ನಮ್ಮ ಆರ್ಥಿಕ ನೀತಿಗಳಿಂದ ಜಗತ್ತಿಗೆ ನಮ್ಮ ಮೇಲೆ ವಿಶ್ವಾಸ ಬರುತ್ತಿದೆ. ಕಡಿಮೆ ಬೆಲೆ ಭೂಮಿ ಸಿಗುತ್ತಿದೆ. ಉತ್ತಮ ಸಂಪರ್ಕ ವ್ಯವಸ್ಥೆ, ಮೂಲ ಸೌಕರ್ಯವಿದೆ. ರಾಜ್ಯದ ಆರ್ಥಿಕತೆಯನ್ನು 1 ಟ್ರಿಲಿಯನ್ ಡಾಲರ್‌ಗೇರಿಸಲು ಗುರಿ ಇಟ್ಟುಕೊಳ್ಳಲಾಗಿದೆ.
■ ಸುರೇಶ್ ಕುಮಾರ್ ಖನ್ನಾ, ಉತ್ತರ ಪ್ರದೇಶದ ವಿತ್ತ ಸಚಿವ

ಡಬಲ್ ಡೆಕ್ಕರ್ ಸರ್ಕಾರದಿಂದ ಅಭಿವೃದ್ಧಿ

ಕಳೆದ 9 ವರ್ಷಗಳಿಂದ ಉತ್ತರ ಪ್ರದೇಶದಲ್ಲಿ ಡಬಲ್ ಇಂಜಿನ್ ಸರ್ಕಾರ ಸುರಕ್ಷೆ ಹೆಚ್ಚಿಸಿದೆ. ಉತ್ತರ ಪ್ರದೇಶದ ಆರ್ಥಿಕತೆ ಮೂರು ಪಟ್ಟು ಹೆಚ್ಚಾಗಿದೆ, ತಲಾದಾಯ ಮೂರು ಪಟ್ಟು ಜಾಸ್ತಿಯಾಗಿದೆ. ಹೂಡಿಕೆ ಅವಕಾಶಗಳು ಹಿಂದಿಗಿಂತಲೂ ಹೆಚ್ಚಾಗಿವೆ. 75 ಸಾವಿರ ಎಕರೆಗಳಷ್ಟು ಭೂ ಬ್ಯಾಂಕ್ ಉತ್ತರ ಪ್ರದೇಶದಲ್ಲಿದೆ. ದೇಶದ ಅತೀ ದೊಡ್ಡ ಗಂಗಾ ಎಕ್ಸ್‌ಪ್ರೆಸ್‌ವೇ, ದೇಶದ ಮೊದಲ ಒಳನಾಡು ಜಲಮಾರ್ಗ, ಐದು ಅಂತಾರಾಷ್ಟ್ರೀಯ ಮತ್ತು 16 ದೇಶೀಯ ವಿಮಾನ ನಿಲ್ದಾಣಗಳಿವೆ. ಇನ್ನೂ ಐದು ವಿಮಾನ ನಿಲ್ದಾಣಗಳ ನಿರ್ಮಾಣ ನಡೆಯುತ್ತಿದೆ. ಎರಡು ಐಐಟಿಗಳಿವೆ, ಕೌಶಲಯುತ ಮಾನವಶಕ್ತಿ ಇದೆ. ದೇಶದ ಮೊದಲ ಸ್ಪೀಡ್ ರೈಲು ದಿಲ್ಲಿ ಮೀರತ್ ನಡುವೆ ಓಡುತ್ತಿದೆ ಎಂದು ತಿಳಿಸಿದರು.

ದಲ್ಲೂ ಪ್ರಗತಿ ಸಾಧಿಸಿದೆ. ಬಂಡವಾಳ ಹೂಡಲು ಉತ್ತರ ಪ್ರದೇಶ ಹೇಳಿ ಮಾಡಿಸಿದಂತಿದೆ. ಭಾರತ, ಉತ್ತರ ಪ್ರದೇಶದ ಪ್ರಗತಿಯಲ್ಲಿ ಉದ್ಯಮಿಗಳ ಪಾತ್ರ ದೊಡ್ಡದು. ಏಕಗವಾಕ್ಷಿ ವ್ಯವಸ್ಥೆಯ್ಯು ಮಿಗಳಿಗೆಸಿಗಲಿದೆ, ಉದ್ಯಮಗಳಿಗೆ ಭಾರೀ ಸುರಕ್ಷೆ ಒದಗಿಸಲಾಗುತ್ತದೆ. ಆದ್ದರಿಂದ ಉತ್ತರ ಪ್ರದೇಶಕ್ಕೆ ಬನ್ನಿ ಎಂದು ಯೋಗಿ ಆದಿತ್ಯನಾಥ್ ಆಹ್ವಾನಿಸಿದರು.

ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ವಿತ್ತ ಸಚಿವ ಸುರೇಶ್ ಕುಮಾರ್ ಖನ್ನಾ ಹಾಗೂ ಉ.ಪ್ರದೇಶ ಸರ್ಕಾರದ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮತ್ತೊಂದು ಗಾಲ್ಫ್ ಕೋರ್ಸ್ ನಿರ್ಮಿಸಿದರೆ ಕ್ಲಬ್‌ನ 150 ವರ್ಷಗಳ ಸಂಭ್ರಮಕ್ಕೆ ಅರ್ಥ ಬರುತ್ತದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಸ್ಯಾಂಕಿ ರಸ್ತೆಯ ಗಾಲ್ಫ್ ಕ್ಲಬ್ ನಲ್ಲಿ ಬುಧವಾರ ನಡೆದ ಬೆಂಗಳೂರು ಗಾಲ್ಫ್ ಕ್ಲಬ್‌ನ 150ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, 150 ವರ್ಷದ ಇತಿಹಾಸವಿರುವ ಗಾಲ್ಫ್ ಕ್ಲಬ್, ಇಷ್ಟು ಹೊತ್ತಿಗೆ ಬೆಂಗಳೂರಿನಲ್ಲಿ ಮೂರ್ನಾಲ್ಕು ಗಾಲ್ಫ್ ಕೋರ್ಸ್ ನಿರ್ಮಿಸಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಬೊಮ್ಮಯಿ ಅವರಾಗಿದ್ದ ಕಾರಣಕ್ಕೆ ನಿಮಗೆನೀಡಲಾಗಿರುವ ಅನುಮತಿಯನ್ನು ನವೀಕರಿಸಿದ್ದಾರೆ. ನಾನಾಗಿದ್ದರೆ ನವೀಕರಣ ಮಾಡುತ್ತಿರಲಿಲ್ಲ. ನಾನು ಅನುಮತಿ ನವೀಕರಿಸಬೇಕಾದರೆ ಮುಂದಿನ ಪೀಳಿಗೆಗೆ ಒಂದೆರಡು ಗಾಲ್ಫ್ ಕೋರ್ಸ್ ಆರಂಭಿಸಿ ಎಂದು ಷರತ್ತು ಹಾಕುತ್ತಿದ್ದೆ. ನಾನು ಇತಿಹಾಸ ಓದುವುದಕ್ಕಿಂತ ಇತಿಹಾಸ ಬರೆಯುವುದರಲ್ಲಿ ಆಸಕ್ತಿ ಹೊಂದಿದ್ದೇನೆ. ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ. ಟೀಕೆ ಮಾಡುವವರು ಮಾಡುತ್ತಾರೆ ಎಂದರು.

ಗಾಲ್ಫ್ ಕ್ಲಬ್ 150 ವರ್ಷ ಪೂರ್ಣಗೊಳಿಸಿದೆ. ಈ ಸಂದರ್ಭದಲ್ಲಿ ಎಲ್ಲರಿಗೂ ಅಭಿನಂದನೆಗಳು. ನಾನು ಮುಖ್ಯಮಂತ್ರಿಯಾದ ಬಳಿಕ ನಾನು ಭಾಗವಹಿಸುತ್ತಿರುವ ಮೊದಲ ಖಾಸಗಿ ಕಾರ್ಯಕ್ರಮ. ನಾನು ಸಿಎಂ ಎನ್ನುವುದಕ್ಕಿಂತ ಇಲ್ಲಿನ ಸದಸ್ಯ. ಹೀಗಾಗಿ ಬಂದಿದ್ದೇನೆ. ನನ್ನ ಮಾತು ನಿಮಗೆ ಹಿತವಾಗಿರುವುದಿಲ್ಲ, ನಿಮ್ಮ ಚಪ್ಪಾಳೆ ಬೇಡ. ನಿಮಗೆ ಇಷ್ಟವಾಗುತ್ತದೆಯೋ ಇಲ್ಲವೋ ಆದರೆ ನಾನು ಸತ್ಯ ನುಡಿಯಬೇಕು ಎಂದರು.

ಪಾರ್ಕ್ ನಿರ್ಮಾಣ

**ಬೆಂಗಳೂರಿನಲ್ಲಿ ಹಸಿರು ಹೆಚ್ಚಿಸಲು ನನಗೆ ಆಸಕ್ತಿ ಇದೆ. ಕಬ

ಸಂಪುಟ ಶೀಘ್ರ ವಿಸ್ತರಣೆ: ಪಾಟೀಲ

• **ಕಲಬುರಗಿ:** ಕ್ಯಾಬಿನೆಟ್ ವಿಸ್ತರಣೆ ಬಗ್ಗೆ ಅಧಿಕೃತವಾಗಿ ಘೋಷಿಸಲು ನಾನೇನು ಹೈಕಾಮಾಂಡ್ ಅಲ್ಲ. ಆದರೆ, ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಈ ಕುರಿತು ಹೈಕಮಾಂಡ್ ನಾಯಕರ ಜತೆ ಮಾತುಕತೆ ನಡೆಸಿಲಿದ್ದಾರೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ರಾಜಕಾರಣದ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆಗಳ ಪ್ರಕ್ರಿಯೆ ಮುಗಿದ ಬಳಿಕ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಿಎಂ ಅವರೇ ಹೇಳಿದ್ದಾರೆ. ಈಗ ಚುನಾವಣೆ ಮುಗಿದಿವೆ. ಹಾಗಾಗಿ, ಶೀಘ್ರದಲ್ಲೇ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ನೇಮಕವೂ ಪ್ರಕಟಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ರಾಮ ಮಂದಿರ ಸ್ಫೋಟಕ್ಕೆ ಉಗ್ರ ಸಂಚು

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಬನ್ನಿಕೋಡು ಗ್ರಾಮದಲ್ಲಿ ಬಂಧಿತನಾಗಿದ್ದ ಶಂಕಿತ ಉಗ್ರ ಸೊಹೇಲ್, ತಾನು ಅಯೋಧ್ಯೆ ರಾಮ ಮಂದಿರವನ್ನು ಬಾಂಬ್ ಇಟ್ಟು ಸ್ಫೋಟಿಸಲು ಬಯಸುವುದೂ ಸೇರಿದಂತೆ ದೇಶದ ರಕ್ಷಣೆಗೆ ಧಕ್ಕೆ ತರುವಂತಹ ಆಡಿಯೋ, ಸಂದೇಶಗಳನ್ನು ಪಾಕಿಸ್ತಾನ ಮೂಲದ ರಾಣಾ ಎಂಬ ವ್ಯಕ್ತಿಯೊಂದಿಗೆ ವಿನಿಮಯ ಮಾಡಿಕೊಂಡಿದ್ದ ಸಂಗತಿ ಹೊರ ಬಿದ್ದಿದೆ. ಉತ್ತರ ಪ್ರದೇಶದ ಸಹರಾನಪುರ ಜಿಲ್ಲೆ ಲಖ್ನೋತಿ ಗ್ರಾಮದವನಾದ ಶಂಕಿತ ಉಗ್ರ ಸೊಹೇಲ್(20 ವರ್ಷ) ಮೊಬೈಲ್ ಜಾಡು ಹಿಡಿದು ಹೋದ ತನಿಖಾಧಿಕಾರಿ, ಪೊಲೀಸ್ ಅಧಿಕಾರಿಗಳು ಬೆಚ್ಚಿ ಬೀಳುವಂತಹ ಆಘಾತಕಾರಿ ಹಿಂದಿ-ಉರ್ದು ಮಿಶ್ರಿತ ಆಡಿಯೋ, ಮೆಸೇಜ್, ಕೈಗಳಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದ ಫೋಟೋ, ಉಗ್ರರನ್ನು ಹೋಲುವ ಚಿತ್ರಗಳು ಹಾಗೂ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹದಗೆಡಿಸುವ, ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ, ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸುವಂತಹ ವಿಚಾರ ಹೊಂದಿದ್ದ ಬಗ್ಗೆ ಸುಳಿವು ಸಿಕ್ಕಿದೆ ಎನ್ನಲಾಗಿದೆ.



ಸಿಎಂಗೆ ಅಭಿನಂದನೆ

ಸಂಸದ ಬಿ. ವೈ. ರಾಘವೇಂದ್ರ ನೇತೃತ್ವದ ಶಿವಮೊಗ್ಗ ಜನಪ್ರತಿನಿಧಿಗಳು ಹಾಗೂ ವಕೀಲರ ನಿಯೋಗವು ಬುಧವಾರ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಅಭಿನಂದಿಸಿ, ಸಂಚಾರಿ ಪೀಠ ಸ್ಥಾಪನೆ ಕುರಿತಂತೆ ಮನವಿ ಸಲ್ಲಿಸಿತು. ಶಾಸಕರಾದ ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ, ಧನರಾಜ್ ಸರ್ಜಿ,ಡಿ.ಎಸ್. ಅರುಣ್, ಶಿವಮೊಗ್ಗ ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಸ್ವಾಮಿ, ಬಸಪ್ಪಗೌಡ ಮತ್ತಿತರರು ಜತೆಗಿದ್ದರು.

ವಾರ್ತಾ ಆಯುಕ್ತರಾಗಿ ಅನುಚೇತ್

• **ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2009ನೇ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿರುವ ಅನುಚೇತ್ ಅವರು ಇದುವರೆಗೆ ಪೊಲೀಸ್ ನೇಮಕಾತಿ ವಿಭಾಗದ ಡಿಐಜಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಹೇಮಂತ್ ಎಂ. ನಿಂಬಾಳ್ಕರ್ ಅವರ ಸ್ಥಾನಕ್ಕೆ ಅವರನ್ನು ವರ್ಗಾಯಿಸಿ ನಿಯೋಜಿಸಲಾಗಿದೆ. ಇದರೊಂದಿಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಹುದ್ದೆಯ ಹೆಚ್ಚುವರಿ ಜವಾಬ್ದಾರಿಯನ್ನೂ ಅನುಚೇತ್ ಅವರಿಗೆ ವಹಿಸಲಾಗಿದೆ. ಈ ಹುದ್ದೆಯನ್ನು ನಿರ್ವಹಿಸುತ್ತಿದ್ದ ಕುಮಾರ್ ಟಿಎಚ್‌ಎಂ ಅವರ ವರ್ಗಾವಣೆಯ ಹಿನ್ನೆಲೆಯಲ್ಲಿ ಈ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಹಾವು ಕಚ್ಚಿ ಬಾಲಕ ಸಾವು

• **ಬನವಾಸಿ:** ವಿಷಪೂರಿತ ಹಾವು ಕಚ್ಚಿ 12 ವರ್ಷದ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ಸಮೀಪದಸಹಸ್ರಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. 6ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಮಿಥುನ್ ಪುಟ್ಟಪ್ಪ ನಾಯ್ಕ (12) ಮೃತ ಬಾಲಕ. ಆತನ ಸಹೋದರಿ ದೀಕ್ಷಾಳಿಗೂ ಹಾವು ಕಚ್ಚಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಕೆಯ ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ. ಮೃತ ಬಾಲಕ ಮಿಥುನ್ ಮತ್ತು ಸಹೋದರಿ ದೀಕ್ಷಾ ಮಲಗಿದ್ದ ವೇಳೆ ಹಾವು ಕಡಿದಿದ್ದು, ಇಬ್ಬರೂ ಏಕಾಏಕಿ ವಾಂತಿ ಮಾಡ ತೊಡಗಿದ್ದಾರೆ. ಇದನ್ನು ಗಮನಿಸಿದ ಪೋಷಕರು ಮಕ್ಕಳ ಆರೋಗ್ಯದಲ್ಲಿ ಏರು ಪೇರಾಗಿರುವುದನ್ನು ಗಮನಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ವೇಳೆಗಾಗಲೇ ಬಾಲಕ ಮೃತಪಟ್ಟಿದ್ದಾನೆ.

ಕಿರುಸುದ್ದಿ

ಪಕ್ಷದ ಸಿದ್ಧಾಂತ ವಿರುದ್ಧ ನಡೆದರೆ ಕ್ರಮ: ಹರಿಪ್ರಸಾದ್

• **ಹುಬ್ಬಳ್ಳಿ:** ಕಾಂಗ್ರೆಸ್ ಪಕ್ಷ ಸಿದ್ಧಾಂತಕ್ಕೆ ಬದ್ಧವಾಗಿದೆ. ಅದಕ್ಕೆ ವಿರುದ್ಧವಾಗಿದ್ದರೆ ನಾವು ಹೋರಾಟ ಮಾಡುತ್ತೇವೆ. ಪಕ್ಷದ ಸಿದ್ಧಾಂತ ವಿರುದ್ಧ ನಡೆದುಕೊಳ್ಳುವವರು ಯಾರೇ ಇದ್ದರೂ ಅವರಿಗೆ ಪಕ್ಷದಲ್ಲಿ ಅವಕಾಶವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ ಹೇಳಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಯಾವುತ್ತು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತ ಒಪ್ಪಲ್ಲ. ದೇಶದ ತ್ರಿವರ್ಣ ಧ್ವಜ, ಜಾತ್ಯಾತೀತ ಹಾಗೂ ಬಹುತ್ವದ ರಾಷ್ಟ್ರ ವಿರುದ್ಧವಾಗಿ ಅವರು ಇದ್ದಾರೆ. ಆರ್‌ಎಸ್‌ಎಸ್ ಕೋಟ್ಯಾಂತರ ರೂಪಾಯಿ ಸಂಗ್ರಹ ಮಾಡುತ್ತದೆ. ಭಾರತ ಸಂವಿಧಾನದಲ್ಲಿ ಯಾವುದೇ ಸಂಘ, ಸಂಸ್ಥೆಯಾದರೂ ನೋಂದಣಿ ಮಾಡಿಸಿಕೊಳ್ಳಬೇಕು. ಆರ್‌ಎಸ್‌ಎಸ್ ಅದಕ್ಕೆ ಹೊರತಾಗಿಲ್ಲ ಎಂದರು. ಬಿಜೆಪಿ ಅವರು 2014ರಲ್ಲಿ ಅಧಿಕಾರಕ್ಕೆ ಬಂದಾಗ ಆಚ್ಛೆ ದಿನ್ ಎಂದು ಹೇಳಿದ್ದರೂ, ಈಗ ರಾಹು ಕಾಲ ದೇಶದಲ್ಲಿ ಬಂದಿದೆ. ಕೇಂದ್ರ ಸರ್ಕಾರದ ಯೋಜನೆಗಳು ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿವೆ ಎಂದು ಕಿಡಿಕಾರಿದರು.

ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ನಿಗದಿ

• **ಬೆಂಗಳೂರು:** ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹೋಬಳಿಯ ಗೋಕರೆಬಚ್ಚೇನಹಳ್ಳಿ ಮತ್ತು ಹ್ಯಾಡಾಳ ಗ್ರಾಮದಲ್ಲಿ ಕೈಗಾರಿಕಾ ಉದ್ದೇಶಕ್ಕೆ ರೈತರು ಸ್ವಯಂಪ್ರೇರಿತವಾಗಿ ಬಿಟ್ಟುಕೊಡಲು ಒಪ್ಪಿರುವ 120 ಎಕರೆ ಜಮೀನಿಗೆ ಪ್ರತಿ ಎಕರೆಗೆ 2.70 ಕೋಟಿ ರೂ. ಪರಿಹಾರ ಭೂದರ ನಿರ್ಧಾರಣಾ ಸಲಹಾ ಸಮಿತಿ ನಿಗದಿಪಡಿಸಿ ಕೆಐಎಡಿಬಿಗೆ ಶಿಫಾರಸು ಮಾಡಿದೆ. ಕೆಐಎಡಿಬಿ ವಿಶೇಷ ಜಿಲ್ಲಾಧಿಕಾರಿ ಎ.ಎನ್.ರಘುನಂದನ್ ಅಧ್ಯಕ್ಷತೆ ಬುಧವಾರ ನಡೆದ ಅಧಿಕಾರಿಗಳು ಹಾಗೂ ಭೂಮಾಲೀಕರ ಜಂಟಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಈ ತೀರ್ಮಾನವನ್ನು ಕೆಐಎಡಿಬಿ ಮಂಡಳಿಯ ಅನುಮೋದನೆಗಾಗಿ ಕಳಿಸಿಕೊಡಲಾಗುವುದು.

ಪರಿಹಾರವನ್ನು ಹಣದ ರೂಪದಲ್ಲಿ ತೆಗೆದುಕೊಳ್ಳಲು ಇಷ್ಟ ವಿಲ್ಲದಿದ್ದರೆ ಪ್ರತೀ ಎಕರೆ ಕೃಷಿ ಜಮೀನಿಗೆ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಬಡಾವಣೆಯಲ್ಲಿ 10,781 ಚದರ ಅಡಿ ಜಾಗ ವನ್ನು ಪಡೆದುಕೊಳ್ಳುವುದಕ್ಕೂ ಅವಕಾಶ ನೀಡಲಾಗಿದೆ ಎಂದು ರಘುನಂದನ್ ತಿಳಿಸಿದ್ದಾರೆ. ಕೆಐಎಡಿಬಿ ಭೂಸ್ವಾಧೀನಾಧಿಕಾರಿ ಸೂರಜ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಇದ್ದರು.

ಕಾರ್ಮಿಕ ಆತ್ಮಹತ್ಯೆ: ಕಲ್ಲು ತೂರಾಟ

• **ಬೆಳಗಾವಿ:** ಇಲ್ಲಿನ ಪ್ರಸಿದ್ಧ ಹಿಂಡಾಲ್ಕೋ ಕಂಪನಿ ಆವರಣದಲ್ಲಿ ಯುವ ಕಾರ್ಮಿಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಬೆಳಕಿಗೆ ಬಂದಿದ್ದು, ಈ ಘಟನೆ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಸಾರ್ವಜನಿಕರು ಕಂಪನಿ ಕಚೇರಿ ಮೇಲೆ ಕಲ್ಲು ತೂರಾಟ ನಡೆಸಿದ ಪರಿಣಾಮ ಪ್ರದೇಶದಲ್ಲಿ ತೀವ್ರ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಮೃತ ಯುವಕನನ್ನು ಶಂಕರ ತಳವಾರ (24)ಎಂದು ಗುರುತಿಸಲಾಗಿದೆ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶಂಕರ್, ಕೆಲ ದಿನಗಳಿಂದ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ಕೊನೆಗೆ ಆತ್ಮಹತ್ಯೆಗೆ ಶರಣಾಗಿದ್ದಾನೆ ಎನ್ನಲಾಗಿದೆ.

ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಡೆತ್‌ನೋಟ್: ಆತ್ಮಹತ್ಯೆಗೂ ಮುನ್ನ ಶಂಕರ ತನ್ನ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಡೆತ್ ನೋಟ್ ಮಾದರಿಯ ಸಂದೇಶವೊಂದನ್ನು ಪ್ರಕಟಿಸಿದ್ದಾನೆ ಎಂದು ತಿಳಿದುಬಂದಿದೆ. ಆ ಸಂದೇಶದಲ್ಲಿ ಕಂಪನಿಯಲ್ಲಿ ಹಳೆಯ ಕಾರ್ಮಿಕರನ್ನು ತೆಗೆದು ಹೊಸ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದ್ದು, ಗುತ್ತಿಗೆದಾರ ಪೈಯಾಲ್ ನಂದಿ ಅವರಿಂದ ತನಗೆ ತೀವ್ರ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದ್ದಾನೆ ಎನ್ನಲಾಗಿದೆ.

ಇಂದಿನ ಕಾರ್ಯಕ್ರಮದಲ್ಲಿ 3 ರಾಜ್ಯದ ಸಿಎಂ, ಕೇಂದ್ರ ಸಚಿವರು ಭಾಗಿ

ಟಿಬಿ ಡ್ಯಾಂ ಗೇಟ್‌ಗೆ ಚಾಲನೆ

• **ಕೊಪ್ಪಳ:** ಕಲ್ಯಾಣ ಕರ್ನಾಟಕದ ಜೀವನಾಡಿ ತುಂಗಭದ್ರಾ ಜಲಾಶಯದ 33 ಕ್ರಸ್ಟ್‌ಗೇಟ್ ಲೋಕಾರ್ಪಣೆ ಗುರುವಾರ ಜರುಗಲಿದ್ದು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ.

ನೂತನವಾಗಿ ಅಳವಡಿಸಿದ 33 ಸ್ಪಿಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಸ್ಪಿಲ್ ವೇ ಗೇಟುಗಳನ್ನು ಲೋಕಾರ್ಪಣೆಗೊಳಿಸುವರು.

ಜಲಸಂಪನ್ಮೂಲ ಇಲಾಖೆ ವತಿಯಿಂದ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಗ್ರೌಂಡ್‌ನಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವರಾದ ಸಿ.ಆರ್.ಪಾಟೀಲ, ಆಂಧ್ರಪ್ರದೇಶ ಮುಖ್ಯಮಂತ್ರಿಗಳಾದ ಎನ್.ಚಂದ್ರ ಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿಗಳಾದ ಎ.ರೇವಂತ್ ರೆಡ್ಡಿ, ಕರ್ನಾಟಕ ಉಪ ಮುಖ್ಯಮಂತ್ರಿ ಗಳಾದ ಡಾ.ಜಿ.ಪರಮೇಶ್ವರ್, ಆಂಧ್ರಪ್ರದೇಶ ಉಪ ಮುಖ್ಯಮಂತ್ರಿಗಳಾದ ಕೆ.ಪವನ್ ಕಲ್ಯಾಣ್, ತೆಲಂಗಾಣ ಉಪ ಮುಖ್ಯಮಂತ್ರಿಗಳಾದ ಮಲ್ಲು ಭಟ್ಟಿ ವಿಕ್ರಮಾರ್ಕ, ಭಾರತ ಸರ್ಕಾರದ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರಾದ ಎ.ಸೋಮಣ್ಣ, ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರಾದ ರಾಜ ಭೂಷಣ್ ಚೌಧರಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮವು ಶಾಂತಿಯುತವಾಗಿ ನಡೆಯುವ ದಿಶೆಯಲ್ಲಿ ಭದ್ರತೆಗಾಗಿ ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆರು ಜನ ಎಸ್‌ಪಿ, 25 ಜನ ಡಿವೈಎಸ್ಪಿ, 25ಕ್ಕೂ ಹೆಚ್ಚು ಜನ ಸಿಪಿಐ ಮತ್ತು ಪಿಎಸ್‌ಐ ಹಾಗೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕೆಎಸ್‌ಆರ್‌ಪಿ ಸೇರಿದಂತೆ ವಿವಿಧ ಪೊಲೀಸ್ ತುಕಡಿಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. 150 ಬಸ್‌ಗಳಿಗೆ ಹಾಗೂ 250ಕ್ಕೂ ಹೆಚ್ಚು ಬೇರೆ ಬೇರೆ ವಾಹನಗಳಿಗೆ ಬೇರೆ ಬೇರೆ ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ನವಲಿ ಸಮಾನಾಂತರ ಜಲಾಶಯ ಚರ್ಚೆ ಸಾಧ್ಯತೆ

ಇದೇ ಮೊದಲ ಬಾರಿಗೆ ಈ ಮೂರು ಮುಖ್ಯಮಂತ್ರಿಗಳು ಒಂದೆಡೆ ಸೇರಲಿದ್ದು, ನವಲಿ ಸಮಾನಾಂತರ ಜಲಾಶಯ ನಿರ್ಮಾಣ ವಿಷಯ ಸೇರಿ ಹಲವು ನೀರಾವರಿ ಸಮಸ್ಯೆ ಗಳಿಗೆ ಪರಿಹಾರ ಸಿಗುವ ಸಾಧ್ಯತೆ ಇದೆ. ತುಂಗಭದ್ರಾ ಜಲಾಶಯದಲ್ಲಿ 32 ಟಿಎಂಸಿಯಷ್ಟು ಹೂಳು ತುಂಬಿದ್ದು, ಹೂಳೆತ್ತುವ ಬಗ್ಗೆಯೂ ಕೂಡ ಚರ್ಚೆಯಾಗಲಿದೆ.

ಶಾಲಾ -ಕಾಲೇಜಿಗೆ ರಜೆ

ಮುನಿರಾಬಾದ್ ಸರ್ಕಾರಿ ಶಾಲಾ ಮೈದಾನದಲ್ಲಿ ಕಾರ್ಯಕ್ರಮ ಜರುಗಲಿದ್ದು, ಸರ್ಕಾರಿ ಶಾಲಾ, ಕಾಲೇಜಿಗೆ ರಜೆ ಘೋಷಿಸಲಾಗಿದೆ. ಇನ್ನುಳಿದಂತೆ ಮುನಿರಾಬಾದ್‌ನಲ್ಲಿ ಇರುವ ಇತರೆ ಶಾಲೆಗಳಿಗೂ ರಜೆ ಘೋಷಣೆ ಯಾಗಿದೆ. ಕಾರ್ಯಕ್ರಮಕ್ಕೆ ಹಲವು ಗಣ್ಯರು ಆಗಮಿಸುವುದರಿಂದಾಗಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಖಾತೆಯೇ ಇಲ್ಲದೆ ಕೋಟ್ಯಂತರ ಪಾವತಿ: ಆರೋಪ

ಗೃಹಲಕ್ಷ್ಮಿ ಹೆಸರಲ್ಲಿ ಲೂಟಿ: ಬಿವೈವಿ

• **ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆ ಈಗ ರಾಜ್ಯದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹಗರಣವಾಗಿ ಮಾರ್ಪಟ್ಟಿದೆ. ಬ್ಯಾಂಕ್ ಖಾತೆಯೇ ಇಲ್ಲದ 23,262 ಜನರಿಗೆ ಬರೋಬ್ಬರಿ 46.52 ಕೋಟಿ ರೂ. ಪಾವತಿಯಾಗಿರುವುದು ಮತ್ತು 19,020 ಜನರಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿರುವುದನ್ನು ಸ್ವತಃ ಸಿಎಜಿ ವರದಿಯೇ ಬಯಲಿಗೆಳೆದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, 10 ಲಕ್ಷಕ್ಕೂ ಅಧಿಕ ಫಲಾನುಭವಿಗಳ ಖಾತೆಗಳು ನಿರಂತರವಾಗಿ ಬದಲಾಗುತ್ತಿರುವುದು ರಾಜ್ಯದ ಬಡ ಮಹಿಳೆಯರ ಹೆಸರಿನಲ್ಲಿ ನಡೆಯುತ್ತಿರುವ ಬೃಹತ್ ಲೂಟಿಗೆ ಸ್ಪಷ್ಟ ಸಾಕ್ಷಿಯಲ್ಲವೇ ಮುಖ್ಯಮಂತ್ರಿಗಳೇ ಎಂದು ಪ್ರಶ್ನಿಸಿದ್ದಾರೆ.

ಸ್ವತಃ ಸಿಎಜಿ ಕೇಳಿದರೂ ಬ್ಯಾಂಕ್ ಖಾತೆಗಳ ವಿವರ ನೀಡದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಚ್ಚಿಡುತ್ತಿರುವುದಕ್ಕೆ ಕಾರಣವಾದರೂ ಏನು? ಈ ಹಗರಣದ ಬೇರುಗಳು ಈ ಕಾಂಗ್ರೆಸ್ ಸರ್ಕಾರದಲ್ಲಿ ಬಹಳ ಗಾಢವಾಗಿ ಹರಡಿಕೊಂಡಿರುವ ಸಂಶಯ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಇನ್ನೂ ಉತ್ತರ ನೀಡಿಲ್ಲ. ಬಡತಾಯಂದಿರಿಗೆ ನೀಡಬೇಕಾದ ಈ 5,000 ಕೋಟಿ ರೂ. ಎಲ್ಲಿ ಹೋಯಿತು? ಯಾರ ಜೇಬು ಸೇರಿತು ಎಂದು ಈ ಸರ್ಕಾರ ಉತ್ತರಿಸದ ಹಿನ್ನೆಲೆಯಲ್ಲಿ ಹೈಕೋರ್ಟ್ ಆಕ್ಷೇಪಿಸಿ ನೋಟಿಸ್ ಜಾರಿ ಮಾಡಿದೆ. ಹಗರಣಗಳ ಸರಮಾಲೆಯಾಗಿರುವ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತ ನಡೆಸುವ ಯಾವ ನೈತಿಕತೆಯೂ ಉಳಿದಿಲ್ಲ ಮುಖ್ಯವಾಗಿ ಎಂದು ವಿಜಯೇಂದ್ರ ಟೀಕಿಸಿದ್ದಾರೆ.

ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಲಿ

ಬಡವರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿರುವ ಗಂಭೀರ ಭ್ರಷ್ಟಾಚಾರದ ಬಗ್ಗೆ ತಕ್ಷಣ ಅತ್ಯಂತ ಪಾರದರ್ಶಕವಾಗಿ, ಉನ್ನತ ಮಟ್ಟದ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲೇಬೇಕು ಎಂದು ಒತ್ತಾಯಿಸಿದ್ದಾರೆ.

ಮಾವು ಬೆಳೆಗಾರರಿಗೆ ನೆರವು: ಚೌಹಾಣ್

• **ಬೆಂಗಳೂರು:** ಹವಾಮಾನ ವೈಪರೀತ್ಯ ಹಾಗೂ ಬೆಲೆ ಕುಸಿತ ದಿಂದ ತೀವ್

ಸಂಪಾದಕೀಯ

ಮರುಕಳಿಸುವ ಅಗ್ನಿದುರಂತಗಳು

ಕೆಲವು ದಿನಗಳ ಹಿಂದೆ ಲಕ್ನೋದ ಆಲಿಗಂಜ್‌ನಲ್ಲಿ ಕೋಚಿಂಗ್ ಸೆಂಟರ್ ಒಂದರಲ್ಲಿ ಸಂಭವಿಸಿದ ಅಗ್ನಿದುರಂತದಲ್ಲಿ 14 ಮಂದಿ ತರುಣರು ಸಾವನ್ನಪ್ಪಿದರು. ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದಾಗ ಅಲ್ಲಿಂದ ಹೊರಬರಲಾಗದೆ ತೊಳಲಾಡಿದ, ಕೆಲವರು ಕಿಟಕಿಯಿಂದಲೇ ಕೆಳಕ್ಕೆ ಹಾರಿದ ದೃಶ್ಯ ಮನಕಲಕುವಂತಿತ್ತು. ಸಂಭವನೀಯ ದುರಂತ ಸಂಭವಿಸಿದಾಗ ಕ್ಷಿಪ್ರವಾಗಿ ಹೊರಗೆಬರಲುತುರ್ತು ನಿರ್ಗಮನಬಾಗಿಲುಗಳೇ ಅಲ್ಲಿರಲಿಲ್ಲ... ಮೂರು ವಾರಗಳ ಮೊದಲಷ್ಟೇ ದಿಲ್ಲಿಯಲ್ಲಿ ಕೂಡಾ ಇದೇ ಬಗೆಯ ದೃಶ್ಯಗಳು ಕಂಡುಬಂದಿದ್ದವು. ಅಲ್ಲಿ ಸಣ್ಣ ಹೋಟೆಲೊಂದರಲ್ಲಿ ಇಂತಹುದೇ

ಅಗ್ನಿದುರಂತ ಸಂಭವಿಸಿತ್ತು. 21 ಮಂದಿ ಸಾವಿಗೀಡಾಗಿದ್ದರು. ಅಲ್ಲೂ ಆ ಕಟ್ಟಡಕ್ಕೆ ಇಕ್ಕಟ್ಟಾದ ಮೆಟ್ಟಿಲು ವ್ಯವಸ್ಥೆ ಇತ್ತು. ಎಮರ್ಜೆನ್ಸಿ ಬಾಗಿಲು ಇರಲಿಲ್ಲ. ಎರಡೂ ಪ್ರಸಂಗಗಳಲ್ಲಿ ಸುರಕ್ಷಾ ನಿಯಮಗಳನ್ನು ಮತ್ತು ಇನ್ನಿತರ ಸರಕಾರಿ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ ನಡೆಯುತ್ತಿತ್ತು. ಲಕ್ನೋ ಪ್ರಸಂಗದಲ್ಲಂತೂ ಕೆಲವು ವರ್ಷಗಳ ಹಿಂದೆ ಆ ಕಟ್ಟಡವನ್ನು ಕೆಡಹುವಂತೆ ಸ್ಥಳೀಯಾಡಳಿತದಿಂದ ನೋಟೀಸೂ ಜಾರಿಯಾಗಿತ್ತು. ಆದರೆ ಎರಡೇ ತಿಂಗಳಲ್ಲಿ ರಾಜಕೀಯ ಪ್ರಭಾವ ಬೀರಿ ಆ ನೋಟೀಸು ರದ್ದುಪಡಿಸುವಲ್ಲಿ ಕಟ್ಟಡ ಮಾಲಕರು ಸಫಲರಾಗಿದ್ದರು. ಒಟ್ಟಿನಲ್ಲಿ ಇಂತಹ ದುರಂತಗಳು ಸಂಭವಿಸಲು ಸಂಬಂಧಪಟ್ಟ ಕಟ್ಟಡಗಳ ಮಾಲಕರು, ಅಲ್ಲಿ ವ್ಯವಹಾರ ನಡೆಸುವ ಮಂದಿ ಎಷ್ಟು ಹೊಣೆಗಾರರೋ, ಸ್ಥಳೀಯಾಡಳಿತ ಸಂಸ್ಥೆಗಳ ಭ್ರಷ್ಟಾಚಾರಿ ವ್ಯವಸ್ಥೆ, ರಾಜಕೀಯ ಭ್ರಷ್ಟಾಚಾರ ಕೂಡಾ ಅಷ್ಟೇ ಹೊಣೆಗಾರನಾಗಿದೆ. ಕಟ್ಟಡಕ್ಕೆ ಕಣ್ಣುಮುಚ್ಚಿ ನಿರ್ವಹಣಾ ಪರವಾನಿಗೆ ನೀಡುವುದು, ಕಟ್ಟಡಗಳ ಸುರಕ್ಷಾ ವ್ಯವಸ್ಥೆಯನ್ನು ಪರಿಶೀಲಿಸದೆಯೇ ಅಲ್ಲಿ ವ್ಯವಹಾರ ನಿರ್ವಹಣೆಗೆ ಅನುಮತಿ ನೀಡುವುದು, ತುರ್ತು ಸಂದರ್ಭದಲ್ಲಿ ಅಗ್ನಿಶಾಮಕ ವ್ಯವಸ್ಥೆ ಸಮರ್ಪಕವಾಗಿ ಕಾರ್ಯಾಚರಿಸಲು ಬೇಕಾದಂತಹ ಸ್ಥಳಾವಕಾಶ ಇದೆಯೆ ಎಂದು ಪರಿಶೀಲಿಸದಿರುವುದು... ಇವೆಲ್ಲವೂ ವ್ಯವಸ್ಥೆಯ ಕಡೆಯಿಂದಾಗುವ ಲೋಪಗಳು. ಸ್ಥಳೀಯಾಡಳಿತವು ಕ್ರಮ ಕೈಗೊಳ್ಳಲು ಮುಂದಾಗುವಾಗ ರಾಜಕೀಯ ಹಸ್ತಕ್ಷೇಪ ನಡೆದು ಅದಕ್ಕೆ ತಡೆ ಬೀಳುವುದೂ ಇದೆ. ಇದು ಎಲ್ಲೋ ಒಂದೆರಡು ಕಡೆ ನಡೆಯುವ ವಿಷಯವಲ್ಲ, ದೇಶದಲ್ಲಿಡೀ ಇಂತಹ ಅಪಸವ್ಯಗಳು ನಡೆಯುವುದಿದೆ.

ಕಟ್ಟಡ ನಿರ್ಮಾಣದಲ್ಲಿ ಮತ್ತು ಅಲ್ಲಿ ನಡೆಯುವ ವಾಣಿಜ್ಯಿಕ ವ್ಯವಹಾರಗಳಲ್ಲಿ ನಡೆಯುವ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳದ ಹೊರತು, ಇದರಲ್ಲಿ ರಾಜಕೀಯ ಹಸ್ತಕ್ಷೇಪ ನಿಲ್ಲದ ಹೊರತು ಇಂತಹ ದುರ್ಘಟನೆಗಳು ನಡೆಯುತ್ತಲೇ ಇರುತ್ತವೆ. ರಾಜ್ಯ, ಪ್ರದೇಶ, ಕಟ್ಟಡ, ಸಂದರ್ಭ ಭಿನ್ನವಾಗಿರಬಹುದು ಅಷ್ಟೆ. ವಾಣಿಜ್ಯಿಕವಾಗಿ ಕಾರ್ಯ ನಿರ್ವಹಿಸುವ ಪ್ರತಿಯೊಂದು ಕಟ್ಟಡ, ಅಲ್ಲಿನ ವ್ಯವಹಾರ ಕ್ಷೇತ್ರವು ಸೂಕ್ತ ಸುರಕ್ಷಾ ಕ್ರಮಗಳನ್ನು ಒಳಗೊಂಡಿರುವಂತೆ, ತುರ್ತು ಸಂದರ್ಭಗಳಲ್ಲಿ ಕ್ಷಿಪ್ರ ನಿರ್ಗಮನಕ್ಕೆ ಅವಕಾಶ ಕಲ್ಪಿಸುವ ವ್ಯವಸ್ಥೆ ಹೊಂದಿರುವಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು ಅತ್ಯಗತ್ಯವಾಗಿದೆ.

ಲಕ್ಷ್ಮಿ ಯಾರ ಸಮೀಪ ಸುಳಿಯುವುದಿಲ್ಲ?

ಆತ್ಮಾರ್ಥಂ ಅತಿದಾತಾರಂ ಅತಿಶೂರಂ ಅತಿವ್ರತಮ್ ।
ಪ್ರಾಜ್ಞಾಭಿಮಾನಿನಂ ಚೈವ ಶ್ರೀಭಯಾನ್ನೋಪಸರ್ಪತಿ ।। –ಮಹಾಭಾರತ

ಅತಿಯಾದ ಸೌಜನ್ಯವಿರುವವನು, ಅತಿ ದಾನಿ, ಅತಿಶೂರ, ಅತಿಯಾದ ನಿಯಮಶೀಲ, ಪಂಡಿತ, ಅಭಿಮಾನಿ–ಇವರುಗಳನ್ನು ಲಕ್ಷ್ಮಿಯು (ಸಂಪತ್ತು) ಹೆದರಿ ಹತ್ತಿರ ಹೋಗುವುದಿಲ್ಲ – ಎಂಬುದು ಶ್ಲೋಕಾರ್ಥ.

ಎಲ್ಲರೂ ಸಂಪತ್ತನ್ನು ಬಯಸಿದರೂ ಎಲ್ಲರಲ್ಲಿಯೂ ಸಂಪತ್ತಿರುವುದಿಲ್ಲ, ಬಯಸುವವರೆಲ್ಲರನ್ನೂ ಹುಡುಕಿಕೊಂಡು ಸಂಪತ್ತು ಬರುವುದಿಲ್ಲ. ಸಂಪತ್ತು ನೆಲೆ ನಿಲ್ಲಬೇಕಾದರೂ ಕೆಲವರು ಅಂಶಗಳಿರಬೇಕು. ಲಕ್ಷಣಗಳನ್ನು ಹೊಂದಿರಬೇಕು.

ಇದನ್ನು ಪ್ರಕೃತ ಶ್ಲೋಕದಲ್ಲಿ ಹೇಳಲಾಗಿದೆ. ಇಂಥವರ ಸಮೀಪ ಲಕ್ಷ್ಮಿ ಹೋಗುವುದಿಲ್ಲವಂತೆ. ಇದಕ್ಕೆ ಕಾರಣ ಅವರನ್ನು ಕಂಡರೆ ಲಕ್ಷ್ಮಿಗೆ ಹೆದರಿಕೆ. ಹಾಗಿದ್ದರೆ ಯಾರನ್ನೆಲ್ಲ ಕಂಡರೆ ಹೆದರಿಕೆ ಎಂಬುದನ್ನು ಇಲ್ಲಿ ನೀಡಲಾಗಿದೆ.

ಅತಿಯಾದ ಸೌಜನ್ಯವಿರುವವನ ಸಮೀಪ ಲಕ್ಷ್ಮಿ ಸುಳಿಯಲಾರಳು. ಇದಕ್ಕೆ ಕಾರಣ ಅತಿಯಾದ ಸೌಜನ್ಯವೇ ಆಗಿದೆ. ಸೌಜನ್ಯವಿರುವವರಿಗೆ ಸಂಪತ್ತನ್ನು ಇಟ್ಟುಕೊಳ್ಳಬೇಕು, ಕೂಡಿಡಬೇಕು ಎಂಬ ಭಾವನೆ ಇರದು. ಯಾರಾದರೂ ಕಷ್ಟವನ್ನು ಹೇಳಿಕೊಂಡರೆ ಎಲ್ಲವನ್ನೂ ಕೊಟ್ಟುಬಿಡುತ್ತಾರೆ. ಪೂರ್ವಾಪರವನ್ನು ಕೂಲಂಕಷವಾಗಿ ವಿಚಾರಿಸದೇ ನೀಡುತ್ತಾರೆ. ಹೀಗೆ ಎಷ್ಟಿದ್ದರೂ ಸಾಲದು. ಈ ಕಾರಣಕ್ಕಾಗಿಯೇ ಹೆದರಿದ ಲಕ್ಷ್ಮಿ ಅವರ ಸಮೀಪ ಸಾರಲಾರಳು.

ಅತಿದಾತಾರ ಎಂದರೆ ಧಾರಾಳಿ. ಇವನ ಸ್ವಭಾವವೂ ಅಷ್ಟೇ! ತನ್ನಲ್ಲಿ ಇರುವುದನ್ನು ಧಾರಾಳವಾಗಿನೀಡುವುದು. ಮುಂದೆಬೇಕಾದೀತು...ಇತ್ಯಾದಿಯಾವಯೋಚನೆಯನ್ನೂ ಮಾಡದೆಕೊಡುತ್ತಾನೆ. ಹೀಗಿರುವಾಗಲಕ್ಷ್ಮಿ ನೆಲೆನಿಲ್ಲಲುಹೇಗೆಸಾಧ್ಯ ?ಅಲ್ಪಸ್ವಲ್ಪವಾದರೂ ಕೂಡಿಡುವ ಸ್ವಭಾವವಿದ್ದರೆ ಲಕ್ಷ್ಮಿ ನೆಲೆಸುತ್ತಾಳೆ. ಅದೇ ಇಲ್ಲದಿದ್ದರೆ ನೆಲೆಸುವುದಾದರೂ ಹೇಗೆ?

ಅತಿ ಶೂರನಲ್ಲಿಯೂ ಲಕ್ಷ್ಮಿ ನೆಲೆ ಕಾಣಳು. ಜೀವನವನ್ನೆಲ್ಲ ಸಾಹಸ ಕಾರ್ಯದಲ್ಲಿ, ಶೌರ್ಯ ಪ್ರದರ್ಶನದಲ್ಲಿಯೇ ಕಳೆದರೆ, ಅದಕ್ಕೆ ಬೇಕಾದ ಸಿದ್ಧತೆಗೆ ಗಳಿಸಿದ ಹಣವೆಲ್ಲ ಬಳಕೆಯಾಗುತ್ತದೆ. ಹೀಗಿರುವಾಗ ಲಕ್ಷ್ಮಿ ಹೇಗೆ ನಿಂತಾಳು?

ಅತಿಯಾದ ನಿಯಮಶೀಲನಲ್ಲೂ ಲಕ್ಷ್ಮಿ ನೆಲೆ ನಿಲ್ಲಲು ಸಾಧ್ಯವಾಗುವುದಿಲ್ಲ, ಅಲ್ಲಿ ಅವಳಿಗೆ ಸ್ಥಾನವಿಲ್ಲ. ಹೀಗಿರುವಾಗ ನೆಲೆಸಲು ಹೇಗೆ ಸಾಧ್ಯ? ಪಂಡಿತರ ಗಮನ ಹರಿಯುವುದುಪಾಂಡಿತ್ಯದತ್ತ. ಅದಕ್ಕೆಬೇಕಾದುದನ್ನುಪಡೆದುಕೊಳ್ಳಲುಪ್ರಯತ್ನಿಸುತ್ತಾರೆ. ಜ್ಞಾನಾರ್ಜನೆಯತ್ತಲೆವಿನಾಸಂಪತ್ತನ್ನುಗಳಿಸುವತ್ತಗಮನವಿರುವುದಿಲ್ಲ.ಲೌಕಿಕಸಂಪತ್ತಿನತ್ತ ತಿರಸ್ಕಾರ. ಇಂಥವರೊಂದಿಗೆ ಲಕ್ಷ್ಮಿ ಹೇಗೆ ವಾಸಿಸುತ್ತಾಳೆ?

ಅಭಿಮಾನಿಯು ಎಂದೆಂದಿಗೂ ಅಭಿಮಾನವನ್ನು ಬಿಟ್ಟು ಸಂಪತ್ತು ಗಳಿಸುವುದಕ್ಕೆ ಹಾತೊರೆಯಲಾರ. ಯಾರೆದುರೂಕೈಚಾಚಲಾರ. ಅಭಿಮಾನಕ್ಕೆಭಂಗತರುವಕೆಲಸದಲ್ಲಿ ತೊಡಗಲಾರ. ಅಭಿಮಾನಬಿಟ್ಟುವ್ಯವಹಾರಮಾಡಲಾರ. ಇಂಥವರತ್ತ ಗೌರವಾದರಗಳು ಹರಿದು ಬರುತ್ತದೆಯೇ ವಿನಾ ಸಂಪತ್ತು ಬರದು.

ಇವರಿಗೆಲ್ಲ ಜಿಪುಣತನ, ಕೂಡಿಡುವ ಬುದ್ಧಿ, ಇನ್ನೊಬ್ಬರಿಗೆ ವಂಚನೆಯಾದರೂ ಹಣ ಮಾಡಬೇಕು, ಹಣ ಗಳಿಸುವುದಕ್ಕೆಯಾವ ಮಾರ್ಗವಾದರೂ ಸರಿ ಇತ್ಯಾದಿ ಮನೋಭಾವ ಇಲ್ಲದಿರುವುದರಿಂದ ಭಯದಿಂದ ಇವರತ್ತ ಲಕ್ಷ್ಮಿಯು ಬರಲಾರಳು.

ಬರಗಾಲದಲ್ಲಿ ಚರ್ಚಿಲ್ ನರಮೇಧದ ಕರಾಳ ನೆನಪು

ಬ್ರಿಟನ್ ಜಗತ್ತಿಗೆ ಪತ್ರಿಕಾ ಸ್ವಾತಂತ್ರ್ಯದ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪಾಠ ಹೇಳುವ ದೇಶ. ಆದರೆ ಆ ದೇಶದ ಹೃದಯ ಭಾಗದ ವಸ್ತುಸಂಗ್ರಹಾಲಯವೊಂದು, ಕೇವಲ ಒಂದು ವಿಡಿಯೋವನ್ನು ಸಹಿಸಲಾರದೆ ಹೋಯಿತು. ಲಂಡನ್‌ನ ನ್ಯಾಷನಲ್ ಪೋರ್ಟ್ರೇಟ್ ಗ್ಯಾಲರಿಯಲ್ಲಿ ಕಳೆದ ಸೆಪ್ಟೆಂಬರ್‌ನಿಂದ ಪ್ರದರ್ಶನದಲ್ಲಿದ್ದ, ಟರ್ನರ್ ಪ್ರಶಸ್ತಿ ವಿಜೇತ ಕಲಾವಿದೆ ಹೆಲೆನ್ ಕ್ಯಾಮಕ್ ಅವರ 40 ನಿಮಿಷದ ಪರ್ಸಿಸ್ಟೆನ್ಸ್ ಎಂಬ ವಿಡಿಯೋ ಕೃತಿಯನ್ನು, ಈ ವಾರ ಗ್ಯಾಲರಿ ಹಿಂಪಡೆದಿದೆ. ಕಾರಣ ಎಂದರೆ ಆ ಕೃತಿ ಅಲ್ಲಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಮತ್ತು 1943ರ ಬಂಗಾಳ ಕ್ಷಾಮದ ಬಗ್ಗೆ ಆಡಿದ ಮಾತುಗಳು.

ಆ ವಿಡಿಯೋ, ಬಂಗಾಳ ಕ್ಷಾಮವನ್ನು ಚರ್ಚಿಲ್‌ರಿಂದ ಭಾರತೀಯರ ಉದ್ದೇಶಪೂರ್ವಕ ಹಸಿವಿನ ಹತ್ಯೆ ಎಂದು ಬಣ್ಣಿಸಿತ್ತು. ಜೊತೆಗೆ ಚರ್ಚಿಲ್‌ರ ನಡೆಯನ್ನು ಐರ್ಲೆಂಡ್‌ನಲ್ಲಿ ಕ್ರಾಮ್‌ವೆಲ್ ನಡೆಸಿದ ದಂಡಯಾತ್ರೆಗೆ ಹೋಲಿಸಿತ್ತು. ಚರ್ಚಿಲ್‌ರ ಜೀವನಚರಿತ್ರಕಾರ ಆಂಡ್ರ್ಯೂ ರಾಬರ್ಟ್ಸ್ ಮುಂದಾಳತ್ವದಲ್ಲಿ, ಚರ್ಚಿಲ್‌ರ ಮೊಮ್ಮಗ ಸರ್ ನಿಕೋಲಸ್ ಸೋಮ್ಸ್ ಸೇರಿದಂತೆ 50ಕ್ಕೂ ಹೆಚ್ಚು ಹೌಸ್ ಆಫ್ ಲಾರ್ಡ್ಸ್ ಸದಸ್ಯರು ಗ್ಯಾಲರಿಗೆ ಬಹಿರಂಗ ಪತ್ರ ಬರೆದು, ಅದನ್ನು ಸೈದ್ಧಾಂತಿಕ ಪ್ರೇರಿತ ಅಸಂಬದ್ಧ ಕೂಗು, ಹೀನ ಮತ್ತು ನೀಚ ಎಂದು ಜರಿದರು. ಕಡೆಯದಾಗಿ, ಒತ್ತಡ ಹೆಚ್ಚಿದಾಗ ಕಲಾವಿದೆ ಸ್ವತಃ ಕೃತಿ ಹಿಂಪಡೆದರು. ಆದರೆ ಆ ಸ್ವಯಂ ನಿರ್ಧಾರದ ಹಿಂದಿನ ಕೈ ಯಾವುದು ಎಂಬುದು ಎಲ್ಲರಿಗೂ ಗೊತ್ತು.

ಇಲ್ಲಿ ನಿಜವಾದ ಪ್ರಶ್ನೆ ಕಲೆಯದ್ದಲ್ಲ, ಬದಲಾಗಿ ಬ್ರಿಟನ್ ತನ್ನದೇ ಮುಖವನ್ನು ಕನ್ನಡಿಯಲ್ಲಿ ನೋಡಲು ಏಕೆ ಹೆದರುತ್ತದೆ ಎಂಬುದು. ಏಕೆಂದರೆ 1943 ಎಂಬುದು ಕೇವಲ ಒಂದು ಇಸವಿಯಲ್ಲ, ಅದು ಬಂಗಾಳದ ರಸ್ತೆಗಳಲ್ಲಿ ಮೂಳೆಚರ್ಮವಾಗಿ ಬಿದ್ದ ಸುಮಾರು 30 ಲಕ್ಷ ಜೀವಗಳ ಕಥನ. ತಾಯಿಯ ಬರಿದಾದ ಎದೆಯನ್ನು ಚೀಪುತ್ತಲೇ ಪ್ರಾಣ ಬಿಟ್ಟ ಕಂದಮ್ಮಗಳ, ಅನ್ನದ ಒಂದು ತುತ್ತಿಗಾಗಿ ಕೋಲ್ಕತ್ತಾದ ಚರಂಡಿಯಂಚಿನಲ್ಲಿ ಕುಸಿದ ಬಡವರ ಕಥನ. ಮತ್ತು ಇದು ಪ್ರಕೃತಿಯ ಆಕಸ್ಮಿಕ ಅಲ್ಲ, ಬದಲಾಗಿ ಬಹುಪಾಲು ಇದು ಮಾನವ ನಿರ್ಮಿತ ದುರಂತ.

ಕ್ಷಾಮಕ್ಕೆಹಲವುಕಾರಣಗಳಿದ್ದವುನಿಜ. 1942ರ ಚಂಡಮಾರುತ, ಜಪಾನ್ ವಶಪಡಿಸಿಕೊಂಡ ಬರ್ಮಾದಿಂದ ಅಕ್ಕಿ ಆಮದು ಸ್ಥಗಿತ, ಆಕ್ರಮ ದಾಸ್ತಾನು ಹಾಗೂ ಯುದ್ಧಕಾಲದ ಹಣದುಬ್ಬರ ಪ್ರಮುಖ ಕಾರಣಗಳಾಗಿದ್ದವು. ಆದರೆ ಈ ಎಲ್ಲದರ ಮೇಲೆ ಕುಳಿತದ್ದು ಬ್ರಿಟಿಷ್ ಯುದ್ಧ ಮಂತ್ರಿಮಂಡಲದ ತೀರ್ಮಾನಗಳು. ಜಪಾನ್ ದಂಡೆತ್ತಿ ಬಂದರೆ ಅವರಿಗೆ ಸಿಗಬಾರದು ಎಂಬ ನೆಪದಲ್ಲಿ ಕರಾವಳಿ ಬಂಗಾಳದ ದೋಣಿಗಳನ್ನೂ ಅಕ್ಕಿಯನ್ನೂ ಕಿತ್ತುಕೊಂಡ ನಿರಾಕರಣ ನೀತಿ ರೈತನ ಬದುಕನ್ನೇ ಮುರಿಯಿತು. ಬಂಗಾಳ ಹಸಿವಿನಿಂದ ಸಾಯುತ್ತಿರುವಾಗಲೂ ಭಾರತದಿಂದ ಧಾನ್ಯ ರಫ್ತಾಗುತ್ತಿತ್ತು ಎಂದರೆ ಅವರ ಕಟುಕುತನ ಹೇಗಿರಬೇಕು ಎಂಬುದನ್ನು ಊಹಿಸಿಕೊಳ್ಳಿ. ಆಸ್ಟ್ರೇಲಿಯಾ ಹಾಗೂ ಕೆನಡಾಗಳು ನೀಡಲು ಮುಂದಾದ ಗೋಧಿಯ ಹಡಗುಗಳನ್ನು ಯುದ್ಧಕ್ಕೆ ಹಡಗು ಬೇಕು ಎಂದು ತಿರಸ್ಕರಿಸಲಾಯಿತು. ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ತೋರಿಸಿಕೊಟ್ಟಂತೆ, ಆಹಾರ ಇತ್ತು. ಆದರೆ ಬಡವನ ಕೈಗೆ ಅದು ಎಟುಕದಂತೆ ವ್ಯವಸ್ಥೆಯೇ ನೋಡಿಕೊಂಡಿತು. ಕ್ಷಾಮ ಎಂಬುದು ಎಂದಿಗೂ ಬರೀ ಹವಾಮಾನದ ಫಲವಲ್ಲ, ಅದು ರಾಜಕೀಯ ಆಯ್ಕೆಯ ಫಲ ಎಂಬುದು ಅಂದು ಸಾಬೀತಾಯಿತು.

ಆ ಆಯ್ಕೆಯ ಬೇರು ಇದ್ದದ್ದು ಭಾರತೀಯನ ಬಗ್ಗೆ ಬ್ರಿಟಿಷ್ ಆಡಳಿತಗಾರ ಇಟ್ಟಿದ್ದ ತಿರಸ್ಕಾರದಲ್ಲಿ. ಸ್ವತಃ ಚರ್ಚಿಲ್ ಭಾರತೀಯರನ್ನು ತೀರಾ ಕ್ಷುಲ್ಲಕವಾಗಿ ನೋಡುತ್ತಿದ್ದರು. ಭಾರತೀಯರು ಮೊಲಗಳಂತೆ ಹೆಚ್ಚುತ್ತಾರೆ ಎಂದು ಕರೆದಿದ್ದರು. ಬಂಗಾಳದಲ್ಲಿ ಲಕ್ಷಗಟ್ಟಲೆ ಜನ ಸಾಯುತ್ತಿದ್ದಾರೆ ಎಂಬ ವರದಿ ಬಂದಾಗ, ಹಾಗಾದರೆ ಗಾಂಧಿ ಇನ್ನೂ ಏಕೆ ಸತ್ತಿಲ್ಲ? ಎಂದು ಅತಿ ಕೆಟ್ಟ, ಅಮಾನುಷ, ಅಮಾನವೀಯ ಪ್ರಶ್ನೆ ಕೇಳಿದಾತ ಇವರು. ಅಂದಿನ ಬ್ರಿಟಿಷ್ ಸಾಮ್ರಾಜ್ಯಕ್ಕೆ ಭಾರತೀಯನ ಜೀವ ಒಂದು ಜೀವವಾಗಿರಲಿಲ್ಲ, ಅದು ಲೆಕ್ಕಪತ್ರದ ಒಂದು ಸಂಖ್ಯೆ ಅಷ್ಟೇ ಆಗಿತ್ತು. ಯುದ್ಧ ಯಂತ್ರಕ್ಕೆ ಹೋದ ಧಾನ್ಯ ಬಂಗಾಳಿಯ ಹೊಟ್ಟೆಗೂ ಹೋಗಬಹುದಿತ್ತು. ಆ ಆಯ್ಕೆ ಮಾಡದೇ, ಭಾರತೀಯರನ್ನು ವರ್ಣಾಧಾರಿತವಾಗಿ ಗುರುತಿಸಿ, ತೀರಾ ಕೆಟ್ಟದಾಗಿ ಬಳಸಿಕೊಂಡರು. ಅವರ ಈ ತಿರಸ್ಕಾರ ಒಂದು ವ್ಯಕ್ತಿಯ ಮನೋಭಾವವಾಗಿರಲಿಲ್ಲ. ಅದು ಇಡೀ ವಸಾಹತುಶಾಹಿ ವ್ಯವಸ್ಥೆಯ ತಿರುಳಾಗಿತ್ತು. ಶತಮಾನಗಳ ಕಾಲ ಭಾರತದ ಸಂಪತ್ತನ್ನು ಬಸಿದು ಬ್ರಿಟನ್‌ಗೆ ಸಾಗಿಸಿದ ಆ ಸಂಪತ್ತಿನ ಬಸಿತದ ಮುಂದುವರಿಕೆಯೇ 1943ರ ಹಸಿವು. ಬಂಗಾಳಿಯ ತಟ್ಟೆ ಖಾಲಿಯಾದರೆ ಪರವಾಗಿಲ್ಲ, ಲಂಡನ್‌ನ ಯುದ್ಧ ಬಜೆಟ್ ತುಂಬಿರಬೇಕು ಎಂಬುದೇ ಆ ಆಡಳಿತದ ಲೆಕ್ಕಾಚಾರವಾಗಿತ್ತು.

ಇಷ್ಟಾದರೂ, ಎಂಟು ದಶಕ ಕಳೆದರೂ, ಬ್ರಿಟನ್ ಈ ಪಾಪಕ್ಕೆ ಒಂದು ಬಾರಿಯೂ ಕ್ಷಮೆ ಕೇಳಿಲ್ಲ. ಚರ್ಚಿಲ್ ಕೇಳಲಿಲ್ಲ. ಆವರ ನಂತರ ಬಂದವರೂ ಕೇಳಲಿಲ್ಲ. ಪ್ರತಿಮೆಗಳಲ್ಲಿ, ನೋಟುಗಳಲ್ಲಿ ಹಾಗೂ ಪಠ್ಯಪುಸ್ತಕಗಳಲ್ಲಿ ಚರ್ಚಿಲ್ ಯುದ್ಧನಾಯಕನಾಗಿ ವಿಜೃಂಭಿಸುತ್ತಲೇ ಇದ್ದಾರೆ. ಮತ್ತೊಂದೆಡೆ ಬಂಗಾಳದ 30 ಲಕ್ಷ ಮಂದಿ ಒಂದು ಆಡಿಟಿಪ್ಪಣಿಯಾಗಿ ಮಸುಕಾಗಿದ್ದಾರೆ. ಗ್ಯಾಲರಿಯಿಂದ ವಿಡಿಯೋ ತೆಗೆದದ್ದು ಇದೇ ನಿರಾಕರಣೆಯ ಹೊಸ ಅಧ್ಯಾಯ. ನಾವು ಕೇಳುತ್ತಿರುವುದು ಸೇಡಲ್ಲ, ಸತ್ಯದ ಸ್ವೀಕಾರ ಮಾತ್ರ. ಇತಿಹಾಸವನ್ನು ಅಳಿಸಿ ಹಾಕುವ ಮೂಲಕ ಅಪರಾಧವನ್ನು ಪವಿತ್ರಗೊಳಿಸಲಾಗದು.

ಈ ಹಳೆಯ ಗಾಯವನ್ನು ಈಗಲೇ ಏಕೆ ಕೆದಕಬೇಕು? ಇದಕ್ಕೆ ಉತ್ತರಗಳೂ ಇವೆ. ಅಲ್ಲಿನ ಸಂಗ್ರಹಾಲಯದಿಂದ ವಿಡಿಯೋ ತೆಗೆದ ಹೊತ್ತಲ್ಲೇ, ಭಾರತವೂ ಸೇರಿದಂತೆ ಜಗತ್ತು ಎಲ್ ನಿನೋದ ಅಟ್ಟಹಾಸ ಎದುರಿಸಲು ಕುಳಿತಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಈ ಬಾರಿ ಸಾಧಾರಣಕ್ಕಿಂತ ಕಡಿಮೆ, ಅಂದರೆ ದೀರ್ಘಾವಧಿ ಸರಾಸರಿಯಾದ 870 ಮಿ.ಮೀ.ಗೆ ಬದಲು ಸುಮಾರು 800 ಮಿ.ಮೀ. ಮಳೆಯ ಮುನ್ಸೂಚನೆ ನೀಡಿದೆ. ಇದರೊಂದಿಗೆ ಬರದ ಸಾಧ್ಯತೆ ಸಾಮಾನ್ಯಕ್ಕಿಂತ ದುಪ್ಪಟ್ಟಾಗಿದೆ. 2015 ರಿಂದ 2016ರ ಅವಧಿಯ ಪ್ರಬಲ ಎಲ್ ನಿನೋ ತಂದ ಬರ ಹಾಗೂ 2002ರ ಭೀಕರ ಕೊರತೆ ಇನ್ನೂ ನೆನಪಿನಲ್ಲಿವೆ. ದೇಶದ ಶೇ.60ರಷ್ಟು ರೈತರು ಇಂದಿಗೂ ಮುಂಗಾರಿನ ಮೇಲೆಯೇ ಅವಲಂಬಿತರು. ಬರ ಮತ್ತೆ ಬಾಗಿಲು ತಟ್ಟುತ್ತಿದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಮಳೆ ಕೈಕೊಟ್ಟರೆ ಉತ್ತರ ಕರ್ನಾಟಕ ಮತ್ತು ಬಯಲುಸೀಮೆಯ ರೈತ ಮೊದಲ ಬಲಿಪಶು. ಜಲಾಶಯಗಳ ನೀರಿನ ಮಟ್ಟ, ಬಿತ್ತನೆ ಬೀಜ ಮತ್ತು ಮೇವಿನ ದಾಸ್ತಾನು ಇವೆಲ್ಲ ಈಗಿನಿಂದಲೇ ನಿಗಾ ಬೇಡುವ ಸಂಗತಿಗಳು.

ಆದರೆ 1943 ಮತ್ತು 2026ರ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಆ ವ್ಯತ್ಯಾಸದಲ್ಲೇ ನಮ್ಮ ಭರವಸೆ ಅಡಗಿದೆ. ಅಂದು, ಯಾವ ಭಾರತೀಯನಿಗೂ ಉತ್ತರದಾಯಿಯಲ್ಲದ ವಸಾಹತುಶಾಹಿ ಆಡಳಿತ ಜನರನ್ನು ಸಾಯಲು ಬಿಟ್ಟಿತು. ಇಂದು, ಆಹಾರ ಭದ್ರತೆಯ ಒಂದಿಡೀ ರಚನೆ ನಮ್ಮ ಬಳಿಯಿದೆ. ಭಾರತೀಯ ಆಹಾರ ನಿಗಮದ ಬಫರ್ ದಾಸ್ತಾನು, ಸಾರ್ವಜನಿಕ ಪಡಿತರ ವ್ಯವಸ್ಥೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಖಾತರಿ ಯೋಜನೆ, ಬೆಳೆ ವಿಮೆ, ಮುಂಚಿತ ಎಚ್ಚರಿಕೆ ವ್ಯವಸ್ಥೆ ಹಾಗೂ ನೀರಾವರಿ ಜಾಲ ನಮ್ಮಲ್ಲಿವೆ. ಇಂದು ಭಾರತದಲ್ಲಿ ಕ್ಷಾಮ ಸಂಭವಿಸಿದರೆ ಅದು ವಿಧಿಯ ಆಟವಲ್ಲ. ಅದು ಆಡಳಿತದ ವೈಫಲ್ಯ. ಆದರೂ ಆತೃತೃಪ್ತಿ ಸಲ್ಲದು. ಹವಾಮಾನ ಬದಲಾವಣೆ, ಸಣ್

ಪಾಕ್ ಸುಳ್ಳನ್ನು ಬೆಂಬಲಿಸಿದ್ದ ರಾಗಾ: ಬಿಜೆಪಿ

ದೇಶಕ್ಕೆ ಕಾಂಗ್ರೆಸ್ ವಿವರಣೆ ನೀಡಲಿ

ಹೊಸದಿಲ್ಲಿ : 'ಆಪರೇಷನ್ ಸಿಂದೂರ್' ವೇಳೆ ಪಾಕಿಸ್ತಾನದ ಸುಳ್ಳುಪ್ರಚಾರವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರೂಪಣೆಗೈದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಗ ದೇಶಕ್ಕೆ ಈ ಬಗ್ಗೆ ವಿವರಣೆ ನೀಡಬೇಕಾಗಿದೆ ಎಂದು ಬಿಜೆಪಿ ಬುಧವಾರ ಆಗ್ರಹಿಸಿದೆ. ತಾನು ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಹೇಳಿಕೊಂಡ ಪಾಕಿಸ್ತಾನದಿಂದ ಆಧಾರ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನೇ ಪ್ರಶ್ನಿಸಿದ್ದು, ರಾಹುಲ್ ಗಾಂಧಿಯ ಕುತ್ಸಿತ ಉದ್ದೇಶವನ್ನು ವ್ಯಕ್ತಗೊಳಿಸಿದ್ದು, ಈ ಬಗ್ಗೆ ಈಗ ದೇಶಕ್ಕೆ ಉತ್ತರಿಸಬೇಕು ಎಂದು ಆದು ಹೇಳಿದೆ.

ಪಾಕಿಸ್ತಾನ ತಾನು 'ಆಪರೇಷನ್ ಸಿಂದೂರ್'ವೇಳೆ ಹಲವು ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪ್ರಚುರಪಡಿಸಿತ್ತು. ಇತ್ತೀಚೆಗೆ ಭಾರತೀಯ ವಾಯುಪಡೆ(ಐಎಎಫ್) ಎಲ್ಲ 36 ರಾಫೆಲ್ ಯುದ್ಧ ವಿಮಾನಗಳಿಗೆ ಪೂರಕ ಪ್ಯಾಕೇಜ್‌ಗಾಗಿ ಟೆಂಡರ್ ಕರೆದಿದ್ದನ್ನು ಬಿಜೆಪಿ ಬೊಟ್ಟು ಮಾಡಿದ್ದು, ಪಾಕಿಸ್ತಾನ ಹಲವು ಸಮಯದಿಂದ ಹೇಳುತ್ತಾ ಬಂದಿದ್ದ ಸುಳ್ಳನ್ನು ಬಯಲಿಗೆಳೆದಿರುವುದನ್ನು ಎತ್ತಿತೋರಿದೆ.

ವಿಪರ್ಯಾಸವೆಂದರೆ, ಪಾಕಿಸ್ತಾನವು ಪ್ರಚುರಪಡಿಸಿದ್ದ ಇಂತಹ ಸುಳ್ಳು ಪ್ರಚಾರವನ್ನು ಭಾರತೀಯ ಸೇನೆ ತಿರಸ್ಕರಿಸಿದ್ದರೂ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಕಿಸ್ತಾನದಿಂದ ಇಂತಹ ಪ್ರಚಾರಕ್ಕೆ ಸಾಕ್ಷ್ಯ ಕೇಳುವ ಬದಲಿಗೆ ಭಾರತ ಸರಕಾರವನ್ನೇ ಪ್ರಶ್ನಿಸಿ ಮುಜುಗರವನ್ನುಂಟು ಮಾಡಲು ಯತ್ನಿಸಿದರು. ಆಪರೇಷನ್ ಸಿಂದೂರ್‌ನ ಸಂದರ್ಭ ಭಾರತವು ಗಂಭೀರ ರಾಷ್ಟ್ರೀಯ ಭದ್ರತಾ ಸವಾಲನ್ನು ಎದುರಿಸುತ್ತಿದ್ದರೆ, ರಾಹುಲ್ ಗಾಂಧಿ ಮಾತ್ರ ಭಾರತದ ರಾಫೆಲ್ ಯುದ್ಧ ವಿಮಾನಗಳಿಗೆ ಸಂಬಂಧಿಸಿ ಪಾಕಿಸ್ತಾನ ನಡೆಸುತ್ತಿದ್ದ ಸುಳ್ಳು ಪ್ರಚಾರಗಳನ್ನೇ ಬೆಂಬಲಿಸುವ ಪ್ರಶ್ನೆಗಳು ಮತ್ತು ನಿರೂಪಣೆಗಳನ್ನು ವಿಸ್ತರಿಸಲು ಯತ್ನಿಸುತ್ತಿದ್ದರು ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ತೀವ್ರವಾಗಿ ಖಂಡಿಸಿದ್ದಾರೆ.

ಭಾರತದ ರಾಫೆಲ್ ಸಮರ ವಿಮಾನಗಳನ್ನು ಹೊಡೆದುರುಳಿಸಿದ್ದೇನೆಂದು ಪ್ರಚುರಪಡಿಸುವ ಸುಳ್ಳುಪ್ರಚಾರವನ್ನು ಪಾಕಿಸ್ತಾನದ ಮಾಹಿತಿ ವ್ಯವಸ್ಥೆಗಳು ಆಕ್ರಮಣಕಾರಿಯಾಗಿ ನಡೆಸುತ್ತಿದ್ದವು. ಇತ್ತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವೈರಿಯ ಈ ದುರುದ್ದೇಶದ ಪ್ರಚಾರಕ್ಕೆ ನ್ಯಾಯ ಸಮ್ಮತತೆಯನ್ನು ನೀಡಿದರು. ಸುಳ್ಳು ಪ್ರಚಾರಕ್ಕೆ ಪಾಕಿಸ್ತಾನದಿಂದ ಸಾಕ್ಷ್ಯ ಕೇಳುವ ಬದಲಿಗೆ ರಾಹುಲ್ ಗಾಂಧಿ ಭಾರತ ಸರ್ಕಾರವನ್ನು ಪ್ರಶ್ನಿಸಿದ್ದರು ಎಂದು ಮಾಳವೀಯ ನೆನಪಿಸಿದರು. ರಾಷ್ಟ್ರೀಯ ಭದ್ರತಾ ಕಾರ್ಯಾಚರಣೆಗಳ ವೇಳೆ ವೈರಿಯ ಸುಳ್ಳು ಮಾಹಿತಿ ಅಭಿಯಾನಕ್ಕೆ ಆಮ್ಲಜನಕ ಒದಗಿಸುವುದು ಅತ್ಯಂತ ಬೇಜವಾಬ್ದಾರಿ ರಾಜಕೀಯ ಮಾತ್ರವಲ್ಲ, ರಾಷ್ಟ್ರೀಯ ಹಿತಕ್ಕೇ ಬಗೆಯುವದ್ರೋಹ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಈಗ ರಾಹುಲ್ ಗಾಂಧಿ ತನ್ನ ಕೃತ್ಯದ ಬಗ್ಗೆ ದೇಶದ ಜನತೆಗೆ ಉತ್ತರಿಸಲಿ ಎಂದರು. ರಾಫೆಲ್ ಯುದ್ಧ ವಿಮಾನಗಳನ್ನು ಉರುಳಿಸಿದ್ದಾಗಿ ಪಾಕಿಸ್ತಾನ ಹೇಳಿಕೊಂಡಾಗ ಅದಕ್ಕೆ ಸಾಕ್ಷ್ಯ ನೀಡುವಂತೆ ಭಾರತ ಕೇಳಿದಾಗ ಅಂತಹ ಯಾವುದೇ ಸಾಕ್ಷ್ಯ ನೀಡಲು ಪಾಕಿಸ್ತಾನ ವಿಫಲವಾಗಿತ್ತು. ಅಲ್ಲದೆ ಫ್ರಾನ್ಸ್‌ನ ರಾಫೆಲ್ ಸಂಸ್ಥೆ ಕೂಡ ಯಾವುದೇ ರಾಫೆಲ್ ವಿಮಾನ ಪತನವಾಗಿರುವುದನ್ನು ನಿರಾಕರಿಸಿತ್ತು. ಅನಂತರ ತನ್ನ ಮುಖವಿಳಿಸಿಕೊಳ್ಳಲು ಪಾಕಿಸ್ತಾನ ಮುಂದುವರಿಸಿದ್ದ ಅಪಪ್ರಚಾರಕ್ಕೆ ಭಾರತ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿತ್ತು.

ನೀಟ್ ಮರು ಪರೀಕ್ಷೆ ಸುಗಮ ಪ್ರಶಂಸಾರ್ಹ: ಮೋದಿ

ಇಲಾಖೆಗಳ ಸಮನ್ವಯತೆ ಮುಖ್ಯ

ಹೊಸದಿಲ್ಲಿ: ವಿವಿಧ ಇಲಾಖೆಗಳ ಮಧ್ಯೆ ಪರಸ್ಪರ ಸಮನ್ವಯತೆ ತೀರಾ ಮುಖ್ಯವೆಂದು ಬುಧವಾರ ಕೇಂದ್ರ ಸಂಪುಟ ಸಭೆಯಲ್ಲಿ ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ನೀಟ್-ಯುಜಿ ಮರು ಪರೀಕ್ಷೆ ಸುಗಮವಾಗಿ ನಡೆಯುವಲ್ಲಿ ಇಂತಹ ಸಮನ್ವಯ ಪ್ರಯತ್ನಗಳ ಸಾಕಾರ ಪ್ರಶಂಸಾರ್ಹ ಎಂದು ಪ್ರಶಂಸಿಸಿದ್ದಾರೆ.

ನೀಟ್ ಮರು ಪರೀಕ್ಷೆ ಪಾರದರ್ಶಿಯಾಗಿ ನಡೆದುದನ್ನು ಉದಾಹರಿಸಿದ ಪ್ರಧಾನಿ ಮೋದಿ, ವಿವಿಧ ಖಾತೆಗಳ ನಡುವೆ ಸಂಪೂರ್ಣ ಸಮನ್ವಯತೆ ಮುಖ್ಯವೆಂದು ಪುನರುಚ್ಚರಿಸಿದರು. ಸಂಪೂರ್ಣವಾಗಿ ಸರಕಾರದ ಧೋರಣೆ-ಪ್ರಯತ್ನಗಳ ಬಲದಿಂದ ಸವಾಲುಗಳು, ಸಮಸ್ಯೆಗಳ ನಿಭಾಯಿಸುವಂತೆ ಸಲಹೆ ಮಾಡಿದರು. ವಿವಿಧ ಖಾತೆಗಳು ಅಸೀಮ ಮತ್ತು ಸಮನ್ವಯತೆ ನೆಲೆಯಲ್ಲಿ ಕಾರ್ಯತತ್ಪರರಾದಲ್ಲಿ ಯಾವುದೇ ಸವಾಲುಗಳ ಎದುರಿಸಲು ಸಾಧ್ಯವೆಂದು ಹೇಳಿದರು. ಇಂಧನ ಕೊರತೆ ಜನಸಾಮಾನ್ಯರನ್ನು ಬಾಧಿಸದಿರಲು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಿ ಎಂದು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲೂ ವಿವಿಧ ಇಲಾಖೆಗಳಿಗೆ ಮೋದಿ ಕರೆ ನೀಡಿದ್ದರು. ತನ್ಮೂಲಕ ಸಮನ್ವಯತೆಯ ಮಹತ್ತ್ವವನ್ನು ಪ್ರತಿಪಾದಿಸಿದ್ದರು. ಇಂಧನ ಭದ್ರತೆ, ಸಾಗರ ಸುರಕ್ಷೆ, ಭಾರತೀಯರಿಗೆ ನೆರವು ಕಲ್ಪಿಸುವನ್ನಯ ವಿವಿಧ ಖಾತೆಗಳು ಜಂಟಿಯಾಗಿ ಸಮನ್ವಯದ ಪ್ರಯತ್ನಗಳನ್ನು ನಡೆಸಬೇಕೆಂದು ಕರೆ ನೀಡಿದ್ದರು. ಪ.ಏಷ್ಯಾ ಸಮರದ ಹಿನ್ನೆಲೆಯಲ್ಲಿ ಇಂಧನ ಭದ್ರತಾ ಸನ್ನಿವೇಶ ಬಗ್ಗೆ ಸಕಾಲಿಕ ಮಾಹಿತಿ ಒದಗಿಸುವುದಕ್ಕಾಗಿ, ಅಂತರ್ ಸಚಿವಾಲಯ ತಂಡಗಳನ್ನು ಸರಕಾರ ರಚಿಸಿತ್ತು ಮತ್ತು ನಿಯತವಾಗಿ ಸಭೆಗಳನ್ನು ಆಯೋಜಿಸಿತ್ತು.

ಹೊಸ ನಿಯಮ ಪ್ರಕಟ

ಕೇಂದ್ರ ಗೃಹ ಸಚಿವಾಲಯ ಈ ತಿದ್ದುಪಡಿ ನಿಯಮಗಳನ್ನು ಪ್ರಕಟಿಸಿದೆ. ವಿದೇಶಿ ಕೊಡುಗೆ (ನಿಯಂತ್ರಣ) ಕಾಯ್ದೆ(ಎಫ್‌ಸಿಆರ್‌ಎ) ಆನ್ವಯ ನೋಂದಣಿ ಅಥವಾ ಪೂರ್ವಾನುಮತಿ ಪಡೆಯಲು ಅರ್ಜಿ ಸಲ್ಲಿಸುವ ಎನ್‌ಜಿಒಗಳಿಗೆ ಈ ನಿಯಮಗಳು ಆನ್ವಯವಾಗುತ್ತವೆ. ಹೊಸ ನಿಯಮಗಳ ಪ್ರಕಾರ, ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರ, ಉದ್ದೇಶಗಳು, ಕಾರ್ಯನಿರ್ವಹಿಸುವ ರಾಜ್ಯಗಳು, ವಿದೇಶಿ ದಾನಿಗಳು, ಸಾಮಾಜಿಕ ಜಾಲತಾಣ ಖಾತೆಗಳು, ವಿದೇಶಿ ನಿಧಿಯ ಬಳಕೆ ಹಾಗೂ ಯಾವ ಉದ್ದೇಶಕ್ಕಾಗಿ ನಿಧಿ ಕೇಳಲಾಗುತ್ತಿದೆ ಎಂಬುದರ ಕುರಿತು ವಿವರವಾದ ಮಾಹಿತಿ ನೀಡಬೇಕಾಗುತ್ತದೆ.

ವಿದೇಶಿ ನಾಗರಿಕರಿಗೆ ಪ್ರಮುಖ ಹುದ್ದೆಗಳಿಲ್ಲ

ಅಧಿಸೂಚನೆಯ ಪ್ರಕಾರ, ಭಾರತೀಯ ಮೂಲದವರಲ್ಲದ ವಿದೇಶಿ ನಾಗರಿಕರು ಪ್ರಮುಖ ಪದಾಧಿಕಾರಿಗಳಾಗಿರುವ ಸಂಸ್ಥೆಗಳಿಗೆ ಸಾಮಾನ್ಯ ನಿಯಮಗಳಲ್ಲಿ ಎಫ್‌ಸಿಆರ್‌ಎ ನೋಂದಣಿ ಅಥವಾ ಪೂರ್ವಾನುಮತಿ ನೀಡಲಾಗುವುದಿಲ್ಲ. ಈ ಬಗ್ಗೆ ಹೊಸ ಸ್ಪಷ್ಟೀಕರಣವನ್ನು ನಿಯಮಗಳಲ್ಲಿ ಸೇರಿಸಲಾಗಿದ್ದು, ಇಂತಹ ಸಂಸ್ಥೆಗಳು ನೇರವಾಗಿ ಅರ್ಹವೆಂದು ಪರಿಗಣಿಸಲ್ಪಡುವುದಿಲ್ಲ ಎಂದು ತಿಳಿಸಲಾಗಿದೆ.

ಧಾರ್ಮಿಕ ಚಟುವಟಿಕೆಗಳ ವ್ಯಾಖ್ಯಾನ

ತಿದ್ದುಪಡಿ ನಿಯಮಗಳು ವಿದೇಶಿ ನಿಧಿಯಿಂದ ನಡೆಸಬಹುದಾದ ಧಾರ್ಮಿಕ ಚಟುವಟಿಕೆಗಳ ಪಟ್ಟಿಯನ್ನು ಸ್ಪಷ್ಟವಾಗಿ ನಿರ್ದಿಷ್ಟಪಡಿಸಿವೆ. ಪೂಜಾಸ್ಥಳಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಪವಿತ್ರ ಗ್ರಂಥಗಳ ಸಂರಕ್ಷಣೆ, ಮುದ್ರಣ, ಅನುವಾದ ಮತ್ತು ಡಿಜಿಟಲೀಕರಣ, ಧಾರ್ಮಿಕ ಅಧ್ಯಯನ ಸಂಸ್ಥೆಗಳ ಸಂರಕ್ಷಣೆ, ಯಾತ್ರಿಕರ ಸೌಲಭ್ಯಗಳು, ಧರ್ಮಶಾಲೆಗಳು, ಲಂಗರ್ ಮತ್ತು ಸಮುದಾಯ ಅಡುಗೆ ಕೇಂದ್ರಗಳು, ಧಾರ್ಮಿಕ ಶಿಕ್ಷಣ, ಆಧ್ಯಾತ್ಮಿಕ ಪ್ರವಚನಗಳು, ಭಕ್ತಿಗೀತೆಗಳು, ಮೂಲನಿ ವಾಸಿ ಮತ್ತು ಬುಡಕಟ್ಟು ಧಾರ್ಮಿಕ ಪರಂಪರೆಗಳ ಸಂರಕ್ಷಣೆ, ಧಾರ್ಮಿಕ ಪರಂಪರೆಯ ತಾಣ ಗಳ ರಕ್ಷಣೆ, ಅಂತರ್‌ಧರ್ಮ ಸಂವಾದ ಕಾರ್ಯ ಕ್ರಮಗಳು, ಧಾರ್ಮಿಕ ಪ್ರಕಟಣೆಗಳು, ಗ್ರಂಥಾಲ ಯಗಳು, ವಸ್ತುಸಂಗ್ರಹಾಲಯಗಳು, ಧಾರ್ಮಿಕ ಸಂಸ್ಥೆಗಳ ಸಲಹಾ ಮತ್ತು ವ್ಯಸನಮುಕ್ತಿ ಕೇಂದ್ರ ಗಳು, ಸಾಂಪ್ರದಾಯಿಕ ಕಲೆಗಳ ತರಬೇತಿ ಹಾಗೂ ಸಮಾಧಿ ಮತ್ತು ಸ್ಮಶಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಇವುಗಳಿಗೆ ಅನುಮತಿ ನೀಡಲಾಗಿದೆ.

ಆರೋಗ್ಯ, ನೈರ್ಮಲ್ಯ ಮತ್ತು ಮಕ್ಕಳ ರಕ್ಷಣೆಗೆ ನಿಧಿ

ಸಾಮಾಜಿಕ ವಲಯದಲ್ಲಿ ಶೌಚಾಲಯ ನಿರ್ಮಾಣ, ನೈರ್ಮಲ್ಯ ಜಾಗೃತಿ, ಋತುಸ್ರಾವ ಆರೋಗ್ಯ ಕಾರ್ಯಕ್ರಮಗಳು, ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉಪಶಾಮಕ ಚಿಕಿತ್ಸೆ ಮತ್ತು ಅಂತಿಮ ಹಂತದ ಆರೈಕೆ ಸೇವೆಗಳಿಗೆ ವಿದೇಶಿ ಹಣ ಬಳಸಬಹುದಾಗಿದೆ. ಅನಾಥಾಶ್ರಮಗಳು, ಮಕ್ಕಳ ಪೋಷಣ ಆರೈಕೆ, ದತ್ತು ಸ್ವೀಕಾರಕ್ಕೆ ನೆರವು ಮತ್ತು ಮಕ್ಕಳ ರಕ್ಷಣಾ ಕೇಂದ್ರಗಳಿಗೂ ವಿದೇಶಿ ನಿಧಿ ಪಡೆಯಲು ಅವಕಾಶ ನೀಡಲಾಗಿದೆ.

ಎಫ್‌ಸಿಆರ್‌ಎ ನಿಯಮ ಬಿಗಿ

ವಿದೇಶಿ ನಿಧಿಯಿಂದ ಧರ್ಮಾಂತರ ಚಟುವಟಿಕೆಗೆ ನಿರ್ಬಂಧ

ವಿದೇಶಿ ನಿಧಿ ಪಡೆಯುವ ಸರ್ಕಾರೇತರ ಸಂಸ್ಥೆಗಳ(ಎನ್‌ಜಿಒ) ಮೇಲೆ ಕೇಂದ್ರ ಸರ್ಕಾರ ಹೊಸ ನಿಯಮಗಳನ್ನು ಜಾರಿಗೊಳಿಸಿದ್ದು, ಮಾಹಿತಿ ಬಹಿರಂಗಪಡಿಸುವಿಕೆ ಮತ್ತು ಮೇಲ್ವಿಚಾರಣೆಯನ್ನು ಇನ್ನಷ್ಟು ಕಠಿಣಗೊಳಿಸಿದೆ. ಜತೆಗೆ, ವಿದೇಶಿ ನಿಧಿಯಿಂದ ನಡೆಸುವ ಧಾರ್ಮಿಕ ಚಟುವಟಿಕೆಗಳ ವ್ಯಾಪ್ತಿಯಿಂದ ಮತಾಂತರವನ್ನು ಹೊರಗಿಡಲಾಗಿದೆ. ಈ ಪೈಕಿ ಮುಖ್ಯವಾಗಿ ವಿದೇಶಿ ದೇಣಿಗೆಯನ್ನು ಬಳಸಿಕೊಂಡು ಮತಾಂತರ ಅಥವಾ ಮತಪ್ರಚಾರ ಚಟುವಟಿಕೆ ನಡೆಸುವುದಕ್ಕೆ ಕಡಿವಾಣ ಹಾಕಿದೆ. ಈ ಮೂಲಕ ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳಿಗೆ ವಿದೇಶಿ ನಿಧಿ ಸ್ವೀಕಾರ ಮತ್ತು ಬಳಕೆಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಸ್ಪಷ್ಟ ಉದ್ದೇಶ ಘೋಷಣೆ ಕಡ್ಡಾಯ

ತಿದ್ದುಪಡಿ ನಿಯಮಗಳ ಪ್ರಕಾರ, ಎನ್‌ಜಿಒಗಳು ತಮ್ಮ ಉದ್ದೇಶಗಳನ್ನು ಸ್ಪಷ್ಟವಾಗಿ ಘೋಷಿಸಬೇಕು. ಸಂಸ್ಥೆಗಳು ಪಡೆದ ವಿದೇಶಿ ನಿಧಿಯನ್ನು ಭಾರತದಲ್ಲಿ ಮಾತ್ರ ಬಳಸಬೇಕು ಹಾಗೂ ಅದು ಸಂಸ್ಥೆಯ ಘೋಷಿತ ಉದ್ದೇಶಗಳು ಮತ್ತು ನಿಧಿ ಪಡೆದ ಕಾರಣಗಳಿಗೆ ಅನುಗುಣವಾಗಿರಬೇಕು ಎಂದು ಅಧಿಸೂಚನೆ ತಿಳಿಸಿದೆ. ಹೀಗಾಗಿ, ಸಂಸ್ಥೆಗಳು ಅನುಮತಿ ಪಡೆಯುವ ಸಂದರ್ಭ ದಲ್ಲಿ ನೀಡಿದ ಉದ್ದೇಶಗಳ ಪ್ರಕಾರವೇ ವಿದೇಶಿ ನಿಧಿಯನ್ನು ಬಳಸಬೇಕಾಗುತ್ತದೆ.

ನಿಧಿ ಬಳಕೆಗೆ ಕಠಿಣ ಷರತ್ತುಗಳು

ಹೊಸ ನಿಯಮಗಳಲ್ಲಿ ವಿದೇಶಿ ನಿಧಿಯ ಕಂತುಗಳ ಬಿಡುಗಡೆಗೆ ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಲಾಗಿದೆ. ಎರಡನೇ ಅಥವಾ ನಂತರದ ಕಂತಿನ ಬಿಡುಗಡೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ಫಾರ್ಮ್ ಎಫ್‌ಸಿ -3ಬಿಬಿ ಮೂಲಕ ಅರ್ಜಿ ಸಲ್ಲಿಸಬೇಕು. ಹಿಂದಿನ ಕಂತಿನಲ್ಲಿ ಪಡೆದ ನಿಧಿಯ ಕನಿಷ್ಠ ಶೇ.75 ಬಳಸಿದ ನಂತರ ಮಾತ್ರ ಮುಂದಿನ ಕಂತು ಬಿಡುಗಡೆಗೊಳ್ಳಲಿದೆ. ಇದಕ್ಕೂ ಮೊದಲು, ನಿಧಿಯ ಬಳಕೆಯನ್ನು ಪರಿಶೀಲಿಸಲು ಕ್ಷೇತ್ರಮಟ್ಟದ ತನಿಖೆ ಅಥವಾ ಪರಿಶೀಲನೆ ನಡೆಸಲಾಗುತ್ತದೆ.

ಕಾರ್ಯವ್ಯಾಪ್ತಿ ಬದಲಾವಣೆ ಕಷ್ಟ

ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಅಥವಾ ಬದಲಾಯಿಸಲು ಬಯಸುವ ಸಂಸ್ಥೆಗಳಿಗೂ ಹೊಸ ನಿಯಮಗಳು ಆನ್ವಯವಾಗುತ್ತವೆ. ಹೊಸದಾಗಿ ಸೇರಿಸಲಾದ ರೂಲ್ 17ಬಿ ಪ್ರಕಾರ, ನೋಂದಣಿ ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾದ ಉದ್ದೇಶ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಸೇರಿಸಲು ಅಥವಾ ತೆಗೆದುಹಾಕಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕು. ಈ ಸಂಬಂಧ ಫಾರ್ಮ್ ಎಫ್‌ಸಿ-6ಎಫ್ ಮೂಲಕ ಅರ್ಜಿ ಸಲ್ಲಿಸಬೇಕು. ಜತೆಗೆ ಆಡಳಿತ ಮಂಡಳಿಯ ನಿರ್ಣಯ ಮತ್ತು ನಿಗದಿತ ಶುಲ್ಕವನ್ನು ಸಲ್ಲಿಸಬೇಕಾಗುತ್ತದೆ. ಅರ್ಜಿ ಕುರಿತು ಅಗತ್ಯ ತನಿಖೆ ನಡೆಸಿದ ಬಳಿಕ ಕೇಂದ್ರ ಸರ್ಕಾರ ಅನುಮೋದನೆ ಅಥವಾ ನಿರಾಕರಣೆ ನೀಡಬಹುದು.

ಮತಾಂತರಕ್ಕೆ ಅವಕಾಶವಿಲ್ಲ

ಆದರೆ, ಧರ್ಮಪ್ರಚಾರದ ಮೂಲಕ ಮತಾಂತರ ಮಾಡುವ ಚಟುವಟಿಕೆಗಳನ್ನು ಅನುಮತಿಸಲ್ಪಟ್ಟ ಧಾರ್ಮಿಕ ಚಟುವಟಿಕೆಗಳ ಪಟ್ಟಿಯಿಂದ ಸ್ಪಷ್ಟವಾಗಿ ಹೊರಗಿಡಲಾಗಿದೆ. ಧಾರ್ಮಿಕ ಶಿಕ್ಷಣ, ಸತ್ಸಂಗ, ಆಧ್ಯಾತ್ಮಿಕ ಪ್ರವಚನಗಳು ಮತ್ತು ಧ್ಯಾನ ಶಿಬಿರಗಳಿಗೆ ಅನುಮತಿ ಇದ್ದರೂ, ಅವುಗಳಲ್ಲಿ ಮತಾಂತರ ಉದ್ದೇಶ ಇರಬಾರದು ಎಂದು ನಿಯಮಗಳು ಹೇಳುತ್ತವೆ. ಅದೇ ರೀತಿ, ಮೂಲನಿವಾಸಿ ಮತ್ತು ಬುಡಕಟ್ಟು ಧಾರ್ಮಿಕ ಸಂಪ್ರದಾಯಗಳನ್ನು ದಾಖಲಿಸುವ ಅಥವಾ ಪುನರುಜ್ಜೀವನಗೊಳಿಸುವ ಕಾರ್ಯಗಳಿಗೆ ಅವಕಾಶವಿದ್ದರೂ, ಅವು ಮತಾಂತರಕ್ಕೆ ಕಾರಣವಾಗಬಾರದು.

ಭಾರತೀಯ ಪರಂಪರೆ ಆಧರಿತ ಕಲೆಗೆ ನೆರವು

ಸಾಂಸ್ಕೃತಿಕ ವಲಯದಲ್ಲಿ ಭಾರತೀಯ ಸಂಪ್ರದಾಯಗಳಿಂದ ಪ್ರೇರಿತವಾದ ಸಮಕಾಲೀನ ಕಲೆಗಳ ಪ್ರೋತ್ಸಾಹಕ್ಕೆ ವಿದೇಶಿ ಹಣ ಬಳಸಬಹುದು. ಆದರೆ ರಾಜಕೀಯ ಮತ್ತು ಸೈದ್ಧಾಂತಿಕ ವಿಷಯಗಳಿಗೆ ಅವಕಾಶ ಇರುವುದಿಲ್ಲ. ದೃಶ್ಯಕಲೆ, ಶಿಲ್ಪಕಲೆ, ಸಿನಿಮಾ, ಛಾಯಾಗ್ರಹಣ ಮತ್ತು ವಿನ್ಯಾಸದ ಅಭಿವೃದ್ಧಿ, ಸಾಂಸ್ಕೃತಿಕ ಮಾನವಶಾಸ್ತ್ರ, ಜನಾಂಗಶಾಸ್ತ್ರ ಮತ್ತು ಜಾನಪದ ಅಧ್ಯಯನದ ಸಂಶೋಧನೆಗೆ ವಿದೇಶಿ ನೆರವು ಪಡೆಯಬಹುದಾಗಿದೆ. ಭರತನಾಟ್ಯ, ಕಥಕ್, ಒಡಿಸ್ಸಿ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಮತ್ತು ಯಕ್ಷಗಾನ ಸೇರಿದಂತೆ ಶಾಸ್ತ್ರೀಯ ಕಲೆಗಳ ಸಂರಕ್ಷಣೆ ಮತ್ತು ಪ್ರೋತ್ಸಾಹಕ್ಕೂ ವಿದೇಶಿ ದೇಣಿಗೆ ಬಳಸಬಹುದು.

ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ

ಚಲನಚಿತ್ರಗಳು, ಆಕಾಶವಾಣಿ ಕಾರ್ಯಕ್ರಮಗಳು, ನಾಟಕದ ಹಸ್ತಪ್ರತಿಗಳು ಮತ್ತು ಛಾಯಾಚಿತ್ರಗಳ ಸಂಗ್ರಹ ಹಾಗೂ ಆಂಕೀಕರಣ, ಖಗೋಳಶಾಸ್ತ್ರ, ಗಣಿತ, ಲೋಹಶಾಸ್ತ್ರದ ಹಸ್ತಪ್ರತಿಗಳು ಮತ್ತು ಸಾಂಪ್ರದಾಯಿಕ ತಂತ್ರಜ್ಞಾನಗಳಂತಹ ವೈಜ್ಞಾನಿಕ ಹಾಗೂ ಜ್ಞಾನ ಪರಂಪರೆಯ ಸಂರಕ್ಷಣೆಗೆ ಅವಕಾಶ ನೀಡಲಾಗಿದೆ. ಸಾಹಿತ್ಯ ಅಕಾಡೆಮಿಗಳ ಸ್ಥಾಪನೆ, ಲೇಖಕರು, ಕವಿಗಳು ಮತ್ತು ಅನುವಾದಕರಿಗೆ ಬೆಂಬಲ ಹಾಗೂ ಪುಸ್ತಕ ಮೇಳಗಳ ಆಯೋಜನೆಗೂ ವಿದೇಶಿ ಹಣ ಬಳಸಬಹುದು.

ಶಿಕ್ಷಣ, ಉದ್ಯೋಗಕ್ಕೂ ಅನುಕೂಲ

ವಲಸೆ ಕಾರ್ಮಿಕರು, ನಿರಾಶ್ರಿತರು ಮತ್ತು ಅಲೆಮಾರಿ ಸಮುದಾಯಗಳ ಮಕ್ಕಳ ಶಿಕ್ಷಣ, ಶಾಲೆಗಳಲ್ಲಿ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣಕ್ಕೂ ವಿದೇಶಿ ದೇಣಿಗೆ ಬಳಸಬಹುದಾಗಿದೆ.ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅಧ್ಯಯನ ವೇತನ, ಮಾಸಿಕ ಭತ್ಯೆ ಮತ್ತು ಆರ್ಥಿಕ ನೆರವು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಶಿಕ್ಷಣ ಕಾರ್ಯಕ್ರಮಗಳು, ವಿಜ್ಞಾನ ಸಂಘಗಳು ಮತ್ತು ಆವಿಷ್ಕಾರ ಮೇಳಗಳಿಗೂ ನೆರವು ಪಡೆಯಬಹುದು. ಯುವ ನಾಯಕತ್ವ ಮತ್ತು ನಾಗರಿಕ ಭಾಗವಹಿಸುವಿಕೆ ಕಾರ್ಯಕ್ರಮಗಳೂ ಅನುಮತಿಸಲಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸೇರಿವೆ.

ಕಿರು

ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ ಯುಎಸ್ಎ, ಮೆಕ್ಸಿಕೋ, ಕೆನಡಾ ಜೂನ್ 11-ಜುಲೈ 19

೦೮ ಹೊಸ ದಿಗಂತ

ಗುರುವಾರ, 25 ಜೂನ್ 2026

ಹುಬ್ಬಳ್ಳಿ

ಗುರುವಾರದ ಪಂದ್ಯಗಳು

ದ.ಆಫ್ರಿಕಾ-ದ.ಕೊರಿಯಾ, (ಬೆಳಗ್ಗೆ 6:30)

ಜೆಕ್-ಮೆಕ್ಸಿಕೊ, (ಬೆಳಗ್ಗೆ 6:30)

ಕುರಾಕಾವೊ-ಐವರಿ ಕೋಸ್ಟ್ (ಮಧ್ಯರಾತ್ರಿ 1:30)

ಎಕ್ವಾಡಾರ್-ಜರ್ಮನಿ, (ಮಧ್ಯರಾತ್ರಿ 1:30)

ಕಿರುಸುದ್ದಿ

ವಂಶಿಕಾ-ಶಿವಗೆ ಬೆಳ್ಳಿ

ಹೊಸದಿಲ್ಲಿ: ಐಎಸ್ಎಸ್ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಜೋಡಿ ವಂಶಿಕಾ ಚೌಧರಿ ಮತ್ತು ಶಿವ ನರ್ವಾಲ್ ಅವರು 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಭಾರತೀಯ ಜೋಡಿ ಒಟ್ಟು 469.7 ಅಂಕಗಳನ್ನು ಗಳಿಸಿ ಪೋಲೆಂಡ್‌ನ ಮಾಲ್ಗೊರ್ಜಾಟಾ ಮತ್ತು ಇವಾನ್ ಅವರಿಗಿಂತ ಹಿಂದಿದೆ. ಈ ಜೋಡಿ ಒಟ್ಟು 471.9 ಅಂಕಗಳನ್ನು ಗಳಿಸಿತು. ಮಂಗಳವಾರದ ಬೆಳ್ಳಿ ಪದಕದೊಂದಿಗೆ, ಭಾರತ ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಒಟ್ಟಾರೆ ಪದಕಗಳ ಸಂಖ್ಯೆ ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಒಳಗೊಂಡಂತೆ 16 ಪದಕಗಳಿಗೆ ಏರಿದೆ.

ಆಶೀರ್ವಾದ್ ಸೂರ್ಯವಂಶಿ ಮತ್ತೆ ಶತಕ

ಜಾರ್ಖಂಡ್: ಮೊನ್ನೆಯಷ್ಟೇ ಶತಕ ಬಾರಿಸಿ ಗಮನ ಸೆಳೆದಿದ್ದ ವೈಭವ್ ಸೂರ್ಯವಂಶಿ ಸಹೋದರ ಆಶೀರ್ವಾದ್ ಸೂರ್ಯವಂಶಿ ಬುಧವಾರ ಸ್ಥಳೀಯ ಕ್ಲಬ್ ಪಂದ್ಯದಲ್ಲಿ ಮತ್ತೊಂದು ಶತಕ ಬಾರಿಸಿ ಮಿಂಚಿದ್ದಾರೆ. 10 ವರ್ಷದ ಆಶೀರ್ವಾದ್, ರಿಷವ್ 11 ಎಂಬ ತಂಡವನ್ನು ಪ್ರತಿನಿಧಿಸಿ 119 ಬಾಲ್‌ಗಳಲ್ಲಿ 168 ರನ್ ಬಾರಿಸಿದ್ದಾರೆ. ಈ ಇನ್ನಿಂಗ್ಸ್‌ನಲ್ಲಿ 19 ಬೌಂಡರಿ, 6 ಸಿಕ್ಸರ್ ಸೇರಿವೆ.

ವೈಭವ್‌ಗೆ ಬೇರೆ ಡ್ರೆಸ್ಸಿಂಗ್ ರೂಮ್

ಲಂಡನ್: ಐರ್ಲೆಂಡ್ ಮತ್ತು ಇಂಗ್ಲೆಂಡ್ ಸರಣಿಗಳಿಗೆ ಆಯ್ಕೆಯಾಗಿರುವ 15 ವರ್ಷದ ವೈಭವ್ ಸೂರ್ಯವಂಶಿಗೆ ಬೇರೆ ಡ್ರೆಸ್ಸಿಂಗ್ ರೂಮ್ ಒದಗಿಸಲು ಬಿಸಿಸಿಐ ಮತ್ತು ಸಂಬಂಧಿತ ಸಂಸ್ಥೆಗಳು ನಿರ್ಧರಿಸಿವೆ. ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಆಯ್ಕೆಯಾಗಿರುವ ಅತಿ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ವೈಭವ್ ಸೂರ್ಯವಂಶಿ ತಂಡದೊಂದಿಗೆ ಆಡಲಿದ್ದರೂ, ವಾಸ್ತವ್ಯ ತಂಡದೊಂದಿಗೆ ಮಾಡುವಂತಿಲ್ಲ. 16ರಿಗಿಂತಲೂ ಕಡಿಮೆ ವಯಸ್ಸನ್ನು ಹೊಂದಿರುವ ವೈಭವ್ ವೈಯಕ್ತಿಕ ಡ್ರೆಸ್ಸಿಂಗ್ ರೂಮ್ ಹೊಂದಿರಬೇಕೆಂಬುದು ಇಸಿಬಿ ಮತ್ತು ಐಸಿಸಿ ನಿಯಮವಾಗಿವೆ.

ಪಾಕ್‌ಗೆ ಹೀನಾಯ ಸೋಲು

ಬ್ರಿಸ್ಟಾಲ್: ಪಾಕಿಸ್ತಾನ ತಂಡವನ್ನು ಹೀನಾಯವಾಗಿ ಸೋಲಿಸಿರುವ ಆಸ್ಟ್ರೇಲಿಯಾ ಮಹಿಳೆಯರ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಸೂಪರ್-8ಕ್ಕೆ ಲಗ್ಗೆ ಹಾಕಿದಂತಿದೆ. ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಆಸೀಸ್ ಪಾಕ್ ತಂಡವನ್ನು ಬರೋಬ್ಬರಿ 113 ರನ್‌ಗಳಿಂದ ಮಣಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ಎಲ್ಲಿಸ್ ಪೆರ್ರಿ 48 ಬಾಲ್‌ಗಳಲ್ಲಿ 71 ರನ್ ಗಳಿಸಿದರು. ಜಾರ್ಜಿಯಾ ವಾಲ್ 39 ರನ್ ಗಳಿಸಿದರು. ಸುದರ್‌ಲೆಂಡ್ 27, ಕ್ಯಾರಿ 26 ರನ್ ಗಳ ಕೊಡುಗೆ ನೀಡಿದರು. ಪಾಕ್ ಪರ ಸಾದಿಯಾ, ನಶಾರಾ ಮತ್ತು ರಾಮೀನ್ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಪಾಕಿಸ್ತಾನ 86 ರನ್‌ಗಳಿಗೆ ಆಲೌಟ್ ಆಯಿತು. ಮುಬೀನಾ 32 ರನ್ ಗಳಿಸಿದ್ದೇ ಹೆಚ್ಚಾಗಿತ್ತು. ಆಸ್ಟ್ರೇಲಿಯಾ ಪರ ಪೆರ್ರಿ, ಸುದರ್‌ಲೆಂಡ್, ಸೋಫಿ ತಲಾ ಎರಡು ವಿಕೆಟ್ ಕಿತ್ತರು. ವಾರೆಹಮ್ 1 ವಿಕೆಟ್ ಕಿತ್ತರು.

ರಗ್ಬಿ: ಸೆಮಿಗೆ ಬೆಂಗಳೂರು

ಹೈದರಾಬಾದ್: ಗಚಿಬೌಲಿಯ ಗಂತಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ಕೋಲ್ಕತ್ತಾ ಬಂಗಾ ಟೈಗರ್ಸ್ ವಿರುದ್ಧ 26-21 ಅಂತರದ ಜಯ ಸಾಧಿಸಿ ಸೆಮಿಫೈನಲ್‌ಗೆ ಅರ್ಹತೆ ಪಡೆದಿತು. ಬೆಂಗಳೂರು ಬ್ರೇವ್‌ಹಾರ್ಟ್ಸ್ 26-21ರಿಂದ ಕೋಲ್ಕತ್ತಾ ಬಂಗಾ ಟೈಗರ್ಸ್‌ನ್ನು ಮಣಿಸಿತು.

ಫಿಫಾ ಸ್ಟಾರ್‌ನಿಂದ ಮೊದಲನೇ ಗೋಲ್! ಪೋರ್ಚುಗಲ್‌ಗೆ 5-0 ಭರ್ಜರಿ ಗೆಲುವು

ರೊನಾಲ್ಡೊ ಕಿಕ್!

ಹ್ಯೂಸ್ಟನ್: ಈ ಬಾರಿಯ ಫಿಫಾ ವಿಶ್ವಕಪ್‌ನಲ್ಲಿ 41 ವರ್ಷದ ಕ್ರಿಸ್ಟಿಯಾನೋ ರೊನಾಲ್ಡೊ ಮೊದಲ ಗೋಲು ಗಳಿಸಿದ್ದು, ಅವರ ದ್ವಿಗೋಲು ಪ್ರದರ್ಶನದೊಂದಿಗೆ ಪೋರ್ಚುಗಲ್ ತಂಡವು ಉಜ್ಬೇಕಿಸ್ತಾನ ವಿರುದ್ಧದ ಪಂದ್ಯದಲ್ಲಿ 5-0ರಿಂದ ಭರ್ಜರಿ ಗೆಲುವು ಸಾಧಿಸಿದೆ. ವಿಶ್ವಕಪ್‌ನಲ್ಲಿ ಎಂಬಾಪ್ಪೆ, ಮೆಸ್ಸಿ ಮ್ಯಾಜಿಕ್ ನಡೆಯುತ್ತಿತ್ತು. ಅಭಿಮಾನಿಗಳ ಪೈಸಾ ವಸೂಲ್ ಆವೃತ್ತಿಗಾಗಿ ರೊನಾಲ್ಡೊ ಗೋಲು ಬಾರಿಸಬೇಕಿತ್ತು. ಅದು ಮಂಗಳವಾರ ನಡೆಯಿತು.

41 ವರ್ಷದ ರೊನಾಲ್ಡೊ ಈ ಪಂದ್ಯದಲ್ಲಿ ದಾಖಲಿಸಿದ ಎರಡು ಗೋಲುಗಳ ಮೂಲಕ ಆರು ವಿಭಿನ್ನ ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆ ಮಾಡಿದರು. ಅವರ ಅದ್ಭುತ ಪ್ರದರ್ಶನಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಯೂ ಲಭಿಸಿತು. ಕಾಂಗೊ ವಿರುದ್ಧದ ಮೊದಲ ಪಂದ್ಯದಲ್ಲಿ ನಿರಾಸೆ ಮೂಡಿಸಿದ್ದ ರೊನಾಲ್ಡೊ ಅವರನ್ನು ಆರಂಭಿಕ ತಂಡದಲ್ಲೇ ಮುಂದುವರಿಸಿದ್ದ ಕೋಚ್ ರೊಬೆರ್ಟೊ ಮಾರ್ಟಿನೆಜ್ ಅವರ ನಿರ್ಧಾರ ಸಾರ್ಥಕವಾಯಿತು. ಪಂದ್ಯ ಆರಂಭವಾಗಿ ಕೇವಲ ಆರನೇ ನಿಮಿಷದಲ್ಲಿ ಜೋವೊ ಕಾನ್ಸೆಲೊ ನೀಡಿದ ಕ್ರಾಸ್ ಅನ್ನು ಗೋಲಾಗಿ ಪರಿವರ್ತಿಸಿದ ರೊನಾಲ್ಡೊ ಪೋರ್ಚುಗಲ್‌ಗೆ ಮುನ್ನಡೆ ತಂದುಕೊಟ್ಟರು. 17ನೇ ನಿಮಿಷದಲ್ಲಿ ನುನೊ ಮೆಂಡೆಸ್ ಫ್ರೀ-ಕಿಕ್ ಮೂಲಕ ಮತ್ತೊಂದು ಗೋಲು ದಾಖಲಿಸಿ ಅಂತರವನ್ನು 2-0ಕ್ಕೆ ಏರಿಸಿದರು. 39ನೇ ನಿಮಿಷದಲ್ಲಿ ಬ್ರುನೊ ಫರ್ನಾಂಡಿಸ್ ಪಾಸ್ ಅನ್ನು ಸದುಪಯೋಗಪಡಿಸಿಕೊಂಡ ರೊನಾಲ್ಡೊ ತಮ್ಮ ಎರಡನೇ ಗೋಲು ಬಾರಿಸಿ ಪೋರ್ಚುಗಲ್‌ಗೆ 3-0 ಮುನ್ನಡೆ ನೀಡಿದರು. ಎರಡನೇ ಅರ್ಧದಲ್ಲಿ ಉಜ್ಬೇಕಿಸ್ತಾನದ ಆತ್ಮಹತ್ಯಾ ಗೋಲಿನಿಂದ ಪೋರ್ಚುಗಲ್ 4-0 ಮುನ್ನಡೆ ಸಾಧಿಸಿತು. 87ನೇ ನಿಮಿಷದಲ್ಲಿ ಬದಲಿ ಆಟಗಾರ ರಫೇಲ್ ಲಿಯೊ ಐದನೇ ಗೋಲು ದಾಖಲಿಸಿ ತಂಡದ ಗೆಲುವಿಗೆ ಮೆರಗು ನೀಡಿದರು. ಈ ಜಯದೊಂದಿಗೆ ಪೋರ್ಚುಗಲ್ ಕೆ ಗುಂಪಿನಲ್ಲಿ ನಾಲ್ಕು ಅಂಕಗಳನ್ನು ಗಳಿಸಿ ತನ್ನ ನಾಕೌಟ್ ಹಂತದ ಆಸೆಗಳನ್ನು ಬಲಪಡಿಸಿಕೊಂಡಿದೆ.

ಅಂಕಿ-ಅಂಶ

- ರೊನಾಲ್ಡೊ ವಿಶ್ವಕಪ್ ಇತಿಹಾಸದಲ್ಲಿ ಆರು ವಿಭಿನ್ನ ಆವೃತ್ತಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ
- ರೊನಾಲ್ಡೊ ಎರಡು ಗೋಲು, ಪಂದ್ಯಶ್ರೇಷ್ಠ ಪ್ರಶಸ್ತಿ
- ನುನೊ ಮೆಂಡೆಸ್ ಮತ್ತು ರಫೇಲ್ ಲಿಯೊ ತಲಾ ಒಂದು ಗೋಲು



ನಾಕೌಟ್‌ಗೇರಿದ ಕೊಲಂಬಿಯಾ

ಗ್ವಾಡಲಜಾರಾ: ಡ್ಯಾನಿಯಲ್ ಮುನೋಸ್ ದಾಖಲಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಕೊಲಂಬಿಯಾ ತಂಡ ಕಾಂಗೊ ವಿರುದ್ಧ 1-0 ಅಂತರದ ಗೆಲುವು ಸಾಧಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ.

ಪಂದ್ಯದ ಬಹುತೇಕ ಅವಧಿಯಲ್ಲಿ ಕಾಂಗೊ ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಅದ್ಭುತ ಪ್ರದರ್ಶನ ನೀಡಿ ಕೊಲಂಬಿಯಾದ ದಾಳಿಯನ್ನು ತಡೆದಿದ್ದರು. ಆರಂಭದ 20 ನಿಮಿಷಗಳಲ್ಲೇ ಐದು ಕಠಿಣ ಸೇವ್‌ಗಳನ್ನು ಮಾಡಿ ಕೊಲಂಬಿಯಾ ಆಟಗಾರರನ್ನು ನಿರಾಸೆಗೊಳಿಸಿದ್ದರು. ಆದರೆ 76ನೇ ನಿಮಿಷದಲ್ಲಿ ಡ್ಯಾನಿಯಲ್ ಮುನೋಸ್ ಅವಕಾಶವನ್ನು ಕೈಚೆಲ್ಲಲಿಲ್ಲ. ರಕ್ಷಣಾ ಆಟಗಾರನ ಕಾಲಿಗೆ ತಾಗಿ ಬಂದ ಚೆಂಡನ್ನು ಎಡಗಾಲಿನ ಶಾಟ್ ಮೂಲಕ ಗೋಲಾಗಿ ಪರಿವರ್ತಿಸಿ ಕೊಲಂಬಿಯಾಗೆ ಅಮೂಲ್ಯ ಮುನ್ನಡೆ ನೀಡಿದರು. ಈ ಗೋಲನ್ನು ತಡೆಯಲು ಎಂಪಾಸಿಗೆ ಯಾವುದೇ ಅವಕಾಶ ಇರಲಿಲ್ಲ. ಈ ಗೆಲುವಿನೊಂದಿಗೆ ಕೊಲಂಬಿಯಾ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಗಳಿಸಿ ಕೆ ಗುಂಪಿನಿಂದ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎನಿಸಿತು. ಈಗ ಕೊನೆಯ ಲೀಗ್ ಪಂದ್ಯದಲ್ಲಿ ಕೊಲಂಬಿಯಾ ಮತ್ತು ಪೋರ್ಚುಗಲ್ ಮುಖಾಮುಖಿಯಾಗಲಿವೆ. ಆ ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಕೊಲಂಬಿಯಾ ಗುಂಪಿನ ಬೆಸ್ಟ್ ತಂಡವಾಗಲಿದೆ. ಅದೇ ಫಲಿತಾಂಶ ಪೋರ್ಚುಗಲ್ ತಂಡಕ್ಕೂ ನಾಕೌಟ್ ಹಂತದ ಟಿಕೆಟ್ ನೀಡಲಿದೆ.

- ಡ್ಯಾನಿಯಲ್ ಮುನೋಸ್ (76ನೇ ನಿಮಿಷ) ನಿರ್ಣಾಯಕ ಗೋಲು
- ಗೋಲ್‌ಕೀಪರ್ ಲಿಯೊನೆಲ್ ಎಂಪಾಸಿ ಐದು ಅದ್ಭುತ ಸೇವ್

ಕ್ರೊಯೇಷ್ಯಾ ಆಸೆ ಜೀವಂತ

ಟೊರೊಂಟೊ: ಅನುಭವಿ ನಾಯಕ ಲೂಕಾ ಮೊಡ್ರಿಚ್ ಅವರ 200ನೇ ಅಂತಾರಾಷ್ಟ್ರೀಯ ಪಂದ್ಯದಲ್ಲಿ, ಬದಲಿ ಆಟಗಾರ ಅಂಟೆ ಬುಡಿಮಿರ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಕ್ರೊಯೇಷ್ಯಾ 1-0 ಅಂತರದಲ್ಲಿ ಪನಾಮಾವನ್ನು ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಮೊದಲಾರ್ಧದಲ್ಲಿ ಉಭಯ ತಂಡಗಳು ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಆದರೆ ದ್ವಿತೀಯಾರ್ಧ ಆರಂಭವಾದ ಕೆಲವೇ ಕ್ಷಣಗಳಲ್ಲಿ ಕ್ರೊಯೇಷ್ಯಾ ಪಂದ್ಯದ ಮೇಲೆ ಹಿಡಿತ ಸಾಧಿಸಿತು. 54ನೇ ನಿಮಿಷದಲ್ಲಿ ಜೋಸಿಪ್ ಸ್ಟಾನಿಸಿಕ್ ನೀಡಿದ ನಿಖರ ಕ್ರಾಸ್ ಅನ್ನು ಅಂಟೆ ಬುಡಿಮಿರ್ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. ಅದೇ ಗೋಲಿನ ಬಲದಿಂದ ಕ್ರೊಯೇಷ್ಯಾ ಪಂದ್ಯವನ್ನು ಗೆದ್ದುಕೊಂಡಿತು.

ಇಂಗ್ಲೆಂಡ್-ಘಾನಾ ಪಂದ್ಯ ಡ್ರಾ

ಫಾಕ್ಸ್‌ಬರೋ: ಚೆಂಡಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ, ಗೋಲು ಅವಕಾಶಗಳ ಸುರಿಮಳೆಯನ್ನೇ ಸೃಷ್ಟಿಸಿದರೂ ಇಂಗ್ಲೆಂಡ್‌ಗೆ ಗೆಲುವು ಸಿಗಲಿಲ್ಲ. ಘಾನಾ ವಿರುದ್ಧದ ವಿಶ್ವಕಪ್ ಎಲ್ ಗುಂಪಿನ ಪಂದ್ಯ 0-0 ಗೋಲುರಹಿತ ಡ್ರಾದಲ್ಲಿ ಅಂತ್ಯಗೊಂಡಿತು. ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ ಇಂಗ್ಲೆಂಡ್ 19 ಶಾಟ್‌ಗಳನ್ನು ಪ್ರಯತ್ನಿಸಿದರೆ, ಘಾನಾ ಕೇವಲ ಒಂದು ಪ್ರಯತ್ನಕ್ಕೆ ಸೀಮಿತವಾಯಿತು. ಆದರೆ ಗೋಲು ಮಾತ್ರ ಎರಡೂ ತಂಡಗಳಿಂದ ಬರಲಿಲ್ಲ. ಮೊದಲಾರ್ಧದಲ್ಲಿ 60 ಶೇಕಡಾ ಚೆಂಡಿನ ಹಿಡಿತ ಹೊಂದಿದ್ದ ಇಂಗ್ಲೆಂಡ್ ಹಲವು ದಾಳಿಗಳನ್ನು ನಡೆಸಿದರೂ ಗೋಲು ಖಾತೆ ತೆರೆಯಲಿಲ್ಲ. ದ್ವಿತೀಯಾರ್ಧದಲ್ಲಿ ಘಾನಾ ಹೆಚ್ಚು ಆಕ್ರಮಣಕಾರಿ ಆಟವಾಡಿ ಇಂಗ್ಲೆಂಡ್‌ಗೆ ಸವಾಲೊಡ್ಡಿತು. ಈ ಫಲಿತಾಂಶದೊಂದಿಗೆ ಗುಂಪು ಎಲ್‌ನಲ್ಲಿ ನಾಕೌಟ್ ಪ್ರವೇಶದ ಹೋರಾಟ ಮತ್ತಷ್ಟು ರೋಚಕವಾಗಿದೆ. ಇಂಗ್ಲೆಂಡ್ ಮತ್ತು ಘಾನಾ ಎರಡೂ ತಂಡಗಳು ತಮ್ಮ ಅಂತಿಮ ಗುಂಪು ಪಂದ್ಯಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಕಾದಿವೆ.

ತ್ರಿಶಾ-ಗಾಯತ್ರಿ ಮುನ್ನಡೆ

ಫುಲ್ಲರ್‌ಟನ್(ಅಮೆರಿಕ): ಮೂರು ಸುತ್ತುಗಳ ರೋಚಕ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ ಜೋಡಿ ಇಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದೆ.

ಬುಧವಾರ ಶುರುವಾಗಿರುವ ಬ್ಯಾಡ್ಮಿಂಟನ್ ಕ್ಷೇತ್ರದ ಉತ್ತುಂಗ ಪಂದ್ಯಾವಳಿಯಲ್ಲಿ ಒಂದಾದ ಯುಎಸ್ ಓಪನ್ ಟೂರ್ನಮೆಂಟ್‌ನಲ್ಲಿ ಸ್ಪೇನ್‌ನ ಪೌಲಾ ಲೊಪೇಜ್ ಮತ್ತು ಲೂಸಿಯಾ ಅವರನ್ನು ಎದುರಿಸಿದ್ದ ಭಾರತ ಜೋಡಿ 21-12, 14-21, 21-13ರಿಂದ ಮೇಲುಗೈ ಸಾಧಿಸಿತು. ಗಾಯದ ಕಾರಣದಿಂದಾಗಿ ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ನಿಂದ ದೂರ ಉಳಿದಿದ್ದ ತ್ರಿಶಾ ಕಂಬ್ಯಾಕ್ ಮಾಡಿದರು. ಅವರಿಗೆ ಗಾಯತ್ರಿ ಸಾಥ್ ಸಿಕ್ಕಿತು. ಇಬ್ಬರೂ ಮೊದಲಿನಿಂದಲೂ ಕರಾರುವಾಕ್ ದಾಳಿ ಸಂಘಟಿಸಿದರು. ಆಕ್ರಮಣಕಾರಿ ಆಟದೊಂದಿಗೆ ಮೊದಲ ಸೆಟ್ ಅನ್ನು 21-12ರಿಂದ ಗೆದ್ದರು. ಎರಡನೇ ಸೆಟ್‌ನಲ್ಲಿ ಹಿನ್ನಡೆಯಾಯಿತು. ಎದುರಾಳಿ ಲೂಸಿಯಾ ಮತ್ತು ಪೌಲಾ ಎರಡನೇ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ 21-14ರಿಂದ ಗೆದ್ದರು. ಮೂರನೇ ಸೆಟ್‌ನಲ್ಲಿ ಮತ್ತೆ ದಾಳಿಗಿಳಿದ ಭಾರತ 21-13ರೊಂದಿಗೆ ಗೆದ್ದು ಎರಡನೇ ಸೆಟ್‌ಗೆ ಲಗ್ಗೆ ಹಾಕಿತು. ಮುಂದಿನ ಸೆಟ್‌ನಲ್ಲಿ ಈ ಜೋಡಿ, ಜಪಾನ್‌ನ ನಕಾಡೆ ಮತ್ತು ಮಿಯು ಅವರನ್ನು ಎದುರಿಸಲಿದೆ.

ಯುಎಸ್ ಓಪನ್ ಬ್ಯಾಡ್ಮಿಂಟನ್

ಮುಖ್ಯ ಡ್ರಾಗೆ ರೌನಕ್: ಭಾರತದ ಉದಯೋನ್ಮುಖ ಆಟಗಾರ ರೌನಕ್ ಚೌಹಾಣ್ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮಿಂಚುವುದರೊಂದಿಗೆ ಮೊದಲ ಸ್ಥಾನ ಪಡೆದು ಮುಖ್ಯ ಡ್ರಾಗೆ ಅರ್ಹರಾದರು. ಸತತ ಎರಡು ಗೆಲುವು ಸಾಧಿಸಿದ ಅವರು, ಮೊದಲಿಗೆ ಇನೊಗಾಟ್ ಎರಡನೇ ಸುತ್ತಿನಲ್ಲಿ ಕುವೊ ಕುವಾನ್ ಅವರನ್ನು ಎದುರಿಸಿದ್ದರು. ದಿನದ ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಇನೊಗಾಟ್ ರಾಯ್ ಅವರನ್ನು ಎದುರಿಸಿ 21-19, 21-16ರಿಂದ ಗೆದ್ದರು. ಎರಡನೇ ಪಂದ್ಯದಲ್ಲಿ ತೈವಾನ್‌ನ ಕುವಾನ್ ಅವರೊಂದಿಗೆ 13-21 21-14 21-10 ರಿಂದ ಗೆದ್ದರು.

ಶುಭಮನ್ ಗಿಲ್‌ಗೆ 2ನೇ ಶ್ರೇಯಾಂಕ

ದುಬೈ: ಟೆಸ್ಟ್ ಹಾಗೂ ಏಕದಿನ ತಂಡಗಳ ನಾಯಕ ಶುಭಮನ್ ಗಿಲ್ ಅವರು ಏಕದಿನ ಮಾದರಿಯಲ್ಲಿ ನಂಬರ್ 1 ಆಗುವತ್ತ ಸಾಗಿದ್ದು, ಪ್ರಕಟಗೊಂಡ ಶ್ರೇಯಾಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.

ಆಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಅವರು, ತಮ್ಮ ಮೊದಲ ಸ್ಥಾನಕ್ಕೇಗ ದೂರವೇನಿಲ್ಲ. ಮೊದಲಿನಿಂದಲೂ ಏಕದಿನ ಮಾದರಿಯಲ್ಲಿ ಪರಿಣಾಮಕಾರಿಯಾಗಿ ಪ್ರದರ್ಶನ ನೀಡಿರುವ ಗಿಲ್ ಆಫ್ಘಾನಿಸ್ತಾನ ವಿರುದ್ಧದ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಆಗಿಸಿದ್ದರು. ಈ ಬೆನ್ನಲ್ಲೇ ನ್ಯೂಜಿಲೆಂಡ್‌ನ ಡ್ಯಾರಿಲ್ ಮಿಚೆಲ್ ಅವರ ನಂತರದ ಸ್ಥಾನ ಪಡೆದಿದ್ದಾರೆ.

ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಆಫ್ಘಾನಿಸ್ತಾನ ಸರಣಿ ಆಡದ ಬೆನ್ನಲ್ಲೇ ಒಂದು ಸ್ಥಾನ ಇಳಿದಿದ್ದಾರೆ. ಇಷ್ಟು ದಿನ ಎರಡನೇ ಸ್ಥಾನದಲ್ಲಿದ್ದ ಅವರು, 768 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆಳಿದಿದ್ದಾರೆ. ರೋಹಿತ್ ಶರ್ಮ ನಾಲ್ಕನೇ ಸ್ಥಾನದಲ್ಲಿರುವ ಬೆನ್ನಲ್ಲೇ ಆಗ್ರ ಐದರಲ್ಲಿ ಮೂವರು ಭಾರತೀಯರಿರುವುದು ಭಾರೀ ಭರವಸೆ ಹೆಚ್ಚಿಸಿದೆ.

ಟೆಸ್ಟ್ ಬೌಲಿಂಗ್: ಬೂಮ್ರಾ ಸರಿಗಟ್ಟಿದ ಹೆನ್ರಿ: ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ವರ್ಷಾನುಗಟ್ಟಲೆ ನಂಬರ್ 1 ಆಗಿದ್ದ ಜಸ್‌ಪ್ರೀತ್ ಬೂಮ್ರಾ ಮೊದಲನೇ ಸ್ಥಾನದಲ್ಲಿದ್ದರೂ, ಅವರ ಸನಿಹಕ್ಕೂ ಯಾರೊಬ್ಬರು ಬಂದಿರಲಿಲ್ಲ. ಆದರೆ ಇತ್ತೀಚಿಗಷ್ಟೇ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ 11

CHANGE OF NAME

I, **HULAGAPPA KATTIMANI (Old Name)** R/o #9th Cross, Karki Basaveshwar Nagar. Hubli-580020 have changed my name to **HULIGEPPA ANNIGERI (New Name)** Vide Affidavit Sworn Before Notary T.G. Balannavar on 24-06-2026

CHANGE OF NAME

I, **SABIRA BANU MADAKI (Old Name)** R/o H.No. 223, 2nd Cross, Altaf Nagar. Near Masjid, Hubli-580024 have changed my name to **SABIRA BANU DHARWAD (New Name)** Vide Affidavit Sworn Before Notary S.F. Huilgol on 23-06-2026

CHANGE OF NAME

I, **SALEHA BEGUM HUKKERI (Old Name)** R/o H.No. 1/2, Koulpeth Momin Plot, Hubli-580028 have changed my name to **SALIYA BEGUM HUKKERI (New Name)** Vide Affidavit Sworn Before Notary S.F. Huilgol on 23-06-2026

ಕರ್ನಾಟಕ ಸರ್ಕಾರ
ಕರ್ನಾಟಕ ಮೃಗಾಲಯ ಪ್ರಾಧಿಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ/ ಉಪ ನಿರ್ದೇಶಕರವರ ಕಾರ್ಯಾಲಯ
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ
ಇಮೇಲ್: acfkalaburgit@gmail.com ಕಛೇರಿ ದೂ. ಸಂ. 08472-256601

ಸಂಖ್ಯೆ: ಉ.ನಿ/ಮೃಗಾಲಯ/ಪುಡ್ /ಟೆಂಡರ್ /ಸಿ.ಆರ್-/2026-27/263 ದಿನಾಂಕ : 24-06-2026

:: ಅಲ್ಪಾವಧಿಯ ಇ-ಟೆಂಡರ್ ಪ್ರಕಟಣೆ ::

(Karnataka Public Procurement Portal ನಡಿಯಲ್ಲಿ ಮಾತ್ರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ 2026-27ನೇ ಸಾಲಿಗೆ ಮೃಗಾಲಯದ ಪ್ರಾಣಿ ಪಕ್ಷೀಗಳಿಗೆ ಆಹಾರ ಧಾನ್ಯ ಸರಬರಾಜು ಮಾಡಲು ಟೆಂಡರನ್ನು Karnataka Public Procurement Portal ನಡಿಯಲ್ಲಿ ಆಹ್ವಾನಿಸಲಾಗಿದ್ದು, ಸದರಿ ವಿವರ ಈ ಕೆಳಗಿನಂತಿವೆ.

ವಿವರ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ರವರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ.

1) ಕಾಮಗಾರಿ : 2026-27ನೇ ಸಾಲಿಗೆ New Zoological park (Madbol) Kalaburagi ಮೃಗಾಲಯಕ್ಕೆ ಅವಶ್ಯವಿರುವ ಪ್ರಾಣಿ ಪಕ್ಷೀಗಳಿಗೆ ಆಹಾರ ಧಾನ್ಯ ಸರಬರಾಜು ಮಾಡಲು, 2) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ (ರೂ. ಲಕ್ಷಗಳಲ್ಲಿ) 2.594, ಗರಿಷ್ಠ (ರೂ. ಲಕ್ಷಗಳಲ್ಲಿ) 23.362 ಲಕ್ಷ,** 3) ಲೆಕ್ಕ ಶೀರ್ಷಿಕೆ : ZAK, 4) ಅರ್ಹತೆ : As per tender documents, 5) ಟೆಂಡರ್‌ಗೆ ಸಂಬಂಧಿಸಿದಂತೆ ಪ್ರಶ್ನೆಗಳು ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : **06-07-2026 ಸಾಯಂಕಾಲ 4.00 ಗಂಟೆಗೆ,** 6) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **08-07-2026 ಸಾಯಂಕಾಲ 4.00 ಗಂಟೆಗೆ,** 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09-07-2026 ರಂದು ಸಾಯಂಕಾಲ 4.30 ಗಂಟೆಗೆ,** 8) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **10-07-2026 ರಂದು ಸಾಯಂಕಾಲ 5.00 ಗಂಟೆಗೆ,** 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ, ಕಲಬುರಗಿ. ಮಿಂಚಂಚೆ ವಿಳಾಸ : acfkalaburgit@gmail.com, 10) ಅಂತರಜಾಲ ತಾಣದ ವಿಳಾಸ : http:kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು
ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/250/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಯಾದಗಿರ.
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್, ವಿಭಾಗ,
ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/ತಾಸ-1/2026-27/ 557 ದಿನಾಂಕ: 23.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW- 4(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಯ ಹೆಸರು ಇಂಟೆಂಡ್ ಸಂಖ್ಯೆ: ಸುರಪುರ ತಾಲೂಕಿನ ಶಳ್ಳಿಗಿ ಎಸ್.ಸಿ.ವಾರ್ಡದಿಂದ ಜಾಕ್ ವೆಲ್ ವರೆಗೆ ಬಿ.ಟಿ.ರಸ್ತೆ ಮತ್ತು ಸಿ.ಡಿ ನಿರ್ಮಾಣ. (0.00 ದಿಂದ 2.50 ಕಿಮೀ ವರೆಗೆ). RDPR/2026-27/RD/WORK_INDENT26924 **2) ಲೆಕ್ಕ ಶೀರ್ಷಿಕೆ:** 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 225.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 2ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 24.06.2026 ರಿಂದ 04.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 04.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 06.07.2026 ಬೆಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 10.07.2026 ಬೆಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202

ಸೂಚನೆ :- ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/127/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ ರವರ ಕಛೇರಿ
ಚಿಂಚೋಳಿ ಮಿಂಚಂಚೆ ವಿಳಾಸ : acfkalaburgit@gmail.com

ಸಂಖ್ಯೆ: ಸಅಸಂ/ಉವಿಚಿಂ/ಇ-ಟೆಂಡರ್ /ಸಿಆರ್-/2026-27/ ದಿನಾಂಕ : 23-06-2026

:: ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಟೆಂಡರ್) ::

2026-27ನೇ ಸಾಲಿನಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಾದೇಶಿಕ ಅರಣ್ಯ ಉಪ ವಿಭಾಗ ಚಿಂಚೋಳಿ ರವರ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ಹಾಗೂ ಚಿತ್ತಾಪೂರ ವಲಯಗಳಲ್ಲಿ ವಿವಿಧ ಯೋಜನೆಗಳಡಿ ಮಾನಸೂನ್ ನೆಡುತೋಪು ನಿರ್ಮಾಣ **ಅರಣ್ಯೇಕರಣ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಲಾಗಿದೆ.** ವಿವರ ಈ ಕೆಳಗಿನಂತಿದೆ.

ಕಾಮಗಾರಿಯ ವಿವರ : **ಚಿಂಚೋಳಿ ಪ್ರಾದೇಶಿಕ ಅರಣ್ಯ ಉಪ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಆಹ್ವಾನಿಸಲಾಗಿದೆ.** 1) ಟೆಂಡರ್ ಮೊತ್ತ : **ಕನಿಷ್ಠ (ರೂ. ಲಕ್ಷಗಳಲ್ಲಿ): 10.413, ಗರಿಷ್ಠ (ರೂ. ಲಕ್ಷಗಳಲ್ಲಿ) : 41.652,** 2) ಲೆಕ್ಕ ಶೀರ್ಷಿಕೆ : ವಿವಿಧ ಯೋಜನೆ, 3) **ಮೋದಲನೆ ಅವಧಿ :** ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **08-07-2026 ಅಪರಾಹ್ನ 4.00 ಗಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **09-07-2026 ಅಪರಾಹ್ನ 4.30 ಗಂಟೆಯ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **10-07-2026 ಅಪರಾಹ್ನ 5.00 ಗಂಟೆಯ,** 4) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ ವಿಭಾಗ ಚಿಂಚೋಳಿ, ಮಿಂಚಂಚೆ ವಿಳಾಸ :acfkalaburgit@gmail.com, 5) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಪ್ರಾದೇಶಿಕ ಅರಣ್ಯ ಉಪ ವಿಭಾಗ, ಚಿಂಚೋಳಿ

ವಾ.ಸಾ.ಸಂ.ಇ/ಕಲಬುರಗಿ/253/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಯೋಜನಾ ವಿಭಾಗ,
ಜಯನಗರ 1 ನೇ ಕ್ರಾಸ್, ವಿನಾಯಕ ಹಾಲ್ ಎದುರುಗಡೆ ಧಾರವಾಡ-580001,
ಫೋನ್ ನಂ : 0836-2959474 E-mail :eepiudwd@gmail.com

ಕ್ರ.ಸಂ:ಕಾನಿಇ/ಯೋವಿಧಾ/ಸ.ಇಂ.2/2026-27/216 ದಿನಾಂಕ : 24-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಯೋಜನಾ ವಿಭಾಗ, ಧಾರವಾಡ ಇವರ ಕಛೇರಿಯಿಂದ ಕಾಮಗಾರಿಯ ಐಟಂ ರೇಟ್ ದರಗಳ ಟೆಂಡರನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ದ್ವಿ ಲಕೋಟೆಯಲ್ಲಿ ಇಚ್ಛೆಯುಳ್ಳ ನೋಂದಾಯಿತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸುತ್ತದೆ.

ಕಾಮಗಾರಿ ವಿವರಗಳು : ಇಂಡೆಂಟ್ ನಂ. 1) KRRDA/2025-26/RD/Work Indent 535/CALL-2, ಟೆಂಡರ್‌ಗಿಟ್ಟ ಮೊತ್ತ & ಮುಂಗಡ ಠೇವಣಿ: ಕೆ.ಪಿ.ಪಿ ಪೋರ್ಟಲ್‌ನಲ್ಲಿ ವೀಕ್ಷಿಸುವುದು.

ಕ್ಯಾಲೆಂಡರ್ ಆಫ್ ಇವೆಂಟ್ಸ್ : (1) ಟೆಂಡರ್ ದಾಖಲೆಗಳನ್ನು ಡೌನಲೋಡ್ ಮಾಡಿಕೊಳ್ಳುವುದಕ್ಕಾಗಿ ದಿನಾಂಕ : **25-06-2026** (2) ಪ್ರೀ ಬಿಡ್ ಮೀಟಿಂಗ್ ದಿನಾಂಕ : **30-06-2026** ಬೆಳಿಗ್ಗೆ 11.00 ಗಂಟೆಗೆ (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **04-07-2026** ಸಂಜೆ 4.30 ಗಂಟೆಯವರೆಗೆ (4) ಟೆಂಡರ್ ಬಿಡ್ ತೆರೆಯುವ ದಿನಾಂಕ : **06-07-2026** ಮುಂಜಾನೆ 11.00 ಗಂಟೆಗೆ.

ಲೋಕೋಪಯೋಗಿ ಇಲಾಖೆ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನೀಯರ್, ಯೋಜನಾ ವಿಭಾಗ, ಧಾರವಾಡ ಇವರನ್ನು ಸಂಪರ್ಕಿಸಬಹುದು. ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಬಿ.ಕೆ. ಓಲೇಕರ್)
ಕಾರ್ಯನಿರ್ವಾಹಕ ಅಭಿಯಂತರು,
ಯೋಜನಾ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/354/ಕೆಎಸ್ಎಂಸಿಎ/2026-27

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಕೊಪ್ಪಳ.
City Municipal Council, Koppal. www.ka.koppal.cmc@gmail.com

ಸಂ:ನಸಕೊ/ಆರೋಗ್ಯ ಶಾಖೆ /2026-27/ ದಿನಾಂಕ:-23/06/2026

ಅಲ್ಪಾವಧಿ ಕೊಟೇಶನ್ ಪ್ರಕಟಣೆ

ಸನ್ 2026-27 ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ ಕೊಪ್ಪಳ ನಗರಸಭೆಯ ಈ ಕೆಳಗಿನ ವಾಹನ ಸಂಖ್ಯೆ ಕೆಎ 37 ಬಿ 0751 ವಾಹನಕ್ಕೆ ಅವಶ್ಯವಿರುವ ಸಾಮಗ್ರಿಗಳನ್ನು ಅಳವಡಿಸಿ ದುರಸ್ಥಿ ಹಾಗೂ ಟೈಯಾರ್ & ಟ್ಯೂಬ್‌ಗಳನ್ನು ಪೂರೈಸಿ ಅಳವಡಿಸಿ ಫ್ಹಿಲ್ ಅಲಾರ್ಜಮೆಂಟ್ ಮಾಡಲು ನಗರಸಭೆಯಿಂದ ಅಲ್ಪಾವಧಿ ಕೊಟೇಶನ್‌ನ್ನು ಆಹ್ವಾನಿಸಲಾಗಿದೆ. ಇಚ್ಚೆಯುಳ್ಳ ಮೇಕ್ಯಾನೀಕ್/ಟೈಯಾರ್ ಪೂರೈಕೆದಾರರು ಅಲ್ಪಾವಧಿ ಕೋಟೇಶನ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆ ನಗರಸಭೆ ಕೊಪ್ಪಳಕ್ಕೆ ಸಂಪರ್ಕಿಸಿ ಮಾಹಿತಿ ಪಡೆಬಹುದು ಅಥವಾ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ-08539-230192 ರಿಂದ ಮಾಹಿತಿ ಪಡೆಯಬಹುದು.

ಕ್ರ.ಸಂ	ಪೂರೈಕೆ ಹೆಸರು	ಸಂಖ್ಯೆ	ಅಂದಾಜು ಮೊತ್ತ ರೂ (ಸಾವಿರಗಳಲ್ಲಿ)
	ಸನ್ 2026-27 ನೇ ಸಾಲಿನ ನಗರಸಭೆ ನಿಧಿ		
1	ವಾಹನ ಸಂಖ್ಯೆ ಕೆಎ37 ಬಿ 0751ರ ವಾಹನಕ್ಕೆ ಅವಶ್ಯವಿರುವ ಸಾಮಗ್ರಿಗಳನ್ನು ಅಳವಡಿಸಿ ದುರಸ್ಥಿಗೊಳಿಸುವುದು.	01	75,000/-
2	ವಾಹನ ಸಂಖ್ಯೆ ಕೆಎ37 ಬಿ 0751ರ ವಾಹನಕ್ಕೆ ಅವಶ್ಯವಿರುವ ಟೈಯಾರ್ & ಟ್ಯೂಬ್‌ಗಳನ್ನು ಪೂರೈಸಿ ಅಳವಡಿಸಿ ಫ್ಹಿಲ್ ಅಲಾರ್ಜಮೆಂಟ್ ಮಾಡುವುದು.	04	25,000/-

ಷರತ್ತುಗಳು: 1. ಅಲ್ಪಾವಧಿ ಕೊಟೇಶನ್ ಪಡೆಯುವ ದಿನಾಂಕ :- **24/06/2026** ರಿಂದ **29/06/2026.** 2. ಅಲ್ಪಾವಧಿ ಕೊಟೇಷನ್ ಸಲುವಾಗಿ ಅರ್ಜಿ ಸಲ್ಲಿಸಲು ಹಾಗೂ KQ-1 ನಮೂನೆಯಲ್ಲಿ ಪಡೆಯಲು ಕೊನೆಯ ದಿನಾಕ : **29/06/2026** ಬೆಳಿಗ್ಗೆ 10.00 ಗಂಟೆಗೆ. 3. ಅಲ್ಪಾವಧಿ ಕೊಟೇಷನ್ ತೆರೆಯುವ ದಿನಾಂಕ : **29/06/2026** ಸಂಜೆ 4.00 ಗಂಟೆಗೆ. 4. ಯಾವುದೇ ಕಾರಣ ನೀಡದೆ ಅಲ್ಪಾವಧಿ ಕೊಟೇಷನ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ. 5. ತಾವು ನಮೂದಿಸುವ ದರದಲ್ಲಿ ಎಲ್ಲಾ ತೆರಿಗೆಗಳು ಸೇರಿಸಿ ನಮೂದಿಸತಕ್ಕದ್ದು. 6. ದುರಸ್ಥಿ ಮತ್ತು ಟೈಯಾರ್ ಭಾಗವಹಿಸುದಾದರೆ ಪ್ರತ್ಯೆಕವಾಗಿ ಕೋಟೇಶನ್ ಸಲ್ಲಿಸತಕ್ಕದ್ದು. 7. ದುರಸ್ಥಿಯ ವಿವರಗಳಿಗಾಗಿ ಕಾರ್ಯಾಲಯಕ್ಕೆ ಬೇಟಿ ನೀಡಿ ಕೋಟೇಶನ್ ಪ್ರತಿಗಳನ್ನು ಪಡೆಯತಕ್ಕದ್ದು.

ಡಿಜಿಪಿಆರ್/ಕೊಪ್ಪಳ/189/ಕೆಎಸ್ಎಂಸಿಎ/2026-27

ಸಹಿ/- ಪೌರಾಯುಕ್ತರು, ನಗರಸಭೆ ಕೊಪ್ಪಳ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ದಾಮಪಾ/ಸಾಆವಿ/ಪೌ.ನೇ/ಸಿಬ್ಬಂದಿ/3/ಸಿಆರ್/111/2026-27 ದಿನಾಂಕ:23-06-2026

ಅಧಿಸೂಚನೆ

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ:1572124/DMA/EST3/GRPD/5/2024. ದಿನಾಂಕ: 13-01-2026 ಪ್ರಕಾರ ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಆಇ 171 ಎಂಎನ್‌ಇ 2022(ಇ), ದಿನಾಂಕ:23.11.2022ರ ಅಧಿಸೂಚನೆ ಅನ್ವಯ ಮತ್ತು ಸರ್ಕಾರದ ಪತ್ರ ಸಂಖ್ಯೆ: ಯುಡಿಡಿ 188 ಎಂಎನ್‌ಇ 2022(ಇ) ದಿನಾಂಕ:20-12-2022 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸೇಹಿಮ 2026, ದಿನಾಂಕ:13-05-2026 ರನ್ವಯ ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ:07-08-2017 ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಮಾತ್ರ ನೇರ ನೇಮಕಾತಿಗೆ ಅರ್ಹರಿರುತ್ತಾರೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು-2022ರಡಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ	ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ	ಅರ್ಹತೆಗಳು
1	ಪೌರಕಾರ್ಮಿಕರು (ವೇತನ ಶ್ರೇಣಿ: ರೂ. 27,000-46,675)	15	(1) ಕನ್ನಡ ಮಾತನಾಡಲು ಗೊತ್ತಿರಬೇಕು. (2) ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ನೇರಪಾವತಿ ಪೌರಕಾರ್ಮಿಕರು, ನೇರಪಾವತಿ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ 2 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರುವ ಮತ್ತು ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ದಿನಾಂಕ: 07-08-2017 ರ ಪೂರ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. (3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ:13-05-2026 ರನ್ವಯ ಹುದ್ದೆಗಳ ವರ್ಗೀಕರಣ ಮಾಡಲಾಗಿದೆ. (4) ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ನಆಇ 171 ಎಂಎನ್‌ಇ 2022(ಇ), ದಿನಾಂಕ: 23.11.2022ರ ಅಧಿಸೂಚನೆ ಜಾರಿಗೆ ಬಂದ ದಿನಾಂಕಕ್ಕೆ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

ಹುದ್ದೆಗಳ ವರ್ಗೀಕರಣ:

ದಾವಣ

CHANGE OF NAME

I, **ASHWINI SHINDHE**
(Old Name) Resident of H No: Nava Ayodya Nagar 3rd Cross Hubballi Pin - 580024 (address), have changed my name as **ASHWINI MANJUNATH NARAYANKAR** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **AFREENBANU HULLUR**
(Old Name) Resident of Hosachapparband Colony Dharwad 580001 (address), have changed my name as **AFREEN BANU LACHHAN** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **RAJAKUMAR PATTAR**
(Old Name) Resident of 199, Panchaxari Nagar, Navnagar, Hubli, Dharwad, State: Karataka, Pin Code: 580025 (address), have changed my name as **RAJAKUMAR KASHINATH PATTAR** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **PUSHPALATHA VEERANNA BELLUDI** (Old Name) Resident of # 20 Sirur Park 2nd Stage Hubli, Dharwad Karnataka - 580021, have changed my name as **PUSHPALATA BELLUDI** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **NIDHI RAJEEV HATTARAKI**
(Old Name) Resident of Plot No 490 Leelanand, Shivabasav Nagar, Shivaji Nagar, Belagavi, Karnataka, Pin Code: 590016, have changed my name as **NIDHI RAJEEV HATTARKI** (New Name) henceforth I will be called and recognized by new name for all future purposes, dated: 24/06/2026.

ಇಂದಿನ ಉತ್ಪನ್ನವಾರು ದರ

ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ(ಕ್ವಿಂ)
ಅಲಸಂದೆ ಕಾಳು	3050	3050
ಕಡಲೆಕಾಳು	1330	5866
ಉದ್ದಿನಕಾಳು	4570	5226
ಒಣ ಮೆಣಸಿನಕಾಯಿ	8000	51000
ಹೆಸರುಕಾಳು	3610	5040
ನೆಲಗಡಲೆ (ಶೇಂಗಾ)	5099	5556
ಜೋಳ	4110	4735
ಮೆಕ್ಕೆಜೋಳ	2216	2216
ಈರುಳ್ಳಿ	500	2200
ಆಲೂಗಡ್ಡೆ	1300	1800
ಸೋಯಾಬಿನ್	6736	6955
ಗೋಧಿ	1969	2355

ಕ್ರಿ.ಮಿ. ನಂ. 26/2026
ಮಾನ್ಯ ಶ್ರೀಮತಿ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು : ಶ್ರೀಮತಿ ರಾಜೇ ಕೆಂಚ ರಾಜಬೇಕರ ಜಂಗಮ, ವಯಸ್ಸು: 36 ವರ್ಷ, ಉದ್ಯೋಗ ಮಹಿಳಾ, ಸಾ : ಮನೆ ನಂ.342, 19ನೇ ಕ್ರಾಸ್, ಸರಸ್ವತಿ ಶಾಲೆ ಎದುರಿಗೆ, ಆರ್ ಎಮ್ ಟೋಪಿಯಾ ನಗರ, ಗೋಕುಲ ರಸ್ತೆ, ಹುಬ್ಬಳ್ಳಿ-30.
ವಿರುದ್ಧ
ಎದುರುದಾರರು : ಮಾನ್ಯ ಸಹಾಯಕ ಆಯುಕ್ತರು, (ಜನನ-ಮರಣ ನೊಂದಣಿ ಅಧಿಕಾರಿಗಳು), ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ವಲಯ ಕಚೇರಿ ನಂ. 07, ಹುಬ್ಬಳ್ಳಿ.
ನೋಟೀಸು
ಈ ಮೇಲೆ ನಮೂದಿಸಿದ ಪ್ರಕರಣದಲ್ಲಿ ಅರ್ಜಿದಾರರು ತನ್ನ ತಂದೆಯಾದ ಶ್ರೀ ಚಂದ್ರಶೇಖರ ತೀರ್ಥಪ್ಪ ಪೂಜಾರ ಇವನು ದಿ:20-08-1996 ರಂದು ಹುಬ್ಬಳ್ಳಿ ತಹರ ಮನೆ ನಂ.342, 19ನೇ ಕ್ರಾಸ್, ಸರಕಾರಿ ಶಾಲೆ ಎದುರಿಗೆ, ಆರ್ ಎಂ ಟೋಪಿಯಾ ನಗರ, ಗೋಕುಲ ರಸ್ತೆ, ಹುಬ್ಬಳ್ಳಿಯ ಮನೆಯಲ್ಲಿ ಮರಣ ಹೊಂದಿರುತ್ತಾರೆ ಅಂತಾ ಕೋರಿ ಅರ್ಜಿ ಸಲ್ಲಿಸಿದ್ದು, ಆ ಪ್ರಕಾರ ಮರಣ ಪ್ರಮಾಣ ಪತ್ರ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಮೇಲ್ಕಾಣಿಸಿದ ಆರ್ಜಿಯನ್ನು ಸಲ್ಲಿಸಿದ್ದು, ಸದರ ಅರ್ಜಿಯ ಚೌಕಶಿಯು ದಿ:21-7-2026 ರಂದು ಬೆಳಿಗ್ಗೆ 11-00 ಗಂಟೆಗೆ ಈ ನ್ಯಾಯಾಲಯದಲ್ಲಿ ಮುದ್ದತ್ತು ನೇಮಿಸಿದ್ದು ಇರುತ್ತದೆ.
ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಸಂಬಂಧ, ತಂಟೆ, ವ ತಕರಾರು ವಗೈರೆ ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರಿಗೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಏಕಪಕ್ಷೀಯವಾಗಿ ಮುಂದಿನ ಸೂಕ್ತ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ.
ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 24-06-2026 ರಂದು ಇದನ್ನು ಕೊಡಲಾಗಿದೆ.
ಕೋರ್ಟ ಆಜ್ಞೆಯ ಮೇರೆಗೆ
ಹುಬ್ಬಳ್ಳಿ (ಕೋರ್ಟ ಮೊಹರು) ಸಹಿ/-ಶಿರಸ್ತೇದಾರರು
24-06-2026 ಮಾನ್ಯ ಶ್ರೀ ಜೆ.ಎಮ್.ಎಫ್.ಸಿ. ನ್ಯಾಯಾಧೀಶ ನ್ಯಾಯಾಲಯ, ಹುಬ್ಬಳ್ಳಿ
ಯು.ಕೆ.ಉತ್ತಂಗಿ
ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ

ಕ್ರಿಮಿನಲ್ ಮಿಸ್ ನಂ:93/2026
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ
ಅರ್ಜಿದಾರರು :ಶ್ರೀ ಆದಂಅಲಿ ತಂದೆ ಪಕ್ರುಸಾಬ ಮೊಗಲಲ್ಲಿ
ವಿರುದ್ಧ
ಎದುರುಗಾರರು:ಮೆ॥ ಮುಖ್ಯಾಧಿಕಾರಿಗಳು ಶಿಗ್ಗಾಂವ ಜನನ ಮರಣ ನೋಂದಣಿ ಅಧಿಕಾರಿಗಳು ಪುರಸಭೆ ಕಾರ್ಯಾಲಯಶಿಗ್ಗಾಂವ ತಾ॥ ಶಿಗ್ಗಾಂವ ಜಿ॥ ಹಾವೇರಿ
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಇದರಲ್ಲಿ ಅರ್ಜಿದಾರನ ಅಜ್ಜನಾದ (ತಂದೆಯ ತಂದೆ) ಮೌಲಾಸಾಬ ತಂದೆ ಪಕ್ರುಸಾಬ ಮೊಗಲಲ್ಲಿ ಇವರು ದಿನಾಂಕ: 01-01-2002 ರಂದು ಹಾವೇರಿ ಜಿಲ್ಲಾ ಶಿಗ್ಗಾಂವ ತಾಲೂಕ ಶಿಗ್ಗಾಂವ ಪಟ್ಟಣದ ಅರ್ಜಿದಾರರ ಮನೆಯಲ್ಲಿ ಸೋತೆ ಆಗಿರುತ್ತಾರೆ. ಸದರಿ ಹೋತಿಗೆ ನಾವು ವಾರಸುದಾರರು ಇದ್ದು, ಅವರ ವಾರಸಾ ಪಡೆಯಲು ಮೋತಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ ಇವರ ನ್ಯಾಯಾಲಯದಲ್ಲಿ ಮೇಲಿನ ನಂಬರಿನ ಪ್ರಕರಣ ದಾಖಲಿಸಿದ್ದು ಇದ್ದು, ಅದು ದಿನಾಂಕ: 29-07-2026 ರಂದು ಚಿಕಸಕಿಗಾಗಿ ಮುದ್ದತ್ತನ್ನು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು, ಇದ್ದಲ್ಲಿ, ಮೇಲಿನ ದಿನಾಂಕದಂದು ಮೆ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರಿಗೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಏಕಪಕ್ಷೀಯವಾಗಿ ಮುಂದಿನ ಸೂಕ್ತ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ.
ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಕೊಡಲಾಗಿದೆ.
ಶಿಗ್ಗಾಂವದಿನಾಂಕ: 18-06-2026
ಸಹಿ/-ಶಿರಸ್ತೇದಾರ
ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/-ಶ್ರೀ ಎಮ್.ಬಿ.ಪಾಲ್ಕಿಕಿ
ವಕೀಲರು, ಶಿಗ್ಗಾಂವ ಅರ್ಜಿದಾರರ ಪರ ವಕೀಲರು

ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,ಮುಧೋಳ ಇವರ ನ್ಯಾಯಾಲಯದಲ್ಲಿ
ಕ್ರಿಮಿನಲ್ ಮಿಸ್ಟೇನಿಯಸ್ ನಂ: 206/2026
1) ಸಯ್ಯದ @ ಸೈದುಸಾಬ ತಂದೆ ಹುಸೇನ @ ಹುಸೇನಸಾಬ ನದಾಫ 2.ಅಲ್ಲಾಬಕ್ಷ ಹುಸೇನಸಾಬ ನದಾಫ3)ಬಾಶಾಸಾಬ @ ಭಾಷಾ ತಂದೆ ಹುಸೇನಸಾಬ ನದಾಫ 4)ಮಾಬೂಬಿ @ ಮಹಾಬೂಬಿ ಗಂಡ ಸಲೀಮ @ ಸೈದುಸಾಬ ಕೆಂಚಿ @ನದಾಫ 5)ಹುಸೇನಬಿ ಗಂಡ ಅಬ್ದುಲಸಾಬ @ ಅಬ್ದುಲ ನದಾಫ6)ಮಹಿಬೂಬ @ ಮೈಬೂಬ ತಂದೆ ಅಬ್ದುಲ ನದಾಫ 7)ಶಾನೂರ ತಂದೆ ಅಬ್ದುಲ ನದಾಫ 8)ಮೀರಾಸಾಬ ತಂದೆ ಅಬ್ದುಲಸಾಬ@ ಅಬ್ದುಲ ನದಾಫ.'9)ಮುನ್ನಾ ತಂದೆ ಅಬ್ದುಲಸಾಬ @ ಅಬ್ದುಲ ನದಾಫ 10)ಸಾಧಿಕ ತಂದೆಅಬ್ದುಲಸಾಬ @ ಅಬ್ದುಲ ನದಾಫ 11) ಹುಸೇನಸಾಬ @ ಸಾಮು ತಂದೆ ಅಬ್ದುಲಸಾಬ ನದಾಫ12)ಶಾಹಿನಾ @ ಶಾಹೀನ ಗಂಡ ಮೌಲಾಸಾಬ ನದಾಫ 13) ಶಮಶಾದ ಗಂಡ ಹಾಜಸಾಬ ನದಾಫ 15) ಸೀಮಾ ತಂದೆ ಅಬ್ದುಲಸಾಬ ನದಾಫ
...ಅರ್ಜಿದಾರರು
ವಿರುದ್ಧ
1) ಮಾನ್ಯ ಪೌರಾಯುಕ್ತರು, ನಗರಸಭೆ ಮುಧೋಳಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು,ಮುಧೋಳ, ಜಿ: ಬಾಗಲಕೋಟ. 2)ಇಸ್ಮಾಯಿಲ್ ತಂದೆ ಹುಸೇನಸಾಬ ನದಾಫ ವಯಾ: 60ವರ್ಷ,ಉದ್ಯೋಗ:ಕೂಲಿ ಸಾಕೀನ: ಮುಧೋಳ ತಾ: ಮುಧೋಳ ಕುಂಬಾರಗಲ್ಲಿ, ಜಿ: ಬಾಗಲಕೋಟೆ. ...ಎದುರುದಾರರ
ಜಾಹೀರನಾಮೆ
ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಸಲ್ಲಿಸುವ ಮೂಲಕ ಅರ್ಜಿದಾರರ ಮಾವ ಮತ್ತು ಅಜ್ಜನಾದ ಹುಸೇನ ಸಾಬ ಸೈಮಸಾಬ ನದಾಫ್, ಇವರು ದಿನಾಂಕ: 17/04/1998 ರಂದು ಮುಧೋಳದಲ್ಲಿ ಮರಣ ಹೊಂದಿರುತ್ತಾರೆ. ಆ ಬಗ್ಗೆ ಎದುರುದಾರರು ಕಮ್ಮ ಕಾರ್ಯಾಲಯದ ಮರಣ ರಜಿಸ್ಟರ ದಲ್ಲಿ ದಾಖಲೆ ಮಾಡಿಕೊಳ್ಳದೇಕೆಂದು ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.
ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಕೇಸನ್ನಲ್ಲಿ ಯಾರಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸನ್ನಲ್ಲಿ ದಿನಾಂಕ: 27/7/2026 ರಂದು ಮುಂಜಾನೆ 10-30 ಗಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರು ವಗೈರೆ ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ಅರ್ಜಿದಾರರ ಮಾಂಗಣೆ ಪ್ರಕಾರ ಮುಂದಿನ ಆದೇಶ ಮಾಡಲು ಬರುವುದು ತಿಳಿಯಬೆ ಅಂತಾ ಕೊಟ್ಟ ಜಾಹೀರನಾಮೆ.
ಮುಧೋಳ.
ದಿನಾಂಕ: 29-06-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು,
ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಮುಧೋಳ ಇವರ ನ್ಯಾಯಾಲಯ
ಸಹಿ/- (ಶ್ರೀ ಪಿ.ಎಮ್. ವಸ್ತದ)
ಅರ್ಜಿದಾರರ ಪರ ವಕೀಲರು

CHANGE OF NAME

I, **RIDA RAZAKANAWAR**
(Old Name) Resident of 35, Kolekar Plot, Old Hubli, Sadar Sofa, Hubli, Dharwad Karnataka - 580024, have changed my name as **RIDA CHAOOS** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **LAKSHMI L UNAKAL**
(Old Name) Resident of 00, At Post: Rottigawad, Taluk: Kundgol, Dharwad, Karnataka, Pin Code: 581113, have changed my name as **RASHMI RAVIRAJAGOUDA HIREGOUDRA** (New Name) henceforth I will be called and recognized by new name for all future purposes, dated: 24/06/2026.

CHANGE OF NAME

I, **SHAHEEN W/O. MAHMADALI KHONDANNAVAR**, Age: 28 years, R/o. Munavalli, Taluka: Saundatti, Dist: Belagavi, in my SSLC Marks card my name is mentioned as **SHAHEEN LODHI** (Old Name) After marriage / changed my name as **SHAHEEN MAHMADALI KHONDANNAVAR** (New Name) for all purposes vide affidavit dated 18.06.2026 before Notary **A.R. JAKATI.**

ಜೆ.ಎಮ್.ಎಫ್.ಸಿ ವ ಹಿವಾಣಿ ನ್ಯಾಯಾಧೀಶರ ನ್ಯಾಯಾಲಯ ಶಿಗ್ಗಾಂವ ಇವರಲ್ಲಿ
ಕ್ರಿ.ಮಿ. ನಂ: 210/2026
ಅರ್ಜಿದಾರ:1)ಶ್ರೀ ಅಶೋಕ ಮಾಲಿಂಗಪ್ಪ ಗೂಳಣ್ಣವರ ವಯಾ॥50 ವರ್ಷ,ಉದ್ಯೋಗ॥ ಕೃಷಿಸಾ॥ ಹೋತನಹಳ್ಳಿ ತಾ॥ ಶಿಗ್ಗಾಂವ ಜಿ॥ ಹಾವೇರಿ2)ಶ್ರೀಮತಿ ಸುಮಂಗಲಾ ಕೋಂ ಬಸವರಾಜ ಹರ್ಕುಣಿ ವಯಾ॥ 52 ವರ್ಷ, ಉದ್ಯೋಗ॥ ಮನೆಗೆಲಸ ಸಾ॥ ಗುಡಿಗೇರಿ ತಾ॥ ಕುಂದಗೋಳ ಜಿ॥ ಧಾರವಾಡ
ವಿರುದ್ಧ
ಎದುರುಗಾರರು :ಉಪ-ತಹಶೀಲ್ದಾರರು. ವ ಜನನ-ಮರಣ ನೋಂದಣಾಧಿಕಾರಿಗಳು ಬಂಕಾಪೂರ ತಾ॥ ಶಿಗ್ಗಾಂವ, ಜಿ॥ ಹಾವೇರಿ
ಪತ್ರಿಕಾ ಪ್ರಕಟಣೆ
ಇದರಲ್ಲಿ 1 ಮತ್ತು 2 ನೇ ಅರ್ಜಿದಾರರ ಸಹೋದರನ ಹೆಂಡತಿ. ಈ ಅರ್ಜಿದಾರರ ಅಪೇಕ್ಷೆಯಾದ ಶ್ರೀಮತಿ ಶೋಭಾ ಕೋಂ ಮಹೇಶ ಗೂಳಣ್ಣವರ ಇವರು ದಿನಾಂಕ: 01-06-2008 ರಂದು ಶಿಗ್ಗಾಂವ ತಾಲೂಕ ಹೋತನಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ ಅಂತಾ ಮೈತಳ ಮರಣ ದಿನಾಂಕ ಪ್ರಮಾಣ ಪತ್ರ ಪಡೆಯಲು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು ಅದು ದಿನಾಂಕ: 17-07-2026 ರಂದು ಮುದ್ದತ್ತು ನೇಮಿಸಿದ್ದು ಇರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರಿಗೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಏಕಪಕ್ಷೀಯವಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.
ಈ ದಿವಸ ದಿನಾಂಕ:09-06-2026 ರಂದು ಸಹಿ ಹಾಗೂ ನ್ಯಾಯಾಲಯದ ಮೊಹರ ನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶ ಮೇರೆಗೆ
ಶಿಗ್ಗಾಂವ
ದಿನಾಂಕ: 09-06-2026
, ಸಹಿ/-ಶಿರಸ್ತೇದಾರ
ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/-ಶ್ರೀ ಆರ್.ಎಮ್.ಹಾರೋಗೇರಿ
ಅರ್ಜಿದಾರ ಪರ ವಕೀಲರು
ಮೋ.ನಂ:9972339747

ಕ್ರಿಮಿನಲ್ ಮಿಸ್ ನಂ: 94 /2026
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ
ಅರ್ಜಿದಾರರು :ಶ್ರೀ ಆದಂಅಲಿ ತಂದೆ ಪಕ್ರುಸಾಬ ಮೊಗಲಲ್ಲಿ
ವಿರುದ್ಧ
ಎದುರುಗಾರರು:ಮೆ॥ ಮುಖ್ಯಾಧಿಕಾರಿಗಳು ಶಿಗ್ಗಾಂವ ಜನನ ಮರಣ ನೋಂದಣಿ ಅಧಿಕಾರಿಗಳು ಪುರಸಭೆ ಕಾರ್ಯಾಲಯ ಶಿಗ್ಗಾಂವ ತಾ॥ ಶಿಗ್ಗಾಂವ ಜಿ॥ ಹಾವೇರಿ
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಇದರಲ್ಲಿ ಅರ್ಜಿದಾರನ ಅಜ್ಜಿಯಾದ (ತಂದೆಯ ತಾಯಿ) ಶ್ರೀಮತಿ ಜೈನಿಬ್ಬಿ ಕೋಂ ಮೌಲಾಸಾಬ ಮೊಗಲಲ್ಲಿ ಇವರು ದಿನಾಂಕ: 01-01-2004 ರಂದು ಹಾವೇರಿ ಜಿಲ್ಲಾ ಶಿಗ್ಗಾಂವ ತಾಲೂಕ ಶಿಗ್ಗಾಂವ ಪಟ್ಟಣದ ಅರ್ಜಿದಾರರ ಮನೆಯಲ್ಲಿ ಮೋತಿ ಆಗಿರುತ್ತಾರೆ. ಸದರಿ ಮೋತಿಗೆ ನಾವು ವಾರಸುದಾರರು ಇದ್ದು, ಅವರ ವಾರಸಾ ಪಡೆಯಲು ಮೋತಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ ಇವರ ನ್ಯಾಯಾಲಯದಲ್ಲಿ ಮೇಲಿನ ನಂಬರಿನ ಪ್ರಕರಣ ದಾಖಲಿಸಿದ್ದು ಇದ್ದು, ಅದು ದಿನಾಂಕ: 29-07-2026 ರಂದು ಚಿಕಸಕಿಗಾಗಿ ಮುದ್ದತ್ತನ್ನು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು, ಇದ್ದಲ್ಲಿ, ಮೇಲಿನ ದಿನಾಂಕದಂದು ಮೆ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರಿಗೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಏಕಪಕ್ಷೀಯವಾಗಿ ಮುಂದಿನ ಸೂಕ್ತ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ.
ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಕೊಡಲಾಗಿದೆ.
ಶಿಗ್ಗಾಂವ
ದಿನಾಂಕ: 18-06-2026
, ಸಹಿ/-ಶಿರಸ್ತೇದಾರ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/-ಶ್ರೀ ಎಮ್.ಬಿ.ಪಾಲ್ಕಿಕಿ
ವಕೀಲರು, ಶಿಗ್ಗಾಂವ ಅರ್ಜಿದಾರರ ಪರ ವಕೀಲರು

CHANGE OF NAME

I, **SEEMA** (Old Name) Resident of Shri Sai Nilaya, Shanti Nagara, Bandehalla, Durgadevi Temple Road, Honavar, Taluk : Honnavar, Uttara Kannada District, Pin code: 581334, Karnataka, have changed my name as **SEEMA JAGADISH JOSHI** (New Name) for all purposes affidavit Dtd.: 24-06-2026 sworn before notary **S. G. Hedge.**

CHANGE OF NAME

I, **ABDULAZIZ MAQBOOL SUNNEWALE** changing spouse name the undersigned **SHAHANAZ ABDULAZIZ SUNNEWALE** (new name) previously called: **FATIMA** (old name) Resident of Ward, No.06, Kalal Gall Shahpur Gate Vijayapura 586101 (address) henceforth I will be called and recognized by new name for all future purposes, dated: 24/06/2026.

CHANGE OF NAME

I, **ANSARI KARURI MOHAMED**
(Old Name) R/o: Intiqab Aalam House, Kola Garden, Madeena Colony 3rd Cross, Heble, Bhatkal -581320, Uttara Kannada, Karnataka, have changed my name as **MOHAMMED ANSAR KARURI S/O : MOHIDDIN NAKHURIA** (New Name) for all purposes affidavit Dtd.: 23-06-2026 sworn before notary **N. M. Hedge.**

IN THE COURT OF THE HON'BLE CIVIL JUDGE AND J.M.F.C. AT KUDLIGI
Crl.Misc. No. 565/2026
Between:-1.Thippeswamy S/o late Dodda Basappa, aged about 65 years,2.Smt. Channabasamma w/o late Sanna Veeranna, aged about 60 years,3.Siddanagouda s/o late Sanna Veeranna, aged about 23 years, 4.Smt. Savitha D/o late Sanna Veeranna aged about 28 years, 5.Smt. Eramma D/o late Kotresha aged about 42 years, 6.Veeranna son of late Kotresha aged about 40 years, 7.Smt. Siddamma D/o late Kotresha aged about 36 years,
All are Hindus, Agriculturists, R/o Kanchobanahalli village, Banvikalli post, in Kudligi Taluk, Vijayanagara District.
..... Petitioners
And
The Tahasildar Kudligi
.....Respondent
SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.
Whereas the above petitioners have instituted above petition to get the death certificate of their deceased petitioners No-1's father, Petitioner No-2's father-in law, and petitioner No-3 to 7's grandfather by Name DODDA BASAPPA S/o late DODDA BASAPPA was died on 01.01.1986 at Kanchobanahalli village, and Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 18.08.2026 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 10.06.2026.
By Order of the Court
Sd/-Chief Ministerial Officer, Civil Judge (J.D) Court at Kudligi
Sd/-Sri. K.Nagangouda,
Advocate, Kudligi

IN THE COURT OF THE HON'BLE CIVIL JUDGE AND J.M.F.C. AT KUDLIGI
Crl. Misc. No. 566/2026
Between:-1.Thippeswamy S/o late Dodda Basappa, aged about 65 years,2.Smt. Channabasamma w/o late Sanna Veeranna, aged about 60years, 3.Siddanagouda s/o late Sanna Veeranna, aged about 23 years, 4.Smt. Savitha D/o late Sanna Veeranna aged about 28 years, 5.Smt. Eramma D/o late Kotresha aged about 42 years, 6.Veeranna son of late Kotresha aged about 40 years, 7.Smt. Siddamma D/o late Kotresha aged about 36 years,
All are Hindus, Agriculturists, R/o Kanchobanahalli village, Banvikalli post, in Kudligi Taluk, Vijayanagara District.
.... Petitioners
And
The Tahasildar Kudligi
.....Respondent
SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.
Whereas the above petitioners have instituted above petition to get the death certificate of their deceased petitioners No-1's mother, Petitioner No-2's mother-in law, and petitioner No-3 to 7's grand mother by Name KODADA ERAMMA W/o late DODDA BASAPPA was died on 01.02.2001 at Kanchobanahalli village, in Kudligi Taluk, and Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 18.08.2026 at 11

ಕೃಷ್ಣಾ ಕೊಳ್ಳದ ನೀರಿನ ಹಕ್ಕಿಗಾಗಿ ರಾಜ್ಯವ್ಯಾಪಿ ಹೋರಾಟಕ್ಕೆ ಸಜ್ಜು

7 ಜಿಲ್ಲೆಗಳಲ್ಲಿ ಸಭೆ, ಪಾದಯಾತ್ರೆ, ಧರಣಿ

ವಿಜಯಪುರ: ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಬುಧವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರೈತ ಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಸಾಮಾಜಿಕ ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಮುಖಂಡರ ಸಭೆ ನಡೆಯಿತು.

ಸಭೆಯಲ್ಲಿ ಕೃಷ್ಣಾ ನದಿ ನೀರಿನ ಹಂಚಿಕೆ, ಆಲಮಟ್ಟಿ ಆಣೆಕಟ್ಟಿನ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಳ ಹಾಗೂ ಬಳಕೆ, ಕೃಷ್ಣಾ ಕಣಿವೆಯ ರೈತರ ನೀರಾವರಿ ಹಕ್ಕುಗಳು ಹಾಗೂ ಉತ್ತರ ಕರ್ನಾಟಕದ ಜನರ ನ್ಯಾಯಯುತ ಬೇಡಿಕೆಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಹಿರಿಯ ಹೋರಾಟಗಾರ ಎಸ್.ವಿ.ಪಾಟೀಲ ಅವರು, ಕೃಷ್ಣಾ ಕೊಳ್ಳದ ಜನರ ಹಕ್ಕುಗಳಿಗಾಗಿ ನಿರಂತರ ಹೋರಾಟ ಮತ್ತು ಪ್ರಯತ್ನಗಳನ್ನು ಮುಂದುವರಿಸಬೇಕು. ಮುಂದಿನ ಒಂದು ತಿಂಗಳೊಳಗೆ ಸಮಗ್ರ ಹೋರಾಟದ ಕರಡು ಸಿದ್ಧಪಡಿಸಿ, ವಿಷಯ ಪರಿಣಿತರು ಮತ್ತು ತಂತ್ರಜ್ಞರನ್ನು ಒಳಗೊಂಡ ಕಾರ್ಯಾಗಾರ ಆಯೋಜಿಸಿ ಮುಂದಿನ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಬೇಕೆಂದು ಸಲಹೆ ನೀಡಿದರು. ರವಿ ಪಾಟೀಲ ಅವರು ಮಾತನಾಡಿ, ನಾವು ಯೋಜನೆಯ ಫಲಾನುಭವಿಗಳಲ್ಲ, ಯೋಜನೆಯಿಂದ ನಿರಾಶ್ರಿತರಾದವರು. ಆದ್ದರಿಂದ ನಮ್ಮ ಹಕ್ಕುಗಳಿಗಾಗಿ ಹೋರಾಟ ಅನಿವಾರ್ಯವಾಗಿದೆ. ರಾಜ್ಯದ ಎಲ್ಲಾ ಸಂಬಂಧಿತ ಜಿಲ್ಲೆಗಳಲ್ಲಿ ಸಭೆಗಳನ್ನು ನಡೆಸಿ ಸ್ಥಳೀಯ ಹೋರಾಟ ಸಮಿತಿಗಳನ್ನು ರಚಿಸಬೇಕು.

ಜನಪ್ರತಿನಿಧಿಗಳ ಬೆಂಬಲ ಪಡೆಯಲು ಅವರನ್ನು ಹೋರಾಟದ ಭಾಗವಾಗಿಸಬೇಕು. ಹೋರಾಟವನ್ನು ಬಲಿಷ್ಠಗೊಳಿಸಲು ವಿವಿಧ ಸಂಘ-ಸಂಸ್ಥೆಗಳು ಮತ್ತು ಅಸೋಸಿಯೇಷನ್‌ಗಳಿಂದ ಆರ್ಥಿಕ ಸಹಕಾರ ಪಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಮುಂದಿನ ಹಂತದ ಹೋರಾಟದ ಕುರಿತು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ರಾಜ್ಯದ 7 ಜಿಲ್ಲೆಗಳಲ್ಲಿ ಜನಜಾಗೃತಿ ಸಭೆಗಳನ್ನು ನಡೆಸಿ ನೈಜ ಹೋರಾಟಗಾರರನ್ನು ಗುರುತಿಸುವ ಕಾರ್ಯ ಆರಂಭಿಸಲಾಗುವುದು. ಸಂಸದರು ಹಾಗೂ ಶಾಸಕರನ್ನು ಭೇಟಿ ಮಾಡಿ ಬೆಂಬಲ ಕೋರಲಾಗುವುದು. ಅಗತ್ಯವಿದ್ದಲ್ಲಿ ರಾಷ್ಟ್ರೀಯ ಮಟ್ಟದ ನಾಯಕರಾದ ರಾಹುಲ್ ಗಾಂಽ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಕೃಷ್ಣಾ ಕೊಳ್ಳದ ಜನರ ಬೇಡಿಕೆಗಳನ್ನು ಮಂಡಿಸಲು ಚರ್ಚಿಸಲಾಯಿತು.

ಸಭೆಯಲ್ಲಿ ಅದೃಶ್ಯಪ್ಪ ದೇಸಾಯಿ (ಗಲಗಲಿ), ವಿವಿಧ ರೈತ ಸಂಘಟನೆಗಳ ಮುಖಂಡರು, ಪ್ರಗತಿಪರ ಚಿಂತಕರು, ಸಾಮಾಜಿಕ ಹೋರಾಟಗಾರರು ಹಾಗೂ ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪರ್ತಗಾಳಿಯಲ್ಲಿ ಜೀವೋತ್ತಮ ವಿದ್ಯಾಪೀಠಂ ಉದ್ಘಾಟನೆ

ಪರ್ತಗಾಳಿ: ದಕ್ಷಿಣ ಅಯೋಧ್ಯೆ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಕೇಂದ್ರ ಮಠದಲ್ಲಿ ಬುಧವಾರ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹೊಸ ವೇದಾಧ್ಯಯನ ಕೇಂದ್ರವಾದ ಜೀವೋತ್ತಮ ವಿದ್ಯಾಪೀಠಂ ಉದ್ಘಾಟನೆಗೊಂಡಿತು.

ಪ್ರಧಾನಿ ನರೇಂದ್ರ ಮೋದಿ ಅವರಿಂದ ಲೋಕಾರ್ಪಣೆಗೊಂಡಿರುವ 77 ಅಡಿ ಎತ್ತರದ ಕಂಚಿನ ಶ್ರೀರಾಮ ಪ್ರತಿಮೆಯುಳ್ಳ ಮಠದಲ್ಲಿ ಪರಾಭವ ನಾಮ ಸಂವತ್ಸರದ ನಿಜ ಜ್ಯೇಷ್ಠ ಶುಕ್ಲ ದಶಮಿಯ ಶುಭ ಸಂದರ್ಭದಲ್ಲಿ ವಿದ್ಯಾಪೀಠಕ್ಕೆ ಚಾಲನೆ ನೀಡಲಾಯಿತು.

ಸುಮಾರು 550 ವರ್ಷಗಳ ಇತಿಹಾಸ ಹೊಂದಿರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠವು ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಪ್ರಸಾರ ಹಾಗೂ ಪೋಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದು, ದೇಶಾದ್ಯಂತ 34 ಶಾಖಾ ಮಠಗಳನ್ನು ಹೊಂದಿದೆ. ಮಠದ ಗುರುಪರಂಪರೆಯಲ್ಲಿ ಸಾಂಪ್ರದಾಯಿಕ ಗುರುಕುಲ ಪದ್ಧತಿಯ ಮೂಲಕ ವೇದ ಮತ್ತು ಶಾಸ್ತ್ರಗಳ ಅಧ್ಯಯನ ನಿರಂತರವಾಗಿ ನಡೆಯುತ್ತ ಬಂದಿದೆ.

1953ರಲ್ಲಿ ಶ್ರೀಮದ್ ದ್ವಾರಕಾನಾಥತೀರ್ಥ ಶ್ರೀಪಾದಂಗಳವರಿಂದ ಆರಂಭಗೊಂಡಿದ್ದ ಸಂಸ್ಕೃತ ಪಾಠಶಾಲೆಯನ್ನು ಬಳಿಕ ಶ್ರೀಮದ್ ವಿದ್ಯಾಧಿರಾಜ ತೀರ್ಥ ಶ್ರೀಪಾದರು ಪರ್ತಗಾಳಿಗೆ ಸ್ಥಳಾಂತರಿಸಿ ಜೀವೋತ್ತಮ ವೈದಿಕ ಸಂಸ್ಕೃತ ಪಾಠಶಾಲೆ ಎಂದು ನಾಮಕರಣ ಮಾಡಲಾಗಿತ್ತು. ಈ ಸಂಸ್ಥೆಯ ಮೂಲಕ ಐನೂರಕ್ಕೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದರು. ಆದರೆ ಆಧುನಿಕ ಶಿಕ್ಷಣದ ಪ್ರಭಾವದಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದ ಪರಿಣಾಮ 2016ರ ವೇಳೆಗೆ ಪ್ರವೇಶ ಪ್ರಕ್ರಿಯೆ ಸ್ಥಗಿತಗೊಂಡಿತ್ತು.

ಇದೀಗ ಸಮಾಜದಲ್ಲಿ ವೇದಾಧ್ಯಯನದ ಬಗ್ಗೆ ಪುನಃ ಆಸಕ್ತಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶತೀರ್ಥ ಶ್ರೀಪಾದ ವಡೆಯರ್ ಸ್ವಾಮೀಜಿಯವರು ಜೀವೋತ್ತಮ ವಿದ್ಯಾಪೀಠಂ ಹೆಸರಿನಲ್ಲಿ ಸಂಸ್ಥೆಯನ್ನು ಪುನಶ್ಚೇತನಗೊಳಿಸುವ ಮೂಲಕ ಹೊಸ ಚೈತನ್ಯ ತುಂಬಿದ್ದಾರೆ.

ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಶ್ರೀಪಾದರು, ಹಿಂದೂ ಸನಾತನ ಧರ್ಮದ ಸಂರಕ್ಷಣೆ ಹಾಗೂ ಶ್ರೀಮಧ್ವ ಸಿದ್ಧಾಂತದ ಅಧ್ಯಯನಕ್ಕೆ ಈ ವಿದ್ಯಾಪೀಠ ಕೇಂದ್ರಬಿಂದುವಾಗಲಿದೆ. ಐದು ವರ್ಷದ ಪಠ್ಯಕ್ರಮದಲ್ಲಿ ಸಂಸ್ಕೃತ, ವೇದ, ಕರ್ಮಾಂಗ ಮತ್ತು ಜ್ಯೋತಿಷ್ಯ ವಿಷಯಗಳಿಗೆ ಆದ್ಯತೆ ನೀಡಲಾಗುತ್ತದೆ. ಹತ್ತು ವರ್ಷದ ಪಠ್ಯಕ್ರಮದಲ್ಲಿ ಸಂಸ್ಕೃತ, ವೇದ, ಕರ್ಮಾಂಗ, ಜ್ಯೋತಿಷ್ಯ, ನ್ಯಾಯ, ವ್ಯಾಕರಣ ಮತ್ತು ವೇದಾಂತ ವಿಷಯಗಳ ಸಮಗ್ರ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ಹೇಳಿದರು.

ವಿದ್ಯಾಪೀಠದ ಸಂಸ್ಕೃತ ವಿಭಾಗಕ್ಕೆ ಗಣೇಶ್ ಭಟ್ ಗೋಕರ್ಣ ಹಾಗೂ ರಘೋತ್ತಮ ಆಚಾರ್ಯ ಬೆಂಗಳೂರು, ವೇದ ವಿಭಾಗಕ್ಕೆ ಅಥರ್ವ ಭಾಂಡೇಕರ್ ಮತ್ತು ಮುಖ್ಯೋಪಾಧ್ಯಾಯರಾಗಿ ಲಕ್ಷ್ಮೀಕಾಂತ ಭಟ್ ಅವರನ್ನು ನೇಮಕ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಮೋಹನದಾಸ ಪೈ, ಆರ್. ಎಸ್. ಶಾನುಭಾಗ, ಶ್ರೀನಿವಾಸ ವಿ. ದೆಂಪೋ, ರಾಮಚಂದ್ರ ಆರ್. ಕಾಮತ, ಆನಿಲ ಪೈ, ದಿನೇಶ ಪೈ, ಯೋಗೀಶ ಕಾಮತ ಸೇರಿದಂತೆ ವಿವಿಧ ಗಣ್ಯರು, ವೈದಿಕ ವೃಂದ, ಹಳೆಯ ವಿದ್ಯಾರ್ಥಿಗಳು ಹಾಗೂ ಸಮಾಜಬಾಂಧವರು ಉಪಸ್ಥಿತರಿದ್ದರು.

ಕಿರುಸುದ್ದಿ

ಭೀಕರ ಅಪಘಾತ: ಸ್ಥಳದಲ್ಲೇ ಮೂವರ ಸಾವು

ಕಲಬುರಗಿ: ಜಿಲ್ಲೆಯ ಚಿತ್ತಾಪುರದಿಂದ ಸನ್ನತಿಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಬೊಮ್ಮನಳ್ಳಿ ಕಡೆಯಿಂದ ಚಿತ್ತಾಪುರ ಕಡೆಗೆ ಹೋಗುತಿದ್ದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಮೇಲೆ ತೆರಳುತ್ತಿದ್ದ ಮೂವರ ಮೇಲೆ ಬಸ್ ಚಕ್ರಗಳು ಹರಿದು ಸ್ಥಳದಲ್ಲೇ ಯುವಕರು ಮೃತಪಟ್ಟ ಘಟನೆ ಬುಧವಾರ ರಾತ್ರಿ ನಡೆದಿದೆ.

ಬೊಮ್ಮನಹಳ್ಳಿ ಗ್ರಾಮದ ದೇವರಾಜ ತಂ. ಅಯ್ಯಪ್ಪ (19), ಮುಡಬೂಳ ಗ್ರಾಮದ ಲಕ್ಷ್ಮೀಕಾಂತ(20) ಹಾಗೂ ಸೇಡಂ ತಾಲೂಕಿನ ಬಿಜನಳ್ಳಿ ಗ್ರಾಮದ ಪ್ರಕಾಶ ತಂ. ಬಸಪ್ಪ(23) ಮೃತ ದುರ್ದೈವಿಗಳಾಗಿದ್ದಾರೆ. ಸದ್ಯ ಪೊಲೀಸರ ಕಲೆ ಹಾಕಿರುವ ಮಾಹಿತಿ ಪ್ರಕಾರ ಕೆಕೆಆರ್‌ಟಿಸಿ ಬಸ್‌ಗೆ ಮುಂಬದಿಯಿಂದ ಬೈಕ್ ರಭಸವಾಗಿ ಡಿಕ್ಕಿ ಹೊಡೆದಿರುವುದು ಕಂಡು ಬಂದಿದೆ.

ಘಟನಾ ಸ್ಥಳಕ್ಕೆ ಶಹಾಬಾದ ಡಿವೈಎಸ್‌ಪಿ ಶಂಕರಗೌಡ ಪಾಟೀಲ್, ಚಿತ್ತಾಪುರ ಸಿಪಿಐ ಎಸ್.ಬಿ.ಪಾಟೀಲ್ ಮತ್ತು ಪಿಎಸ್‌ಐ ಮಂಜುನಾಥ ರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿ ಶವಗಳನ್ನು ಚಿತ್ತಾಪುರ ತಾಲೂಕು ಆಸ್ಪತ್ರೆಯ ಶವಗಾರಕ್ಕೆ ರವಾನಿಸಿದ್ದಾರೆ. ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ.

ಬಿಸಿಎಂ ವಸತಿ ನಿಲಯದಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆ

ಕಲಬುರಗಿ: ಜಿಲ್ಲೆಯ ಸೇಡಂ ಪಟ್ಟಣದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ (ಬಿಸಿಎಂ) ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ನಡೆದಿದೆ.

ಮೃತ ವಿದ್ಯಾರ್ಥಿನಿಯನ್ನು ಚಂದ್ರಿಕಾ ತಿಪ್ಪೇಸ್ವಾಮಿ (19) ಎಂದು ಗುರುತಿಸಲಾಗಿದೆ. ಸೇಡಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎಸ್ಸಿ ವ್ಯಾಸಂಗ ಮಾಡುತ್ತಿದ್ದು, ವಸತಿ ನಿಲಯದಲ್ಲೇ ವಾಸವಾಗಿದ್ದರು. ವಸತಿ ನಿಲಯದಲ್ಲಿ ಯಾರೂ ಇಲ್ಲದ ಸಮಯದಲ್ಲಿ ಚಂದ್ರಿಕಾ ಅವರು ಕೊಠಡಿಯ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಘಟನೆ ಬೆಳಕಿಗೆ ಬಂದ ತಕ್ಷಣ ವಸತಿ ನಿಲಯದ ಸಿಬ್ಬಂದಿ ಹಾಗೂ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಸೇಡಂ ಪೊಲೀಸ್ ಠಾಣೆಯ ಅಧಿಕಾರಿಗಳು ಪರಿಶೀಲನೆ ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ.

ವಿದ್ಯಾರ್ಥಿನಿಯ ಆತ್ಮಹತ್ಯೆಗೆ ನಿಖರ ಕಾರಣ ಏನು ಎಂಬುದು ಇನ್ನೂ ತಿಳಿದು ಬಂದಿಲ್ಲ. ಈ ಸಂಬಂಧ ಸೇಡಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಭಾರತೀಯ ಸಂಸ್ಕೃತಿ ಅಳವಡಿಕೆಗೆ ಮುಂದಾದ ವಿದೇಶಿಗರು: ಭೇಂಡೆ

ಹುಬ್ಬಳ್ಳಿ: ದೇಶ ಸಂಸ್ಕೃತಿಯಲ್ಲಿ ಸಂಬಂಧ ಸೂಚಕ ಶಬ್ದಗಳಿಗೆ ಬಹಳ ಮಹತ್ವವಿದೆ. ಪಾಶ್ಚಾತ್ಯ ದೇಶದಲ್ಲಿ ಇಷ್ಟೊಂದು ಸಂಬಂಧ ಸೂಚಕಗಳು ಸಿಗುವುದಿಲ್ಲ. ಆದ್ದರಿಂದ ವಿದೇಶಿಗರು ಭಾರತೀಯ ಸಂಸ್ಕೃತಿ ಅಳವಡಿಕೆಗೆ ಮುಂದಾಗಿದ್ದಾರೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ತಿಳಿಸಿದರು.

ಮಂಗಳವಾರ ಜೆ.ಸಿ.ನಗರದ ಸರಸ್ವತಿ ಸದನದಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ವತಿಯಿಂದ ಹಮ್ಮಿಕೊಂಡಿದ್ದ 81ನೇ ಸಮಾಜ ದಿನೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಮ್ಮ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿ ಮಾರು ಹೋಗುತ್ತಿರುವುದು ಬೇಸರದ ಸಂಗತಿ ಎಂದರು. ಪ್ರಸ್ತುತವಾಹಿ ಜನರಿಗೆ ಅನುಕೂಲತೆ ಹೆಚ್ಚಾದರೂ ಭಾರತೀಯ ಕೌಟುಂಬಿಕ ಸಂಸ್ಕೃತಿ ಬದಲಾಗುತ್ತಿದೆ. ಕಳೆದ ಕೆಲ ದಶಕಗಳಿಗೆ ಹೋಲಿಸಿದರೆ ಪ್ರತಿಯೊಬ್ಬರ ಮನೆಯಲ್ಲಿಯೂ ಇಂದು ಸಮೃದ್ಧತೆ ಹೆಚ್ಚಾಗಿದೆ. ಆದರೆ, ಭಾರತೀಯ ಕುಟುಂಬ ವ್ಯವಸ್ಥೆ ಕ್ಷೀಣಿಸುತ್ತಿದೆ ಎಂದು ಹೇಳಿದರು.

ಮನೆಯ ಹಿರಿಯ ಸದಸ್ಯರು ನಮ್ಮ ಮಕ್ಕಳಿಗೆ ಭಾರತೀಯ ಕುಟುಂಬ ವ್ಯವಸ್ಥೆ ಬಗ್ಗೆ ತಿಳಿ ಹೇಳಬೇಕು. ಹೆಣ್ಣು ಕುಟುಂಬದ ಕಣ್ಣು, ಆ ಹೆಚ್ಚು ತಮ್ಮ ಮನೆಯಲ್ಲಿನ ಮಕ್ಕಳ ಚಲನವಲನಗಳ ಬಗ್ಗೆ ಜಾಗಧಿ ವಹಿಸಿ, ಶಿಕ್ಷಣದೊಂದಿಗೆ ಸಂಸ್ಕಾರವನ್ನು ಮಕ್ಕಳಿಗೆ ನೀಡಬೇಕು ಎಂದು ತಿಳಿಸಿದರು.

ಪಾಲಕರು ಮಕ್ಕಳಿಗೆ ಆಸ್ತಿ ಮಾಡುವ ಬದಲು ನಮ್ಮ ದೇಶದ ಆಚಾರ, ವಿಚಾರ, ಸಂಸ್ಕೃತಿ, ಧಾರ್ಮಿಕತೆಯನ್ನು ತಿಳಿ ಹೇಳುವ ಮೂಲಕ ಮಕ್ಕಳನ್ನೇ ಸಮಾಜದ ಆಸ್ತಿಯನ್ನಾಗಿ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರಾದ ಸತೀಶ ಮಹಾಲೆ, ಸುವರ್ಣಾ ಮಹಾಲೆ ದಂಪತಿ, ವಿಠ್ಠಲದಾಸ ಶಾನಭಾಗ, ವಿಜಯಾ ಶಾನಭಾಗ ದಂಪತಿ ಹಾಗೂ ಅರುಣ ಊರಣಕರ ಅವರನ್ನು ಸನ್ಮಾನಿಸಲಾಯಿತು. ಅದೇ ರೀತಿ ಎಸ್ ಎಸ್‌ಎಲ್‌ಸಿ, ಪಿಯುಸಿ ಹಾಗೂ ವಿವಿಧ ಪದವಿಗಳನ್ನು ಪಡೆದ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

ಉತ್ತಮ ಮಹಿಳಾ ಸ್ವಯಂ ಸೇವಕಿಯಾದ ರೇವತಿ ಪೈ ಅವರಿಗೆ ದಿ. ರಂಗಪ್ಪ ಪಾಂಡುರಂಗ ಕಾಮತ ರೋಲಿಂಗ್ ಶೀಲ್ಡ್, ಉತ್ತಮ ಪುರುಷ ಸ್ವಯಂ ಸೇವಕರಾರ ಪ್ರಮೋದ ಶೆಣೈ ಅವರಿಗೆ ದಿ. ಶೇಷಗಿರಿ ಪಾಂಡುರಂಗ ಕಾಮತ ರೋಲಿಂಗ್ ಶೀಲ್ಡ್ ನೀಡಿ ಪುರಸ್ಕರಿಸಲಾಯಿತು.

ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಅಧ್ಯಕ್ಷ ರಮೇಶ ನಾಯಕ, ಕಾರ್ಯದರ್ಶಿ ಪ್ರಮೋದ ಕಾಮತ, ಗಾಯತ್ರಿ ಹುಣಸವಾಡಕರ್, ಸದಾನಂದ ಕಾಮತ, ಅಜಯ ಅರವಿಂದ ಪ್ರಭು, ಗೋಪಾಲಕೃಷ್ಣ ಕಾಮತ, ಸುಲೋಚನಾ ನಾಯಕ ಇದ್ದರು.

ನನಗೆ ಜೀವ ಬೆದರಿಕೆ ಇದೆ: ಕಲ್ಲಯ್ಯಜ್ಜನವರು

ಗದಗ: ವೀರೇಶ್ವರ ಪುಣ್ಯಾಶ್ರಮದ ಮಠದ ಟ್ರಸ್ಟ್ ಹಾಗೂ ಮಠದ ಶಿಕ್ಷಣ ಸಮಿತಿಯಲ್ಲಿ ಇರುವ ಕೆಲವರಿಂದ ನನಗೆ ಜೀವ ಬೆದರಿಕೆ ಇದೆ ಎಂದು ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲಯ್ಯಜ್ಜನವರು ಆರೋಪಿಸಿದರು.

ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಠಕ್ಕೆ ದೇಣಿಯಾಗಿ ಬರುವ ವಸ್ತುಗಳನ್ನು, ಮಠದ ಆಸ್ತಿಯನ್ನು ಕಾಪಾಡಿಕೊಂಡು ಬರುತ್ತಿದ್ದೇವೆ. ಆದರೆ, ಮಠದ ಟ್ರಸ್ಟ್‌ನಲ್ಲಿ ಇರುವ ಕೆಲವರು ಮಠದ ಆಸ್ತಿ ಕಬಳಿಸಲು ವಿವಿಧ ರೀತಿಯಿಂದ ಹುನ್ನಾರ ನಡೆಸುತ್ತಿದ್ದಾರೆ.

ಕೆಲ ಸಮಿತಿ ಸದಸ್ಯರು ನನ್ನಿಂದ ಸಾಲ ಕೇಳಿದ್ದರು. ಆದರೆ, ಮಠಕ್ಕೆ ಬರುವ ದೇಣಿಗೆಯನ್ನು ಸಾಲ ನೀಡಲು ಸಾಧ್ಯವಿಲ್ಲ. ಸಾಲ ನೀಡುವುದಕ್ಕೆ ಮತ್ತು ನಾನಾ ಕಾರಣಗಳಿಂದ ವೈಮನಸ್ಸು ಮೂಡಿದೆ. ಜತೆಗೆ ಶಿಕ್ಷಣ ಸಮಿತಿಯಲ್ಲೂ ಅನಗತ್ಯ ಅನುಮಾನಗಳು ತೊಂದರೆಗಳನ್ನು ಕೆಲವರು ಉಂಟು ಮಾಡುತ್ತಿದ್ದಾರೆ. ಇದನ್ನು ಪ್ರಶ್ನಿಸಿದರೆ ನನಗೆ ಜೀವ ಬೆದರಿಕೆ ಹಾಕುತ್ತಿದ್ದಾರೆ. ಬಹಳ ದಿನಗಳಿಂದ ಬೆದರಿಕೆ ಒಡ್ಡುತ್ತಿದ್ದು, ಮಠದ ಗೌರವದಿಂದ ಸುಮ್ಮನಿದ್ದೆ. ಆದರೆ, ನಿರಂತರ ಬೆದರಿಕೆ ಬರುತ್ತಿದ್ದು, ನನಗೆ ಪ್ರಾಣಭಯ ಇದೆ. ಅದರಲ್ಲೂ ಆಶ್ರಮದ ಟ್ರಸ್ಟ್ ಹಾಗೂ ಶಿಕ್ಷಣ ಸಮಿತಿಯ ಪ್ರಮುಖ ಸದಸ್ಯರಿಂದಲೇ ತಮ್ಮ ಪ್ರಾಣಕ್ಕೆ ಕುತ್ತು ಬಂದಿದ್ದು, ಯಾವುದೇ ಕ್ಷಣದಲ್ಲಾದರೂ ತಮ್ಮ ಮೇಲೆ ಹಲ್ಲೆ ನಡೆಯುವ ಭೀತಿ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಮಠ ಹಾಗೂ ನನ್ನ ಮೇಲೆ ಅನಗತ್ಯ ಆರೋಪಗಳನ್ನು ಮಾಡಲಾಗುತ್ತಿದೆ. ಮಠದ ಓರ್ವ ಮುಸ್ಲಿಂ ಭಕ್ತನು ಮಠದ ರಥಕ್ಕೆ ಚಕ್ರವನ್ನು ದೇಣಿಗೆ ನೀಡಿದ್ದಾರೆ. ಚಕ್ರದ ಮೇಲೆ ಅವರ ಹೆಸರು ಇದೆ. ಇದನ್ನೆ ನೆಪವಾಗಿ ಇಟ್ಟುಕೊಂಡು ಮಠದ ಪೀಠಾಧಿಪತಿ ಆಗಿರುವ ನಮ್ಮ ಮೇಲೆ ಕೆಲವರು ಅನಗತ್ಯ ಆರೋಪ ಹೊರಿಸಲಾಗುತ್ತಿದೆ ಎಂದರು.

ಮಠಕ್ಕೆ ಎಲ್ಲರೂ ಭಕ್ತರೆ ಆಗಿದ್ದು, ಹಲವು ದೇಣಿಗೆ ನೀಡಿದ ಭಕ್ತರ ಹೆಸರುಗಳು ಅವರ ದೇಣಿಗೆ ನೀಡಿದ ವಸ್ತುಗಳ ಮೇಲೆ ಇವೆ. ಆದರೆ, ಓರ್ವ ಮುಸ್ಲಿಂ ಭಕ್ತ ದೇಣಿಗೆ ನೀಡಿದ್ದನ್ನು ಅನಗತ್ಯ ಅಪಪ್ರಚಾರ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳು ಕೋಮುವಾದ ಸೃಷ್ಟಿಸ

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಘಟನೆ | ಗ್ರಾಮಸ್ಥರಿಂದ ಪ್ರತಿಭಟನೆ

ವೈದ್ಯಾಧಿಕಾರಿ ಬದಲು ಪತ್ನಿಯಿಂದ ಚಿಕಿತ್ಸೆ!

ಕಲಾದಗಿ: ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಎಚ್.ವಿ.ಲೇಬಗೇರಿ ಬದಲು ಯಾವುದೇ ರೀತಿಯ ವೈದ್ಯಕೀಯ ಅರ್ಹತೆ ಇಲ್ಲದ ಅವರ ಪತ್ನಿಯಿಂದ ರೋಗಿಗಳ ಚಿಕಿತ್ಸೆ ನಡೆಯುತ್ತಿದೆ ಎಂದು ಗ್ರಾಮಸ್ಥರಿಂದ ಆರೋಪ ಕೇಳಿ ಬಂದಿದ್ದು, ಈ ವಿಚಾರವಾಗಿ ವೈದ್ಯಾಧಿಕಾರಿಗೆ ಗ್ರಾಮಸ್ಥರಿಂದ ತರಾಟೆ ತೆಗೆದುಕೊಂಡ ಘಟನೆ ಬುಧವಾರ ಬೆಳಗ್ಗೆ ನಡೆದಿದೆ.

ಗ್ರಾಮ ಹಾಗೂ ಸುತ್ತಮುತ್ತಲಿನ 18ಕ್ಕೂ ಹೆಚ್ಚು ಹಳ್ಳಿಗಳ ವ್ಯಾಪ್ತಿಗೆ ಒಳ ಪಡುವ ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದೊಂದು ವಾರದಿಂದ ಯಾವುದೇ ರೀತಿಯ ಮೇಲಧಿಕಾರಿಗಳ ಗಮನಕ್ಕೂ ಬಾರದಂತೆ ರೋಗಿಗಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ವೈದ್ಯಾಧಿಕಾರಿಯ ಪತ್ನಿಯೇ ಚಿಕಿತ್ಸೆ ಹಾಗೂ ಔಷದಿ ನೀಡುತ್ತಿದ್ದಾರೆ ಎಂದು ಗ್ರಾಮಸ್ಥರು ಗಂಭೀರವಾಗಿ ಆರೋಪಿಸಿದರು.

ವೈದ್ಯಾಧಿಕಾರಿಯ ತಪಾಸಣಾ ಕೋಣೆಯಲ್ಲಿ ವೈದ್ಯರ ರೀತಿಯೇ ಚೇರ್‌ನಲ್ಲಿ ಕೂತು ತಪಾಸಣೆ ನಡೆಸುವುದಲ್ಲದೇ 6ವರ್ಷಕ್ಕಿಂತ ಒಳಗಿನ ಮಕ್ಕಳಿಗೆ ಡೋಲೊ 650 ಮಾತ್ರೆ ಹಾಗೂ ಪೆನ್ ಕಿಲ್ಲರ್ ಇಂಜೆಕ್ಷನನಂತಹ ಔಷಧಿಗಳನ್ನು ನೀಡುತ್ತಿರುವ ಬಗ್ಗೆ ಸ್ಥಳೀಯರು ದೂರಿದರು.

ಈ ಬಗ್ಗೆ ವೈದ್ಯಾಧಿಕಾರಿ ಎಚ್.ವಿ.ಲೇಬಗೇರಿಯವರಿಗೆ ಪತ್ನಿ ತಪಾಸಣೆ ನಡೆಸುತ್ತಿರುವ ಬಗ್ಗೆ ಹಾಗೂ ತಪ್ಪು ತಪ್ಪಾದ ಔಷಧಿ ನೀಡುತ್ತಿರುವ ಬಗ್ಗೆ ಪ್ರಶ್ನಿಸಿದರೆ ಪತ್ನಿ ಎಂಜಿನಿಯರಿಂಗ್ ಮುಗಿಸಿದ್ದಾಳೆ ಎಂದು ಹಾರಿಕೆ ಉತ್ತರ ನೀಡುವುದರ ಜೊತೆಗೆ, ಚಿಕಿತ್ಸೆಗೆಂದು ಬರುತ್ತಿದ್ದ ಸಾರ್ವಜನಿಕರೊಂದಿಗೆ ಸಿಟ್ಟಿನಿಂದಲೇ ಮಾತನಾಡುತ್ತಿರುವ ಬಗ್ಗೆ ಸಾರ್ವಜನಿಕರು ದೂರು ನೀಡುತ್ತಿದ್ದು ಈ ಬಗ್ಗೆ ಸಿಇಒ ಡಾ.ಮಂಜುನಾಥ ಹಾಗೂ ಟಿ.ಎಚ್.ಓ ಮಾಗಿಯವರೊಂದಿಗೆ ದೂರವಾಣಿಯೊಂದಿಗೆ ಮಾತನಾಡಿ, ರೋಗಿಗಳ ಜೀವದ ಜೊತೆ ಚಲ್ಲಾಟವಾಡುತ್ತಿರುವ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

> **ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿ ಪತ್ನಿ ರೋಗಿಗಳ ತಪಾಸಣೆ ನಡೆಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದು ಅವರಿಗೆ ನೋಟಿಸ್ ನೀಡಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು.**
> ■ ಡಾ.ಸರಸ್ವತಿ ಮಾಗಿ, ಬಾಗಲಕೋಟೆ ಟಿ.ಎಚ್.ಓ.

ವಿರೂಪಾಕ್ಷ ಮಾಮನಿ ಜನ್ಮದಿನ ಸಂಭ್ರಮದಿಂದ ಆಚರಣೆ

ಯರಗಟ್ಟಿ: ಸವದತ್ತಿ ಮಂಡಲ ಬಿಜೆಪಿ ಅಧ್ಯಕ್ಷ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವಿರೂಪಾಕ್ಷ ಮಾಮನಿ ಅವರ ಹುಟ್ಟುಹಬ್ಬದ ಸಂಭ್ರಮಾಚರಣೆಯಲ್ಲಿ ಅಭಿಮಾನಿಗಳು 135 ಅಡಿ ಎತ್ತರದ ಹೂವಿನ ಮಾಲೆ ಗಮನ ಸೆಳೆದಿದ್ದರು.

ಈ ಸಂದರ್ಭದಲ್ಲಿ ಬೃಹತ್ ಸಿಹಿ ಹಂಚಿಕೆ ಮತ್ತು ಉಪಾಹಾರ ವ್ಯವಸ್ಥೆಯನ್ನು ಮಾಡಲಾಗಿತ್ತು. ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಭಾವಿ ನಾಯಕರಾದ ವಿರೂಪಾಕ್ಷ ಮಾಮನಿ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅಭಿಮಾನಿಗಳು ಅವರನ್ನು 'ಮುಂದಿನ ಶಾಸಕ' ಎಂದು ಕರೆದು ಪೋಸ್ಟರ್‌ಗಳನ್ನು ಹಾಕಿ ಕಾರ್ಯಕರ್ತರು ಸಂಭ್ರಮಿಸಿದರು.

ಜನಪ್ರಿಯ ನಾಯಕ ವಿರುಪಾಕ್ಷ ಮಾಮನಿ ಅವರಿಗೆ ವಿವಿಧ ಗಣ್ಯರು ಮತಕ್ಷೇತ್ರದ ಅಭಿಮಾನಿಗಳು ಜನ್ಮದಿನದ ಶುಭಾಶಯ ಕೋರಿದರು ಹಾಗೂ ಕಾರ್ಯಕರ್ತರಿಂದ ಭರ್ಜರಿ ಸತ್ಕಾರ ಸ್ವೀಕರಿಸಿದರು.

ಬೆಳಿಗ್ಗೆ ರೇಣುಕಾ ಯಲ್ಲಮ್ಮನ ದೇವಿಗೆ ಹಾಗೂ ಮನೆ ದೇವರಾದ ಜಾಲಿಕಟ್ಟಿ ಬಸವೇಶ್ವರರಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದುಕೊಂಡರು.

ಈ ವೇಳೆ ಸತ್ತಿಗೇರಿ ಪೂಜ್ಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಯಲ್ಲಮ್ಮ ದೇವಸ್ಥಾನ ಸಮಿತಿ ಮಾಜಿ ಅಧ್ಯಕ್ಷ ಬಸಯ್ಯ ಹಿರೇಮಠ, ನಿಕಟ ಪೂರ್ವ ಬಿಜೆಪಿ ಮಂಡಳ ಅಧ್ಯಕ್ಷ ಈರಣ್ಣಾ ಚಂದರಗಿ, ಯರಗಟ್ಟಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚೇತನ ಜಕಾತಿ, ಬಿಜೆಪಿ ಮಂಡಳ ಉಪಾಧ್ಯಕ್ಷ ಮಹಾಂತೇಶ ಗೋಡಿ, ಸಂಜೀವಕುಮಾರ ನವಲಗುಂದ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ತೊರಗಲ್, ಪ್ರಧಾನ ಕಾರ್ಯದರ್ಶಿ ಮಹಾದೇವ ಮುರಗೋಡ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ ಬಾಗೋಡಿ, ವೆಂಕಟೇಶ ದೇವರಡ್ಡಿ, ಸುರೇಶ ಬಂಟನೂರ, ಚಂದ್ರಶೇಖರ ಆಳಗೋಡಿ, ಸದಾನಂದ ಪಾಟೀಲ, ಬಾಬು ಹಡಪದ, ಅನಿಲ ದೇವರಡ್ಡಿ, ಬಾಳೇಶ ಮುಗಳಿ, ಚನ್ನಬಸು ತಲ್ಲೂರ, ಸೋಮು ಪಟ್ಟೇದ, ಗೋಪಾಲ ಮುಗಳಿ, ವಿವೇಕ ಕರ್ಜಿಗಿಮಠ, ಸಾಗರ ಪಾಳೇಕರ, ಲಿಂಗರಾಜ ಕುರುಬಗಟ್ಟಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸವದತ್ತಿಯಲ್ಲಿ ಸಂಭ್ರಮ

ಸವದತ್ತಿ: ಬಿಜೆಪಿ ಮಂಡಲ ಅಧ್ಯಕ್ಷ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವಿರೂಪಾಕ್ಷ ಮಾಮನಿ ಅವರು ತಮ್ಮ ಹುಟ್ಟುಹಬ್ಬವನ್ನು ಅಭಿಮಾನಿಗಳು, ಪಕ್ಷದ ಕಾರ್ಯಕರ್ತರೊಂದಿಗೆ ನಗರದ ಎಪಿಎಂಸಿ ಆವರಣದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಿಕೊಂಡರು. ಕಾರ್ಯಕ್ರಮದಲ್ಲಿ ನೆರೆದಿದ್ದ ಅಪಾರ ಸಂಖ್ಯೆಯ ಅಭಿಮಾನಿಗಳು ಹಾಗೂ ಕಾರ್ಯಕರ್ತರು ವಿರೂಪಾಕ್ಷ ಮಾಮನಿ ಅವರಿಗೆ ಕೇಕ್ ಕತ್ತರಿಸಿ ಹೂಗುಚ್ಛ ನೀಡಿ ಜನ್ಮದಿನಕ್ಕೆ ಶುಭಕೋರಿದರು. ಕಾರ್ಯಕರ್ತರ ಪ್ರೀತಿ ಮತ್ತು ಅಭಿಮಾನವನ್ನು ಸ್ವೀಕರಿಸಿದ ವಿರೂಪಾಕ್ಷ ಮಾಮನಿ ಮಾತನಾಡಿ, ನನ್ನ ಜನ್ಮದಿನದಂದು ಶುಭ ಹಾರೈಸಿದ ಎಲ್ಲ ಆತ್ಮೀಯರಿಗೆ ಧನ್ಯವಾದಗಳು. ನಿಮ್ಮೆಲ್ಲರ ಪ್ರೀತಿ, ವಿಶ್ವಾಸವೇ ನನಗೆ ಇನ್ನೂ ಹೆಚ್ಚಿನ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಿದೆ. ತಮ್ಮ ಸಹಕಾರ ಸದಾ ಹೀಗೆ ಇರಲಿ ಎಂದರು. ಗಣ್ಯರು, ಮುಖಂಡರು, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶುಭ ಹಾರೈಸಿದರು.

ಕಿರುಸುದ್ದಿ

ಬೃಹತ್ ಹಿಂದೂ ಸಮಾವೇಶಕ್ಕೆ ಷರತ್ತು ಬದ್ಧ ಅನುಮತಿ

ಕಲಬುರಗಿ: ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಜೂನ್ 28ರಂದು ಆಯೋಜಿಸಲಾಗಿರುವ ಬಸವಾದಿ ಶರಣರ ಬೃಹತ್ ಹಿಂದೂ ಸಮಾವೇಶಕ್ಕೆ ಇಲ್ಲಿನ ಹೈಕೋರ್ಟ್ ಕಲಬುರಗಿ ಪೀಠವು ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಿ ಕಾರ್ಯಕ್ರಮ ನಡೆಸಲು ಅನುಮತಿ ನೀಡಿದೆ. ಕಾರ್ಯಕ್ರಮದಲ್ಲಿ ಕೊಲ್ಲಾಪುರದ ಕನೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಭಾಗವಹಿಸಲು ನ್ಯಾಯಾಲಯ ಸಮ್ಮತಿಸಿದೆ. ಸಮಾವೇಶಕ್ಕೆ ಬರುವ ಜನಸಂದಣಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನ್ಯಾಯಾಲಯವು ಕೇವಲ 2,500 ಜನರಿಗಷ್ಟೇ ಭಾಗವಹಿಸಲು ಅವಕಾಶ ಕಲ್ಪಿಸಿದೆ. ಕಾರ್ಯಕ್ರಮದ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರಬಾರದು. ಒಂದು ವೇಳೆ ಗಡಿ ಭಾಗದಲ್ಲಿ ಶಾಂತಿ ಸುವ್ಯವಸ್ಥೆ ಭಂಗವಾದರೆ ಅದಕ್ಕೆ ಕಾರ್ಯಕ್ರಮದ ಆಯೋಜಕರು ನೇರ ಹೊಣೆಗಾರರಾಗುತ್ತಾರೆ ಎಂದು ನ್ಯಾಯಾಲಯ ಎಚ್ಚರಿಸಿದೆ. ಕನೇರಿ ಸ್ವಾಮೀಜಿ ಪರವಾಗಿ ವಕೀಲ ವೆಂಕಟೇಶ್ ದಳವಾಯಿ ಹಾಗೂ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು ಮಂಡಿಸಿದ ಸುದೀರ್ಘ ವಾದ-ಪ್ರತಿವಾದಗಳನ್ನು ಆಲಿಸಿದ ಹೈಕೋರ್ಟ್ ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರ ಪೀಠವು ಈ ಮಹತ್ವದ ಷರತ್ತು ಬದ್ಧ ಆದೇಶ ಹೊರಡಿಸಿದೆ.

ವಾಹನ ಪಲ್ಟಿ; ಮೂವರ ಸಾವು, 6 ಜನರಿಗೆ ಗಾಯ

ಚನ್ನಮ್ಮನ ಕಿತ್ತೂರು: ರಾಷ್ಟ್ರೀಯ ಹೆದ್ದಾರಿಯಲ್ಲಿ ಶಿವಮೊಗ್ಗದಿಂದ ಬೆಳಗಾವಿ ಕಡೆಗೆ ಸಿಮೆಂಟ್ ಕಂಬಗಳನ್ನು ತುಂಬಿಸಿಕೊಂಡು ಸಾಗಿಸುತ್ತಿದ್ದ ವಾಹನ ಚಾಲಕನ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿ ಮೂರು ಜನ ಸ್ಥಳದಲ್ಲಿಯೇ ಮೃತಪಟ್ಟಿದ್ದು, 6 ಜನರಿಗೆ ಗಂಭೀರ ಗಾಯಗಳಾದ ಘಟನೆ ಬುಧವಾರ ಮುಂಜಾನೆ ನಡೆದಿದೆ. ಪಟ್ಟಣದ ರಾಣಿ ಚನ್ನಮ್ಮಾ ವರ್ತುಳದ ಎದುಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಘಟನೆ ಸಂಭವಿಸಿದೆ. ಮೃತಪಟ್ಟ ಆದಿಲ್ ಖಾನ್ (26), ಪವನ್ (26), ನಜೀರ್ ಖಾನ್ (25) ಉತ್ತರ ಪ್ರದೇಶದ ಉನ್ನವ್ ಜಿಲ್ಲೆಯ ಕುರಸಟ್ ಗ್ರಾಮದವರು ಎಂದು ತಿಳಿದು ಬಂದಿದೆ. ವಾಹನ ಚಾಲಕ ವಿಜಯಪುರ ಜಿಲ್ಲೆಯ ಚಡಚಣದ ದುರ್ಗಪ್ಪ ಗಾಡಿವಡ್ಡರ ಸೇರಿ 6 ಜನರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಿಮೆಂಟ್ ಕಂಬಗಳನ್ನು ಹೇರಿಕೊಂಡು ವೇಗವಾಗಿ ಹೊರಟ್ಟಿದ್ದ 407 ಗೂಡ್ಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಮಧ್ಯದ ವಿಭಜಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅತಿಯಾದ ಬಾರ ಹೊತ್ತಿದ ವಾಹನ ಪಲ್ಟಿಯಾಗಿ ಬಿದಿದೆ ಎಂದು ಪೋಲಿಸ್ ಮೂಲಗಳಿಂದ ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಕಿತ್ತೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ. ಅಗ್ನಿ ಶಾಮಕ ಠಾಣೆಯ ಸಿಬ್ಬಂದಿಗಳು ಕೂಡಲೇ ಸ್ಥಳಕ್ಕೆ ಆಗಮಿಸಿ ವಾಹನದಲ್ಲಿದ್ದ 6 ಕಾರ್ಮಿಕರನ್ನು ಕಾಪಾಡಿದ್ದಾರೆ.

ಬಿಡದಿ ಟೌನ್‌ಶಿಪ್ ವಿಚಾರ ಕೈಬಿಡಿ: ಟಿಂಗಿನಕಾಯಿ

ಹುಬ್ಬಳ್ಳಿ: ಬಿಡದಿ ಟೌನ್‌ಶಿಪ್ ವಿಚಾರವನ್ನು ರಾಜ್ಯ ಸರ್ಕಾರ ಕೈಬಿಡಬೇಕು. ಅಷ್ಟು ಮೀರಿ ಮಾಡುವುದಾದರೂ ಸರ್ಕಾರಿ ಜಾಗವನ್ನು ಅದಕ್ಕೆ ಬಳಸಿಕೊಳ್ಳಲಿ ಎಂದು ಶಾಸಕ ಮಹೇಶ ಟಿಂಗಿನಕಾಯಿ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಯಾರದೋ ವೈಯಕ್ತಿಕ ಸ್ವಾರ್ಥಕ್ಕೆ ರೈತರ ಫಲವತ್ತಾದ ಭೂಮಿಯನ್ನು ಕಿತ್ತುಕೊಳ್ಳುವುದು ಸರಿಯಲ್ಲ. ಸದ್ಯ ಸರ್ಕಾರದಿಂದ ರೈತರ ಒಕ್ಕಲೆಬ್ಬಿಸುವ ಕೆಲಸ ನಡೆದಿದ್ದು, ಸರಿಯಲ್ಲ. ಬಿಜೆಪಿ ಹಾಗೂ ಜೆಡಿಎಸ್ ಈ ಯೋಜನೆಗೆ ವಿರೋಧವಿದೆ ಎಂದರು.

ಗೃಹಲಕ್ಷ್ಮೀ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ.ಅದನ್ನುಮುಚ್ಚಿಹಾಕುವಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಗೆ ಮುಂದಾಗಿದ್ದಾರೆ. ಕಳೆದ ಅಧಿವೇಶನದಲ್ಲಿ ಗೃಹಲಕ್ಷ್ಮೀ ಯೋಜನೆ ಅವ್ಯವಹಾರದ ಬಗ್ಗೆ ಸದನದಲ್ಲಿ ಗಮನ ಸೆಳೆದಿದ್ದೇನೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದಕ್ಕೆ ತೇಪೆ ಹಚ್ಚುವ ಕೆಲಸ ಮಾಡಿದ್ದರು.

ಈಗ ಸಚಿವರು ಹಾಗೂ ಸಿಎಂ ಬದಲಾಗಿದ್ದು, ಜನಸಾಮಾನ್ಯರು ಯಾರನ್ನೂ ಪ್ರಶ್ನೆ ಮಾಡಬೇಕು? ಡಿ.ಕೆ.ಶಿವಕುಮಾರ ಅವರು ಯೋಜನೆಯ ಪರಿಷ್ಕರಣೆಯ ನೆಪದಲ್ಲಿ ಕಳೆದ ಮೂರು ವರ್ಷಗಳಲ್ಲಾದ ಹಗರಣಗಳನ್ನು ಮರೆಮಾಚುವ ಸಿದ್ಧತೆ ನಡೆಸಿದ್ದಾರೆ. ಮುಂಬರುವ ಅಧಿವೇಷನದಲ್ಲಿ ಈ ಬಗ್ಗೆ ಧ್ವನಿ ಎತ್ತಲಾಗುವುದು ಎಂದರು. ನೂರು ವರ್ಷ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ನೋಂದಣಿ ಅವಶ್ಯಕತೆ ಇಲ್ಲ. ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರು ಪದೇ ಪದೆ ಈ ವಿಚಾರ ಪ್ರಸ್ತಾಪಿಸುತ್ತಿದ್ದಾರೆ. ಬಿಡುವಾದಾಗ ಸಂಘದ ಕಚೇರಿ ಆಫವಾ ಶಾಖೆಗೆ ಭೇಟಿ ನೀಡಲಿ. ಅಲ್ಲೇ ಕೆಲ ಸಮಯ ಕಳೆಯುವುದರಿಂದ ಸಂಘ ಪರಿವಾರದ ಪರಿಚಯವಾಗಲಿದೆ ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ಫ್ಲೈ ಓವರ್ ಕಾಮಗಾರಿಯ ಗುಣಮಟ್ಟ ಪರಿಶೀಲಿಸುವಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದಿದ್ದಾರೆ. ಮಂಗಳವಾರ ಅಧಿಕಾರಿಗಳೂ ಸ್ಥಳ ಪರಿಶೀಲನೆ ಮಾಡಿದ್ದಾರೆ. ಕಾಮಗಾರಿ ಇನ್ನೂ ನಿರ್ಮಾಣ ಹಂತದಲ್ಲಿರುವುದರಿಂದ ಗುಣಮಟ್ಟದ ಸಮಸ್ಯೆ ಎದುರಾದರೆ ಅದನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಹಳ್ಳದ ನೀರು ಸಮುದ್ರ ಸೇರುವ ಪ್ರಕ್ರಿಯೆಗೆ ಚಾಲನೆ

ಅಂಕೋಲಾ: ತಾಲೂಕಿನ ಬೊಬ್ರವಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ನದಿಭಾಗದಲ್ಲಿ ಕೋಡಿ ಕಡಿಯುವ ಮೂಲಕ ಹಳ್ಳದ ನೀರು ಸಮುದ್ರ ಸೇರಲು ಅವಕಾಶ ಮಾಡಿಕೊಡುವ ಸಾಂಪ್ರದಾಯಿಕ ಪ್ರಕ್ರಿಯೆ ನಡೆಸಲಾಯಿತು.

ತಾಲೂಕಿನ ನದಿಭಾಗ ಮತ್ತು ಬೆಳಂಬಾರ ಕಡಲ ತೀರದಲ್ಲಿ ಹಳ್ಳದ ನೀರು ಸಮುದ್ರ ಸೇರುವ ಅಳಿವೆ ಪ್ರದೇಶದಲ್ಲಿ ಪ್ರತಿವರ್ಷ ಪ್ರಾಕೃತಿಕ ಉಸುಕಿನ ದಿಬ್ಬ ನಿರ್ಮಾಣವಾಗಿ ಹಳ್ಳದ ನೀರು ಸಮುದ್ರ ಸೇರದಂತೆ ಅಡ್ಡಿಯುಂಟಾಗುತ್ತದೆ.

ಇದರಿಂದಾಗಿ ನಾಲ್ಕು ಪಂಚಾಯತಿಗಳ ಕೃಷಿ ಭೂಮಿಗಳಲ್ಲಿ ಹಳ್ಳದ ನೀರು ತುಂಬಿ ರೈತರು ಕೃಷಿ ಕಾರ್ಯ ನಡೆಸುವುದು ಕಷ್ಟಕರವಾಗುತ್ತದೆ. ಇನ್ನೇನೂ ನೀರು ಹೊಲಗದ್ದೆಗಳನ್ನು ಸಂಪೂರ್ಣ ಆವರಿಸುತ್ತದೆ ಎನ್ನುವಷ್ಟರಲ್ಲಿ ಸ್ಥಳೀಯ ಜನರು ಸೇರಿ ದೇವರಲ್ಲಿ ಪ್ರಾರ್ಥನೆ ನಡೆಸಿ ತಂಡವಾಗಿ ಬಂದು ಉಸುಕಿನ ದಿಬ್ಬವನ್ನು ಕಡಿದು ಹಳ್ಳದ ನೀರು ಸಮುದ್ರ ಸೇರುವಂತೆ ಕೋಡಿಯನ್ನು ಕಡಿದು ಕೊಡುತ್ತಾರೆ.

ಕೋಡಿ ಕಡಿದ ನಂತರ ಸುತ್ತಮುತ್ತಲಿನ ಕೃಷಿಭೂಮಿಗಳಲ್ಲಿ ತುಂಬರುವ ಹಳ್ಳದ ನೀರು ಸಮುದ್ರ ಸೇರಿ ಕೃಷಿ ಚಟುವಟಿಕೆ ನಡೆಸಲು ಅನುಕೂಲವಾಗುತ್ತದೆ. ಒಮ್ಮೆ ಮಳೆಗಾಲದಲ್ಲಿ ಕೋಡಿ ಕಡಿಯುವ ಪ್ರಕ್ರಿಯೆ ನಡೆದ ನಂತರ ಮುಂದಿನ ಬೇಸಿಗೆಯ ವರೆಗೆ ಹಳ್ಳದ ನೀರು ಕಡಲು ಸೇರಲು ಯಾವುದೇ ರೀತಿಯ ಅಡ್ಡಿ ಉಂಟಾಗುವುದಿಲ್ಲ. ಕೋಡಿ ಕಡಿಯುವ ಕೆಲಸ ಅಪಾಯಕಾರಿಯೂ ಆಗಿದ್ದು ಕೆಲಸದಲ್ಲಿ ಸಾಕಷ್ಟು ಸಮಯದಿಂದ ಪರಿಣತಿ ಹೊಂದಿದ ನುರಿತರು ಮುಂದಾಗಿ ಕಾರ್ಯ ನಡೆಸುವ ಜೊತೆಗೆ ಹೊಸಬರಿಗೆ ಆ ಕುರಿತು ತರಬೇತಿ ನೀಡುತ್ತಾರೆ.

ಕೋಡಿ ಕಡಿಯುವ ಕೆಲಸಕ್ಕೆ ಬೊಬ್ರವಾಡ ಗ್ರಾಮ ಪಂಚಾಯತಿಯ ಮತಿಯಿಂದ ಸ್ವಲ್ಪ ಪ್ರೋತ್ಸಾಹ ಧನ ನೀಡಲಾಗುತ್ತದೆ. ಈ ವರ್ಷ ಮಳೆ ಪ್ರಮಾಣ ಕಡಿಮೆ ಇರುವುದರಿಂದ ಇದೀಗ ಮಳೆ ತೀವ್ರಗೊಂಡ ನಂತರ ಕೋಡಿ ಕಡಿಯುವ ಪ್ರಕ್ರಿಯೆ ನಡೆಸಲಾಗಿದೆ. ಬೊಬ್ರವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು.

ನೀಟ್ ಪರೀಕ್ಷೆ ಹಗರಣ: ಸಚಿವ ಪಾಟೀಲ ಆಕ್ರೋಶ

ಕಲಬುರಗಿ: ರಾಷ್ಟ್ರಮಟ್ಟದಲ್ಲಿ ಒಂದೇ ಒಂದು ಪರೀಕ್ಷೆಯನ್ನು ಅಕ್ರಮವಿಲ್ಲದೆ ನೀಟಾಗಿ ನಡೆಸಲು ಯೋಗ್ಯತೆ ಇಲ್ಲದ ಕೇಂದ್ರದ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ಒಂದು ವೇಳೆ ನಿಮಗೆ ಪರೀಕ್ಷೆ ನಡೆಸಲು ಬರದಿದ್ದರೆ ನಮ್ಮನ್ನು ಸಂಪರ್ಕಿಸಿ, ಯಾವುದೇ ಲೋಪವಿಲ್ಲದೆ ಪರೀಕ್ಷಾ ವ್ಯವಸ್ಥೆಯನ್ನು ಹೇಗೆ ಸುಸೂತ್ರವಾಗಿ ನಡೆಸಬೇಕೆಂದು ನಾವು ಹೇಳಿಕೊಡುತ್ತೇವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ತೀಕ್ಷ್ಣವಾಗಿ ಲ

ಕಿರುಸುದ್ದಿ

ನರಗುಂದ: ಪಟ್ಟಣದ ಮಧ್ಯಭಾಗದಲ್ಲಿನ ಜಗನ್ನಾಥರಾವ ಜೋಶಿ ಅವರ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತ, ಕರ್ನಾಟಕ ಕೇಸರಿ ಎಂದೇ ಪ್ರಸಿದ್ಧರಾದ ಜಗನ್ನಾಥರಾವ ಜೋಶಿ ಅವರ ಜನ್ಮದಿನವನ್ನು ಆಚರಿಸಲಾಯಿತು. ಪುರಸಭೆ ಮಾಜಿ ಅಧ್ಯಕ್ಷ ಶಿವಾನಂದ ಮುತವಾಡ, ಪಂಚಪ್ಪ ಬೆಳವಟಗಿ, ರಾಚನಗೌಡ ಪಾಟೀಲ, ಉಮೇಶ ಯಳ್ಳೂರ, ಸಿದ್ದೇಶ ಹೂಗಾರ, ಶರಣು ಪಿಡನಾಯ್ಕರ, ಸಂತೋಷ ಹಂಚಿನಾಳ, ಸಂಗಮೇಶ ಕಂಠಿ, ಪ್ರವೀಣ ವಡ್ಡರ, ಅಜಿತಗೌಡ ಪಾಟೀಲ ಮುಂತಾದವರಿದ್ದರು.

ನರಗುಂದ: ಪಟ್ಟಣದ ದಂಡಾಪೂರದಲ್ಲಿನ ಶ್ರೀ ಜಗನ್ನಾಥರಾವ್ ಜೋಶಿ ಕ್ರೆಡಿಟ್ ಕೋ ಆಫ್ ಸೊಸೈಟಿ ವತಿಯಿಂದ ಕರ್ನಾಟಕ ಕೇಸರಿ ಜಗನ್ನಾಥರಾವ ಜೋಶಿ ಅವರ ಜನ್ಮದಿನವನ್ನು ಆಚರಿಸಾಲಯಿತು. ಜನ್ಮದಿನದ ನಿಮಿತ್ತ ಶಾಲಾ ಮಕ್ಕಳಿಗೆ ನೋಟ್‌ಬುಕ್ ಮತ್ತು ಪೆನ್ನುಗಳನ್ನು ವಿತರಿಸಲಾಯಿತು. ಸೊಸೈಟಿಯ ಉಪಾಧ್ಯಕ್ಷ ಪ್ರಶಾಂತ ಜೋಶಿ, ಚಿಂದಬರ ಪುರೋಹಿತ, ಸತೀಶ ಬಡಿಗೇರ, ರವಿ ತೊರತ್ತನವರ, ಶಂಕರ ಹೂಲಿ, ಮಧು ಹವಾಲ್ದಾರ, ಕಾಶಿನಾಥ ದೇಶಪಾಂಡೆ, ಉಮೇಶ ಅಪ್ಪೋಜಿ, ಮದನ ಜೋಶಿ, ವೈ.ಡಿ. ಮಠ ಸೇರಿದಂತೆ ಹಲವರಿದ್ದರು.

ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ

ಮುಂಡರಗಿ: ಸತತ ಕಠಿಣ ಪರಿಶ್ರಮ ಮತ್ತು ಶ್ರದ್ಧೆ ಇದ್ದರೆ ಎಂತಹ ಸಾಧನೆಯಾದರೂ ಮಾಡಲು ಸಾಧ್ಯ ಎಂದು ಶಿಕ್ಷಕ ಸಾಹಿತಿ ಡಾ.ನಿಂಗು ಸೊಲಗಿ ಹೇಳಿದರು.

ತಾಲೂಕಿನ ಮೇವುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ತೌಸಿಫ್ ಅಳವಂಡಿ ಅವರು ಕನ್ನಡದಲ್ಲಿ ಮುಸ್ಲಿಂ ಚಿಂತನ ಸಾಹಿತ್ಯದ ತಾತ್ವಿಕ ನೆಲೆಗಳು ಕುರಿತು ಮಂಡಿಸಿದ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪಡೆದ ಹಿನ್ನೆಲೆಯಲ್ಲಿ ಸನ್ಮಾನಿಸಿ ಮಾತನಾಡಿದರು.

ಪ್ರಾಥಮಿಕ ಶಾಲೆಯಲ್ಲಿ ತಮ್ಮ ನೆಚ್ಚಿನ ವಿದ್ಯಾರ್ಥಿಯಾಗಿದ್ದ ತೌಸಿಫ್ ತಮ್ಮ ಹಲವು ಸಮಸ್ಯೆಗಳ ನಡುವೆಯೂ ಬಿಡದೆ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಪಿಎಚ್‌ಡಿ ಮುಗಿಸಿದ ಕೂಡಲೇ ಇವರ ಅಧ್ಯಯನ ಮುಗಿಯುವದಿಲ್ಲ, ನಿಜವಾಗಿ ಇನ್ನು ಮೇಲೆ ಇವರ ಸಂಶೋಧನೆ ಕಾರ್ಯ ಆರಂಭವಾಗುತ್ತದೆ ಇವರಿಂದ ಸಮಾಜಕ್ಕೆ ಇನ್ನಷ್ಟು ಹೊಸ ವಿಷಯಗಳ ಮೇಲೆ ಬೆಳಕು ಚೆಲ್ಲುವಂಥ ಪ್ರಬಂಧನ ಲೇಖನ ಹೊರಹೊಮ್ಮಲಿ ಎಂದು ಆಶಿಸಿದರು.

ಶಾಪ ಅಧ್ಯಕ್ಷ ಪ್ರೊ. ಆರ್.ಎಲ್.ಪೋಲಿಸಪಾಟೀಲ, ಎಂ.ಜಿ.ಗಚ್ಚಣ್ಣವರ, ಮೇವುಂಡಿ ಪ್ರಗು ಎಸ್.ವಿ.ಅರಿಷಣದ ಎಂ.ಕೆ. ಮುಲ್ಲಾನವರ ಮಾತನಾಡಿ, ತೌಸಿಫ್ ಅವರ ಶ್ರಮದ ಅಧ್ಯಯನದಿಂದ ಫಲ ಸಿಕ್ಕಿದೆ. ಇದು ಸರಿಯಾಗಿ ಉಪಯೋಗವಾಗುವದರ ಜೊತೆಗೆ ಸಮಾಜಕ್ಕೂ ಉಪಕಾರಿಯಾಗುವ ರೀತಿಯಲ್ಲಿ ಕೆಲಸ ನಿರ್ವಹಿಸಲಿ, ಮಕ್ಕಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಪಡಿಸಲಿ ಎಂದರು.

ಮುಂಡರಗಿ: ತಾಲೂಕಿನ ಮೇವುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ತೌಸಿಫ್ ಅಳವಂಡಿ ಅವರು ಕನ್ನಡದಲ್ಲಿ ಮುಸ್ಲಿಂ ಚಿಂತನ ಸಾಹಿತ್ಯದ ತಾತ್ವಿಕ ನೆಲೆಗಳು ಕುರಿತು ಮಂಡಿಸಿದ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪಡೆದ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಮುತ್ತಣ್ಣ ಹಾಲಕೇರಿ, ಶರಣು ಸೊಲಗಿ, ಸಿ.ಕೆ.ಗಣಪ್ಪನವರ, ಎಂ.ಎಸ್.ಶಿರನಹಳ್ಳಿ, ವಿಶ್ವನಾಥ ಉಳ್ಳಾಗಡ್ಡಿ, ಐ.ಕೆ.ಮುಲ್ಲಾ ಇತರರಿದ್ದರು.

ಶೇ.100ರಷ್ಟು ಸಾಧನೆ

ನರಗುಂದ: ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಮುಂಬೈಯಿನ ಅಖಿಲ ಭಾರತೀಯ ಗಾಂಧರ್ವ ಮಹಾವಿದ್ಯಾಲಯ ಮಂಡಳದ ವಿವಿಧ ವರ್ಗಗಳ ಸಂಗೀತ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಾರೆ.









ಗಾಯನ ಪ್ರಾರಂಭಿಕ ವಿಭಾಗದಲ್ಲಿ ಅಪೇಕ್ಷಾ ಕರ್ಕಿಕಟ್ಟಿ ಅದ್ವಿತಾ ಕರ್ಕಿಕಟ್ಟಿ, ತನಿಷ್ಕಾ ತಡಸದ, ಆರೋಹಿ ಗುಜಮಾಗಡಿ, ಅನ್ವಿತಾ ಅಡಣಗಿ, ಮೇಘಾ ಗುಜಮಾಗಡಿ, ಡಿಸ್ಟಿಂಕ್ಷನ್ ಪಡೆದಿದ್ದಾರೆ. ವೈಷ್ಣವಿ ಸಜ್ಜನ, ವೇದಶ್ರೀ ಸಜ್ಜನ, ಸಿರಿ ಬೆಂತೂರ, ಉತ್ತಮ ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪ್ರವೇಶಿಕಾ ಪ್ರಥಮ ಗಾಯನ ಪರೀಕ್ಷೆಯಲ್ಲಿ ಮಾಣಿಕ್ಯ ಯರಗಟ್ಟಿ, ಜ್ಯೋತಿ ಪುರಾಣಿ, ಚೇತನ್ ಬಿ, ಡಿಸ್ಟಿಂಕ್ಷನ್ ಪಡೆದಿದ್ದಾರೆ. ಸೃಷ್ಟಿ ಬೆಂತೂರ, ಮಂಜುಳಾ ಮಿಕ್ಕಲ, ಕೃಷ್ಣವೇಣಿ ಕನಕರೆಡ್ಡಿ, ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಪ್ರವೇಶಿಕಾ ಪೂರ್ಣ ಗಾಯನ ಪರೀಕ್ಷೆಯಲ್ಲಿ ಚೇತನ ಬಿ., ವೈಷ್ಣವಿ ಮುಳ್ಳೂರ, ಪ್ರೇರಣಾ ಪೂಜಾರ, ವಸಂತ ಸುಳ್ಳದ, ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಕ್ಕೆ ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ಯುವ ಗಾಯಕ ಪಂ.ಚಂದ್ರಕಾಂತ ಇನಾಮದಾರ ಹರ್ಷವ್ಯಕ್ತಪಡಿಸಿದ್ದಾರೆ.

ಬೀದಿ ನಾಯಿಗಳ ದಾಳಿ: ಕರು ಸಾವು

ಲಕ್ಷ್ಮೇಶ್ವರ: ತಾಲೂಕಿನ ಗೊಜನೂರು ಗ್ರಾಮದ ರೈತ ಚನ್ನಪ್ಪ ಷಣ್ಮುಖಿ ಎಂಬ ರೈತನಿಗೆ ಸೇರಿದ 9 ದಿನದ ಆಕಳು ಕರುವಿಗೆ ಬುಧವಾರ ಬೆಳಗಿನ ಜಾವ 3.30ಕ್ಕೆ ಸುಮಾರಿಗೆ ಹಿಂಡು ಹಿಂಡಾಗಿ ಬೀದಿ ನಾಯಿಗಳು ದಾಳಿ ಮಾಡಿದ ಪರಿಣಾಮ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಕರು ಸಾವನ್ನಪ್ಪಿದೆ. ಸ್ಥಳಕ್ಕೆ ಪಶು ವೈದ್ಯಾಧಿಕಾರಿ ಡಾ. ನಿಂಗಪ್ಪ ಓಲೇಕಾರ, ಡಾ. ವಿರೂಪಾಕ್ಷ ಕೋಟಗಿ, ಪಿಡಿಓ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ ಗ್ರಾಮದಲ್ಲಿ ಅನಧಿಕೃತ ಚಿಕನ್ ಅಂಗಡಿಗಳು ಇದ್ದು ಚಿಕನ್ ತ್ಯಾಜ್ಯ ಮತ್ತು ಬಿಸಾಡುವುದರಿಂದ ಬೀದಿ ನಾಯಿಗಳು ಹಾವಳಿ ಹೆಚ್ಚಾಗಿ ಅನಾಹುತಗಳಾಗುತ್ತಿದ್ದು ಸಂಬಂಧಪಟ್ಟ ಗ್ರಾಪಂದವರು ಚಿಕನ್ ಅಂಗಡಿ ತೆರವು ಮಾಡಿಲ್ಲ ವೆಂದರೆ ಗೊಜನೂರ ಗ್ರಾಮದಲ್ಲಿ ರಾಜ್ಯ ಹೆದ್ದಾರಿಯನ್ನು ಬಂದು ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ಸಮಗ್ರ ರೈತಪರ ಸಂಘಟನೆ ಒಕ್ಕೂಟ ತಾಲೂಕು ಅಧ್ಯಕ್ಷ ಮಂಜುನಾಥ ಮಾಗಡಿ ಎಚ್ಚರಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ

ಕ್ವಿಂಟಲ್‌ಗೆ

ಕಡಲೆಕಾಳು	►	5001-6101
ಹತ್ತಿ	►	8000-8000
ಅಲಸಂದೆ	►	5506-5506
ಹೆಸರುಕಾಳು	►	3500-5009
ಶೇಂಗಾ	►	5313-6889
ಕಡಲೆಕಾಳು	►	11800-12800
ಬೆಲ್ಲ	►	4180-4180
ಜೋಳ	►	2639-4955
ಮೆಕ್ಕೆಜೋಳ	►	2065-2065
ಸಾಸುವೆ	►	5329-5329
ಗೋಧಿ	►	2333-5144

ನಿರೀಕ್ಷೆ ಹುಸಿ ಮಾಡಿದ ಮುಂಗಾರು | ಭಾನದಾರಿಯಲ್ಲಿ ಬಾರದ ವರುಣ

ಬೆಳೆ ಒಣಗುವ ಆತಂಕದಲ್ಲಿ ರೈತ

ರುದ್ರಗೌಡ ಪಾಟೀಲ

ಗದಗ: ಮುಂಗಾರು ಮಳೆ ಉತ್ತಮವಾಗಿರುತ್ತದೆ ಎಂಬ ನಿರೀಕ್ಷೆಯಿಂದ ರೈತರು ಜಮೀನುಗಳನ್ನು ರಂಟೆ ಹೊಡೆಸಿ, ಟ್ರ್ಯಾಕ್ಟರ್ ಬಾಡಿಗೆಗೆ ಪಡೆದು, ಬೀಜ, ಗೊಬ್ಬರ ಖರೀದಿಸಿ ಬೆಳೆ ಬಿತ್ತನೆ ಮಾಡಿದ್ದಾರೆ. ಈಗಾಗಲೇ ಸಾಲ ಮಾಡಿ ಕೃಷಿ ಚಟುವಟಿಕೆ ಪೂರ್ಣಗೊಳಿಸಿರುವ ರೈತರು, ಮಳೆಯ ಅಭಾವದಿಂದ ಬೆಳೆ ಒಣಗುವ ಆತಂಕದಲ್ಲಿದ್ದಾರೆ.

ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಹಲವು ಕಡೆಗಳಲ್ಲಿ ಬಿತ್ತನೆ ಬೀಜಗಳು ಇಂದಿಗೂ ಮೊಳಕೆಯೊಡೆದಿಲ್ಲ. ಮೊಳಕೆಯೊಡೆದ ಬೆಳೆಯು ಸಮರ್ಪಕವಾಗಿ ಬೆಳೆಯುತ್ತಿಲ್ಲ. ಬೆಳೆದರೂ ಕೀಟಗಳ ಕಾಟ ಶುರುವಾಗಿದೆ. ರೈತರು ಮಳೆಗಾಗಿ ನಿತ್ಯವೂ ಬಾನಿನತ್ತ ಮುಖ ಮಾಡಿ ಕಾಯುವಂತಾಗಿದೆ. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಈವಾರ ನಿತ್ಯವೂ ಮೋಡ ಕಾಣಿಸಿಕೊಳ್ಳುತ್ತಿದ್ದು, ಗಾಳಿಯೂ ಬೀಸುತ್ತಿದೆ. ಕೃಷಿ ಇಲಾಖೆ ಅಧಿಕಾರಿಗಳು ಬೆಳೆ ಉಳಿಸಲು ಮುಂಜಾಗ್ರತಾ ಕ್ರಮಗಳ ಜೊತೆಗೆ ಆಗತ್ಯವಿದ್ದಲ್ಲಿ ಮರುಬಿತ್ತನೆ ಮಾಡುವಂತೆ ರೈತರಿಗೆ ಸಲಹೆ ನೀಡಿದ್ದಾರೆ. ಆದರೆ ಈಗಾಗಲೇ ಒಂದು ಬಾರಿ ಬಿತ್ತನೆಗೆ ಹಣ ಖರ್ಚು ಮಾಡಿರುವ ರೈತರಿಗೆ ಮತ್ತೊಮ್ಮೆ ಬೀಜ, ಗೊಬ್ಬರ ಖರೀದಿ ಮಾಡುವುದು ನುಂಗಲಾರದ ತುತ್ತಾಗಿ ಪರಿಣಮಿಸಿದೆ ಎಂಬುದು ಅನ್ನದಾತರ ಆರೋಪ. ಜೋಳ ಬೆಳೆಯಲ್ಲಿ ಸಸಿಗಳ ಸಂಖ್ಯೆ ಶೇ.30ಕ್ಕಿಂತ ಕಡಿಮೆಯಿದ್ದರೆ 15 ದಿನಗಳೊಳಗೆ ಮರುಬಿತ್ತನೆ ಮಾಡುವಂತೆ ಸೂಚಿಸಲಾಗಿದೆ. ಹೆಸರು ಮತ್ತು ಉದ್ದು ಬೆಳೆಗಳಲ್ಲಿ ಸಸಿಗಳ ನಿರ್ವಹಣೆ, ಶೇ.2ರ ಯೂರಿಯಾ ದ್ರಾವಣ ಸಿಂಪಡಣೆ ಹಾಗೂ ಮೆಕ್ಕೆಜೋಳದಲ್ಲಿ ಖಾಲಿ ಜಾಗ ಭರ್ತಿ ಮಾಡುವ ಕ್ರಮಗಳನ್ನು ಕೈಗೊಳ್ಳುವಂತೆ ಇಲಾಖೆ ತಿಳಿಸಿದೆ.

ಶೇ.50ರಷ್ಟು ಬಿತ್ತನೆ

ಜಿಲ್ಲೆಯಲ್ಲಿ ಕೃಷಿ ಭೂಮಿಯಲ್ಲಿ ಮುಂಗಾರು ಹಂಗಾಮಿನಲ್ಲಿ 3,13,719 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಗುರಿ ಇತ್ತು. ಶೇ.50ರಷ್ಟು ಆಂದರೆ 1,57,583 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದೆ. ಪ್ರಮುಖ ಬೆಳೆಗಳಾದ ಹೆಸರು ಶೇ.83ರಷ್ಟು, ಮೆಕ್ಕೆಜೋಳ ಶೇ.30.43, ಶೇಂಗಾ ಶೇ.19.53 ಹಾಗೂ ಹತ್ತಿ ಶೇ.38.51 ರಷ್ಟು ಪ್ರದೇಶದಲ್ಲಿ ಬಿತ್ತನೆಯಾಗಿದೆ.

- ರೈತರ ಜೊತೆ ನಾವಿದ್ದೇವೆ ಎನ್ನುವ ಸರ್ಕಾರಗಳು ರೈತರ ನೆರವಿಗೆ ಬರಲಿವೆಯೇ ಎಂಬ ನಿರೀಕ್ಷೆ
- ಮರುಬಿತ್ತನೆ ಅನಿವಾರ್ಯವಾದರೆ ಸರ್ಕಾರದಿಂದ ಬೀಜ, ಆರ್ಥಿಕ ನೆರವು ಅಥವಾ ಪರಿಹಾರ ದೊರೆಯಬೇಕು ಎಂಬುದು ರೈತರ ಒತ್ತಾಯ
- ಮಲ್ಚಿಂಗ್ ವಿಧಾನ ಅಳವಡಿಸಿಕೊಳ್ಳುವುದರಿಂದ ಮಣ್ಣಿನ ಮಣ್ಣಿನ ತೇವಾಂಶ ಉಳಿಸಿಕೊಳ್ಳಬಹುದು
- ತೆಳುವಾಗಿ ಎಡೆಕುಂಟೆ ಹೊಡೆಯುವುದರಿಂದ ಮಣ್ಣಿನ ಬಿರುಕು ಮುಚ್ಚಿ ತೇವಾಂಶ ನಷ್ಟಕಡಿಮೆಯಾಗುತ್ತದೆ ಎಂಬುದು ಕೃಷಿ ಇಲಾಖೆ ಸಲಹೆ

ವಾಡಿಕೆಗಿಂತ ಶೇ.18ರಷ್ಟು ಮಳೆ ಕೊರತೆ

ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಇದುವರೆಗೆ ವಾಡಿಕೆಗಿಂತ ಶೇ.18ರಷ್ಟು ಮಳೆ ಕೊರತೆ ದಾಖಲಾಗಿದೆ. ಗದಗ ತಾಲೂಕಿನಲ್ಲಿ ಶೇ.32, ಮುಂಡರಗಿಯಲ್ಲಿ ಶೇ.19, ರೋಣದಲ್ಲಿ ಶೇ.54, ಶಿರಹಟ್ಟಿಯಲ್ಲಿ ಶೇ.6, ಗಜೇಂದ್ರಗಡದಲ್ಲಿ ಶೇ.35 ಹಾಗೂ ಲಕ್ಷ್ಮೇಶ್ವರದಲ್ಲಿ ಶೇ.6ರಷ್ಟು ಮಳೆ ಕೊರತೆ ಕಂಡುಬಂದಿದೆ. ಹೆಸರು, ಉದ್ದು, ಹತ್ತಿ, ಮೆಕ್ಕೆಜೋಳ ಹಾಗೂ ಜೋಳ ಬೆಳೆಗಳು ತೇವಾಂಶದ ಕೊರತೆಯಿಂದ ಸಂಕಷ್ಟ ಎದುರಿಸುವಂತಾಗಿದೆ ಎಂಬುದು ರೈತರ ಅಳಲು

> ಜಿಲ್ಲೆಯಲ್ಲಿ ಮುಂಗಾರು ಮಳೆ ನಂಬಿಕೊಂಡು ಸಾವಿರಾರು ರೂಪಾಯಿ ಖರ್ಚು ಮಾಡಿ ಈಗಾಗಲೇ ಬಿತ್ತನೆ ಮಾಡಲಾಗಿದೆ. ಆದರೆ ಬಿತ್ತನೆ ಮಾಡಿ ಹಲವು ದಿನಗಳು ಕಳೆದರೂ ಮಳೆ ಬಾರದ ಹಿನ್ನೆಲೆಯಲ್ಲಿ ಬೆಳೆ ಒಣಗುವ ಬೀತಿ ಎದುರಾಗಿದೆ.
> ■ ಮುತ್ತಪ್ಪ ಜಾಲಿಹಾಳ, ರೈತ

> ವಾಡಿಗಿಂತ ಮಳೆ ಕೊರತೆಯಾಗಿದೆ. ಬಿತ್ತನೆ ಬೆಳೆ ಒಣಗುತ್ತಿವೆ. ಹವಾಮಾನ ಇಲಾಖೆ ಶೀಘ್ರ ಮಳೆ ಮುನ್ಸೂಚನೆ ನೀಡಿದೆ.
> ■ ಚೇತನಾ ಪಾಟೀಲ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ

ಬೆಳೆಹಾನಿ ನಷ್ಟದಿಂದ ಪಾರಾಗಲು ವಿಮೆ ಮಾಡಿಸಿ

ಗದಗ: ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೆಳೆ ನಷ್ಟದಿಂದ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕರ್ನಾಟಕ ರೈತ ಸುರಕ್ಷಾ ಪ್ರದಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಆರ್ಹ ರೈತರ ನೋಂದಣಿಗೆ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬಿಮಾ ಯೋಜನೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹವಾಮಾನ ವೈಪರೀತ್ಯ, ಅತಿವೃಷ್ಟಿ, ಅನಾವೃಷ್ಟಿ, ಗಾಳಿ ಮಳೆ ಪ್ರವಾಹ ಸೇರಿದಂತೆ ವಿವಿಧ ಪ್ರಕೃತಿ ವಿಕೋಪಗಳಿಂದ ಬೆಳೆ ಹಾನಿಗೊಳಗಾದ ಸಂದರ್ಭದಲ್ಲಿ ರೈತರಿಗೆ ಸೂಕ್ತ ಪರಿಹಾರ ದೊರೆಯಲು ಬೆಳೆ ಕಟಾವು ಪ್ರಯೋಗಗಳನ್ನು ಪಾರದರ್ಶಕವಾಗಿ ಮತ್ತು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗೆ ಇಂಡಸ್ ಇಂಡ್ ಜನರಲ್ ಇನ್ಶೂರನ್ಸ್ ಕಂಪನಿ ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆಯಾಗಿದೆ. ಬೆಳೆ ವಿಮೆ ಮಾಡಿಸುವ ರೈತರು Fruit FID ಅನ್ನು ಹೊಂದಿರುವುದು ಕಡ್ಡಾಯವಾಗಿದೆ. ರೈತರು ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ ಪುಸ್ತಕ / ಕಂದಾಯ ರಶೀದಿಯನ್ನು ಸಂಬಂಧಿಸಿದ ಬ್ಯಾಂಕ್,ಹತ್ತಿರದ ಸಾರ್ವಜನಿಕ ಸೇವಾಕೇಂದ್ರ, ಗ್ರಾಮ ಒನ್ ಕೇಂದ್ರಗಳಲ್ಲಿ ನೀಡಿ ಸಂರಕ್ಷಣೆ ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು.

ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ, ಬೆಳೆ ಸಾಲ ಪಡೆದ ರೈತರು ಈ ಯೋಜನೆಯಡಿ ಭಾಗವಹಿಸದೇ ಇದ್ದಲ್ಲಿ ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತ ಮುಚ್ಚಳಿಕೆ ಪತ್ರ ನೀಡಿದಲ್ಲಿ ಅಂತಹ ರೈತರನ್ನು ಈ ಯೋಜನೆಯಿಂದ ಕೈಬಿಡಲಾಗುತ್ತದೆ ಎಂದು ತಿಳಿಸಿದರು. ಜು.15 ಹೆಸರು (ಮಳೆಯಾಶ್ರಿತ), ಹತ್ತಿ (ಮಳೆ ಆಶ್ರಿತ ನೀರಾವರಿ) ಬೆಳೆಗಳಿಗೆ. ಜು.31 ಗೋವಿನಜೋಳ (ಮ ಆ ನೀರಾವರಿ), ಸಜ್ಜೆ (ಮ ಆ), ತೊಗರಿ(ಮ ಆ), ಶೇಂಗಾ (ಮ ಆ ನೀರಾವರಿ) , ಭತ್ತ (ನೀರಾವರಿ). ಬೆಳೆಗಳಿಗೆ ಆ.14 ರಂದು ಸೂರ್ಯಕಾಂತಿ (ಮ.ಆ ನೀರಾವರಿ) ಬೆಳೆಗಳಿಗೆ ಬೆಳೆ ವಿಮಾ ಕಂತು ತುಂಬಲು ಕೊನೆಯ ದಿನ.

ಸರ್ಕಾರದ ವಿರುದ್ಧ ಜನಾಂದೋಲನಕ್ಕೆ ಸಂಕಲ್ಪ

ಗದಗ: ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರ ರೈತರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಒಂದು ಸಭೆಯನ್ನೂ ಮಾಡಿಲ್ಲ, ರಾಜ್ಯ ಸರ್ಕಾರದ ಈ ಧೋರಣೆ ವಿರುದ್ಧ ರೈತರಿಗೆ ಪರಿಹಾರ ನೀಡಿ ಎಂದು ಹೋರಾಟ ಮಾಡಲು ನಾವೆಲ್ಲ ಸನ್ನದ್ಧರಾಗಬೇಕು. ಈ ಹೋರಾಟ ಜನಾಂದೋಲನವಾಗಬೇಕು. ಜನಪರ ಹೊರಾಟ ಮಾಡಿ ಜನರಿಗೆ ನ್ಯಾಯ ಕೊಡಿಸುತ್ತೇವೆ ಎನ್ನುವ ಸಂಕಲ್ಪ ಮಾಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ವಿಮಲ್ ರೆಸಾರ್ಟ್‌ನಲ್ಲಿ ಭಾರತೀಯ ಜನತಾ ಪಾರ್ಟಿ ಜಿಲ್ಲೆಯ ವತಿಯಿಂದ ಏರ್ಪಡಿಸಿದ ಪಂಡಿತ ದಿನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಮತ್ತು ಜಿಲ್ಲಾ ಪ್ರಶಿಕ್ಷಣ ವರ್ಗವನ್ನು ಉದ್ಘಾಟಿಸಿ ಮಾತನಾಡಿದರು. ಬೇರೆ ಯಾವ ಪಕ್ಷದಲ್ಲಿ ಪ್ರಶಿಕ್ಷಣ ವರ್ಗ ನಡೆಯುವುದಿಲ್ಲ, ರಾಜಕೀಯ ಪಕ್ಷಗಳು ವಿವಿಧ ಉದ್ದೇಶಗಳಿಗೆ ಈ ದೇಶದಲ್ಲಿವೆ. ಒಂದೊಂದು ರಾಜಕೀಯ ಪಕ್ಷಗಳಿಗೆ ಒಂದೊಂದು ಉದ್ದೇಶ ಇದೆ. ಕೆಲವು ಪ್ರಾದೇಶಿಕ ಪಕ್ಷಗಳಿವೆ

ಶಾಸಕ ಮಹೇಶ ಟೆಂಗಿನಕಾಯಿ ಜನ್ಮದಿನ ಆಚರಣೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು 54ನೇ ವರ್ಷದ ಜನ್ಮದಿನದ ಅಂಗವಾಗಿ ನಗರದಲ್ಲಿ ವಿವಿಧ ಸಾಮಾಜಿಕ ಕಾರ್ಯಕ್ರಮಗಳು ನಡೆದವು.

ಹಲವು ದೇವಸ್ಥಾನಗಳಲ್ಲಿ ಅವರ ಹೆಸರಿನಲ್ಲಿ ಪೂಜಾ ಕಾರ್ಯಕ್ರಮ ಹಾಗೂ ದೇವರಿಗೆ ಅಭಿಷೇಕ ಆಯೋಜಿಸಲಾಗಿತ್ತು. ನಗರದ ಸಿದ್ಧಾರೂಢ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶಾಸಕ ಮಹೇಶ ಟೆಂಗಿನಕಾಯಿ ಉಭಯ ಶ್ರೀಗಳ ದರ್ಶನ ಪಡೆದರು. ಗೋಪನಕೊಪ್ಪದ ದುರ್ಗವ್ವ ದ್ಯಾಮವ್ವನ ದೇವಸ್ಥಾನದಲ್ಲಿ ವಿಶೇಷಪೂಜೆ, ಗೋಪನಕೊಪ್ಪ ಸರ್ಕಾರಿ ಪ್ರಥಮ ದರ್ಜೆಯಕಾಲೇಜ್‌ನಲ್ಲಿವನಮಹೋತ್ಸವ, ಹುಬ್ಬಳ್ಳಿ ಸೇವಾ ಸದನದಲ್ಲಿ ಬಡ ಮಕ್ಕಳೊಂದಿಗೆ ಜನ್ಮ ದಿನ ಆಚರಣೆ, ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕರ್ತರಿಂದ ರಕ್ತದಾನ: ಇಲ್ಲಿಯ ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಮತಿಯಿಂದ ಅಭಿಮಾನಿಗಳು ಹಾಗೂ ಕಾರ್ಯಕರ್ತರಿಂದ ಬೃಹತ್ ರಕ್ತದಾನ ಶಿಬಿರ ನಡೆಯಿತು. ನೂರಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು. ಮಧ್ಯಾಹ್ನ 1 ಗಂಟೆಯಿಂದ ಸಂಜೆ 5ರ ವರೆಗೆ ಕ್ಷೇತ್ರದ ಮತದಾರರು, ಕಾರ್ಯಕರ್ತರು, ಅಭಿಮಾನಿಗಳು, ಉದ್ಯಮಿಗಳು, ಮುಖಂಡರು ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಶುಭಾಶಯ ಕೋರಿದರು.

ಮೇಯರ್ ಜ್ಯೋತಿ ಪಾಟೀಲ, ಬಿಜೆಪಿ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಪಾಲಿಕೆ ಸದಸ್ಯ ವೀರಣ್ಣ ಸವಡಿ, ಸಂತೋಷ ಚವ್ಹಾಣ, ರೂಪಾ ಶೆಟ್ಟಿ, ಬೀರಪ್ಪ ಖಂಡೇಕಾರ, ಶಿವು ಮೆಣಸಿನಕಾಯಿ, ಸೀಮಾ ಲದ್ವಾ, ಮೀನಾಕ್ಷಿ ವಂಟಮುರಿ, ರಾಜಣ್ಣ ಕೊರವಿ, ವೀಣಾ ಬರದ್ವಾಡ, ಬಿಜೆಪಿಯ ಲಕ್ಷ್ಮಿ ಹೆಗಡೆ, ಅಶೋಕ ವಾಲ್ಮೀಕಿ, ವೆಂಕಟೇಶ ಕಾಟವೆ, ಪ್ರಶಾಂತ ಹಾವಣಗಿ, ದೀಪಕ ಮೆಹರವಾಡೆ, ಮೇನಕಾ ಹುರಳಿ, ಸಿದ್ದು ಮೊಗಲಿಶೆಟ್ಟರ, ಪ್ರಭು ನವಲ ಗುಂದಮಠ, ರವಿ ನಾಯಕ ಇದ್ದರು.

ಶುಭಾಶಯ: ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ ಅವರು ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಸನ್ಮಾನಿಸಿ ಜನ್ಮದಿನದ ಶುಭಾಶಯ ಕೋರಿದರು. ರಾಜು ಕೋರ್ಯಾಣಮಠ, ಪ್ರೀತಮ್ ಅರಕೇರಿ, ಮಂಜುನಾಥ ಹಳ್ಯಾಳ, ದೀಪಕ ಜಿತೂರಿ, ಎಸ್.ಕೆ. ಕೋಟ್ರೇಶ, ಲಕ್ಷೀಕಾಂತ ಘೋಡಕೆ, ವಿಕ್ರಂ ಇನ್ನೂ ಅನೇಕರು ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲಿ ಜನಪ್ರಿಯ ಶಾಸಕ ಮಹೇಶ ಟೆಂಗಿನಕಾಯಿ ಅವರ ಜನ್ಮದಿನದ ಅಂಗವಾಗಿ ಸರ್ವಧರ್ಮ ಸಮಾಜ ಸೇವಕ ಡಾ ರಮೇಶ್ ಮಹಾದೇವಪ್ಪನವರ ಶುಭಾಶಯ ಸಲ್ಲಿಸಿದರು.

ಕ್ರಸ್ಟ್‌ಗೇಟ್‌ಗಳ ಲೋಕಾರ್ಪಣೆ ಇಂದು: ಅಂತಿಮ ಹಂತದ ಸಿದ್ಧತೆ ಪರಿಶೀಲನೆ

ಕೊಪ್ಪಳ: ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿದ 33 ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ ಜೂ. 25ರಂದು ನಡೆಯಲಿರುವ ಕಾರ್ಯಕ್ರಮದ ಅಂಗವಾಗಿ ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲೆಯ ಸಂಸದ ಕೆ.ರಾಜಶೇಖರ ಹಿಟ್ನಾಳ, ಶಾಸಕ ಕೆ.ರಾಘವೇಂದ್ರ ಹಿಟ್ನಾಳ, ರಾಯಚೂರು ವಿಧಾನ ಪರಿಷತ್ ಶಾಸಕ ಎನ್.ಎಸ್. ಭೋಸರಾಜು ಅವರು ವೇದಿಕೆ ಸ್ಥಳದ ಅಂತಿಮ ಹಂತದ ಸಿದ್ಧತೆ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ ಡಾ.ಸುರೇಶ್ ಬಿ. ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಬಳ್ಳಾರಿ ವಲಯದ ಐಜಿಪಿ ಡಾ.ಪಿ.ಎಸ್. ಹರ್ಷ, ಗಂಗಾವತಿ ಡಿವೈಎಸ್ಪಿ ನ್ಯಾಮಗೌಡ ಹಾಗೂ ಕೊಪ್ಪಳ ಡಿವೈಎಸ್ಪಿ ಮುತ್ತಣ್ಣ ಸವರಗೊಳ ಅವರು ವೇದಿಕೆ, ಭದ್ರತಾ ವ್ಯವಸ್ಥೆ, ವಾಹನನಿಲುಗಡೆ,ಸಂಚಾರನಿರ್ವಹಣೆ, ಕುಡಿಯುವ ನೀರು, ವಿದ್ಯುತ್ ಹಾಗೂ ಸಾರ್ವಜನಿಕರ ಸೌಲಭ್ಯಗಳ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಕೊಪ್ಪಳ ನಗರಸಭೆಯ ಮಾಜಿ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹಾಜರಿದ್ದರು.

ಕಾರ್ಯಕ್ರಮಕ್ಕೆ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ವಿವಿಧ ಗಣ್ಯರು ಆಗಮಿಸುವ ಹಿನ್ನೆಲೆಯಲ್ಲಿ ಭದ್ರತಾ ವ್ಯವಸ್ಥೆ ಮತ್ತಷ್ಟು ಬಲಪಡಿಸಲಾಗಿದೆ. ಪೊಲೀಸ್ ಇಲಾಖೆ, ನೀರಾವರಿ ಇಲಾಖೆ, ಆರೋಗ್ಯ ಇಲಾಖೆ, ಅಗ್ನಿಶಾಮಕ ದಳ ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿ ಸಮನ್ವಯದೊಂದಿಗೆಕಾರ್ಯನಿರ್ವಹಿಸುತ್ತಿದ್ದು, ಕಾರ್ಯಕ್ರಮಕ್ಕೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗುತ್ತಿದೆ.

ಈ ಮಹತ್ವದ ಸಮಾರಂಭಕ್ಕೆ ಸಾವಿರಾರು ಜನರು ಆಗಮಿಸುವ ನಿರೀಕ್ಷೆಯಿದ್ದು, ಸುಗಮ ಸಂಚಾರ ಮತ್ತು ಭದ್ರತೆಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ.

ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತಗೆ ಬಲೆ | ದಾಖಲೆಗಳ ಪರಿಶೀಲನೆ

ವೈ.ಮಂಜುನಾಥ ಮನೆ ಸೇರಿ 6 ಕಡೆ ಇಡಿ ದಾಳಿ

ಬೆಳಗಾವಿ: ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ ಅವರಿಗೆ ಸಂಬಂಧಿಸಿದ ಬೆಳಗಾವಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಒಟ್ಟು ಆರು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಬುಧವಾರ ಬೆಳಗ್ಗೆ ಏಕಕಾಲದಲ್ಲಿ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡಿದ್ದಾರೆ.

ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರ ಹಾಗೂ ಸಚಿವ ಸತೀಶ ಜಾರಕಿಹೊಳಿ ಅವರ ಸಹೋದರಿಯ ಪತಿಯಾಗಿರುವ ವೈ. ಮಂಜುನಾಥ ಅವರ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಆರೋಪ ಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ಕಾರ್ಯಾ ಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಳಗಾವಿಯ ಹನುಮಾನ್ ನಗರದಲ್ಲಿರುವ ವೈ. ಮಂಜುನಾಥ್ ಅವರ ಬಷಾರಾಮಿ ನಿವಾಸದ ಮೇಲೆ ಇಡಿ ಅಧಿಕಾರಿಗಳು ಬೆಳಗ್ಗೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಆರಂಭಿಸಿದರು. ಇದೇ ವೇಳೆ ಅವರಿಗೆ ಸಂಬಂಧಿಸಿದ ಇನ್ನೂ ಐದು ಕಚೇರಿಗಳು ಮತ್ತು ನಿವಾಸಗಳ ಮೇಲೂ ಅಧಿಕಾರಿಗಳು ಏಕಕಾಲದಲ್ಲಿ ಶೋಧ ಕಾರ್ಯ ನಡೆಸಿದ್ದಾರೆ.

ದಾಳಿಯ ವೇಳೆ ಕಾಗದ ಪತ್ರಗಳು, ಬ್ಯಾಂಕ್ ಖಾತೆಗಳ ವಿವರಗಳು, ಆಸ್ತಿ ದಾಖಲೆಗಳು ಹಾಗೂ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಬೆಳಗಾವಿ, ಮೈಸೂರು, ಬೆಂಗಳೂರು ಹಾಗೂ ಹಾಸನ ಜಿಲ್ಲೆಯ ಅರಸಿಕೇರೆಯಲ್ಲಿ ಇರುವ ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿದ್ದು, ಮಂಜುನಾಥ ಅವರ ಆಪ್ತರು ಮತ್ತು ಸ್ನೇಹಿತರಿಗೆ ಸಂಬಂಧಿಸಿದ ಮನೆಗಳಲ್ಲಿಯೂ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ಮೈಸೂರಿನಲ್ಲಿರುವ ಸ್ನೇಹಿತರ ನಿವಾಸ, ಬೆಂಗಳೂರಿನ ಅಪಾರ್ಟ್‌ಮೆಂಟ್, ಅರಸಿಕೇರೆಯಲ್ಲಿರುವ ಆಪ್ತನ ಮನೆ ಹಾಗೂ ಅಥಣಿ ತಾಲೂಕಿನ ಐನಾಪುರ ಗ್ರಾಮದಲ್ಲಿರುವ ಮತ್ತೊಬ್ಬ ಸ್ನೇಹಿತನ ನಿವಾಸವೂ ಇಡಿ ತನಿಖೆಯ ವ್ಯಾಪ್ತಿಗೆ ಒಳಪಟ್ಟಿವೆ. ಬೆಂಗಳೂರಿನಲ್ಲಿರುವ ವೈ.ಮಂಜುನಾಥ ಅವರ ನಿವಾಸದಲ್ಲಿಯೂ ದಾಖಲೆಗಳ ಪರಿಶೀಲನೆ ಮುಂದುವರಿದಿದೆ ಎಂದು ತಿಳಿದುಬಂದಿದೆ.

ವೈ.ಮಂಜುನಾಥ ವಿರುದ್ಧ ಬೇನಾಮಿ ಹೆಸರಿನಲ್ಲಿ ಜಮೀನು ಖರೀದಿ, ಬಾರ್ ಹಾಗೂ ರೆಸ್ಟೋರೆಂಟ್‌ಗಳ ಮೂಲಕ ಅಕ್ರಮ ಆಸ್ತಿ ಸಂಪಾದನೆ ನಡೆಸಿರುವ ಆರೋಪಗಳು ಕೇಳಿಬಂದಿವೆ. ಈ ಆರೋಪಗಳ ಹಿನ್ನೆಲೆ ಇಡಿ ಅಧಿಕಾರಿಗಳು ವಿವಿಧ ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ದಾಳಿಯ ಸಂದರ್ಭದಲ್ಲಿ ಸ್ಥಳೀಯ ಪೊಲೀಸರ ನೆರವು ಪಡೆಯದೆ, ಕೇಂದ್ರ ಸರ್ಕಾರದ ಅಧೀನದಲ್ಲಿರುವ 10ಕ್ಕೂ ಹೆಚ್ಚು ಸಶಸ್ತ್ರ ಅರೆಸೇನಾ ಪಡೆ ಸಿಬ್ಬಂದಿಯ ಭದ್ರತೆಯಲ್ಲಿ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಮನೆಯ ಪ್ರಮುಖ ಪ್ರವೇಶ ದ್ವಾರಗಳನ್ನು ಬಂದ್ ಮಾಡಿ, ಕುಟುಂಬ ಸದಸ್ಯರ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು ಮಹತ್ವದ ದಾಖಲೆಗಳು ಮತ್ತು ಡಿಜಿಟಲ್ ಮಾಹಿತಿಗಾಗಿ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಇಡಿ ದಾಳಿಯ ನಿಖರ ಕಾರಣ ಹಾಗೂ ತನಿಖೆಯ ವ್ಯಾಪ್ತಿ ಕುರಿತು ಇನ್ನೂ ಅಧಿಕೃತ ಮಾಹಿತಿ ಹೊರಬಂದಿಲ್ಲ. ಶೋಧ ಕಾರ್ಯ ಪೂರ್ಣಗೊಂಡ ಬಳಿಕ ಹೆಚ್ಚಿನ ವಿವರಗಳು ಲಭ್ಯವಾಗುವ ಸಾಧ್ಯತೆ ಇದೆ.

ಆದಿಮಾನವನ ವಾಸ ತಾಣ ಧರ್ಮಸಾಗರ

ಕಪ್ಪುಕಲ್ಲಿನ 'ಡೈಕ್' ಪತ್ತೆ



ವಿಜಯನಗರ: ಹೊಸಪೇಟೆ ತಾಲೂಕಿನಧರ್ಮಸಾಗರಗ್ರಾಮದಲ್ಲಿ ಆದಿಮಾನವನ ವಾಸಸ್ಥಾನ ಹಾಗೂ ವಿಜಯನಗರ ಕಾಲದ ಐತಿಹಾಸಿಕ ಕುರುಹುಗಳನ್ನು 'ವಿಜಯನಗರ ತಿರುಗಾಟ ಸಂಶೋಧನ ತಂಡ' ಪತ್ತೆ ಹಚ್ಚಿದೆ.

ಸ್ಥಳೀಯರ ನೆರವಿನೊಂದಿಗೆ ಪ್ರೊ. ತಿಪ್ಪೇಸ್ವಾಮಿ, ಡಾ.ಗೋವಿಂದ ಹಾಗೂ ಡಾ.ಕೃಷ್ಣಗೌಡ ಅವರ ತಂಡ ನಡೆಸಿದ ಕ್ಷೇತ್ರಕಾರ್ಯದಲ್ಲಿ ಆದಿಮಾನವ ಬಳಸುತ್ತಿದ್ದ ನುಣುಪಾದ ಕಲ್ಲು, ಗೊಡಲಿಗಳು ಮತ್ತು ಹಳೆ ಊರಿನ ತಳಪಾಯಗಳುಪತ್ತೆಯಾಗಿವೆ.ಗುಡ್ಡದ ಇಳಿಜಾರಿನಲ್ಲಿ ಮೆಟ್ಟಿಲುಗಳಂತಿರುವ ಕಪ್ಪುಕಲ್ಲಿನ ಅಪರೂಪದ ಭೌಗೋಳಿಕ ರಚನೆ ಕಂಡುಬಂದಿದ್ದು, ತಜ್ಞರು ಇದನ್ನು 'ಡೊಲರೈಟ್ ಡೈಕ್' ಎಂದು ಗುರುತಿಸಿದ್ದಾರೆ. ರಾಮ-ಲಕ್ಷ್ಮಣರು ನಡೆದಿದ್ದರಿಂದ ಈ ಕಲ್ಲುಗಳು ಕಪ್ಪಾಗಿವೆ ಎಂಬುದು ಸ್ಥಳೀಯರ ನಂಬಿಕೆಯಾಗಿದ್ದು, ಇದನ್ನು 'ಕರೆಕಲ್ಲು ಮಾಗಣಿ' ಎನ್ನಲಾಗುತ್ತದೆ.

ಇಲ್ಲಿನ ಬೃಹತ್ ಕೆರೆಯ ಹಾಸು ಬಂಡೆಯಲ್ಲಿ ಕೃಷ್ಣದೇವರಾಯನ ಕಾಲದ ಕನ್ನಡ ಲಿಪಿಯ ತೆಲುಗು ಮಿಶ್ರಿತ ದಾನಶಾಸನ ಪತ್ತೆಯಾಗಿದ್ದು, ರಾಜನ ಭಾಷಾ ಸಾಮರಸ್ಯಕ್ಕೆ ಇದು ಸಾಕ್ಷಿಯಾಗಿದೆ. ಸಮೀಪದ ಬೈಲು ವದ್ದಿಗೆರೆಯಲ್ಲಿ ಇಮ್ಮಡಿ ದೇವರಾಯನ ಕಾಲದ ಅಪೂರ್ವ ಅಪ್ರಕಟಿತ ಶಾಸನವೂ ಪತ್ತೆಯಾಗಿದೆ. ಗ್ರಾಮದ ಹೊರವಲಯದಲ್ಲಿ ಗೋಡೆಗೆ ಹೊಂದಿಕೊಂಡಿರುವ 101 ಗುಂಡುಕಲ್ಲುಗಳ ವಿಶಿಷ್ಟ 'ಲಿಂಗಗಳ ಗುಡಿ' ಇದ್ದು, ಶಿವರಾತ್ರಿಯಂದು ವಿಶೇಷ ಪೂಜೆ ನಡೆಯುತ್ತದೆ. ಈ ಐತಿಹಾಸಿಕ ಸ್ಮಾರಕಗಳನ್ನು ಸರ್ಕಾರ ರಕ್ಷಿಸಬೇಕೆಂದು ಸಂಶೋಧಕರು ಆಗ್ರಹಿಸಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ

ಕಾರವಾರ: ಇಲ್ಲಿಯ ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಕರೆ ಬಂದಿದ್ದು, ನ್ಯಾಯಾಲಯಕ್ಕೆ ಪೊಲೀಸ್ ಹಾಗೂ ಬಾಂಬ್ ನಿಷ್ಕ್ರಿಯ ಪಡೆಯವರು ಆಗಮಿಸಿ ತಪಾಸಣೆ ನಡೆಸಿದ್ದಾರೆ. ನ್ಯಾಯಾಯಕ್ಕೆ ಬಂದಿರುವ ಇ-ಮೇಲ್‌ದಲ್ಲಿ ಕೆಲ ಆರೋಪಗಳಿಗೆ ಸಂಬಂಧಿಸಿ ಉಲ್ಲೇಖವನ್ನು ಮಾಡಿ ನ್ಯಾಯಾಲಯಕ್ಕೆ ಬಾಂಬ್ ಸ್ಫೋಟದ ಬಗ್ಗೆ ತಿಳಿಸಲಾಗಿದೆಯಂತೆ. ತಮಿಳುನಾಡಿನ ರಾಜಕೀಯ ಮುಖಂಡ ಉದಯನಿಧಿ ಸ್ಟಾಲಿನ ಅವರನ್ನು ಬೆಂಬಲಿಸುವ ಕುರಿತು ಉಲ್ಲೇಖವಿದೆ. ಆದರೆ, ಈ ಆರೋಪದ ಬಗ್ಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ. ಈ-ಮೇಲ್‌ದಲ್ಲಿ ಬೆದರಿಕೆ ಕರೆ ಬರುತ್ತಿದ್ದಂತೆ ಕಾರವಾರ ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ದಳದವರು ನ್ಯಾಯಾಲಯದ ಸುತ್ತ ಪರಿಶೀಲನೆಯನ್ನು ನಡೆಸಿದ್ದಾರೆ.

200 ವಿಶೇಷ ಬಸ್‌ಗಳ ಕಾರ್ಯಾಚರಣೆ

ಹುಬ್ಬಳ್ಳಿ: ಮೊಹರಂ ಹಬ್ಬ ಹಾಗೂ ವಾರಾಂತ್ಯದ ರಜೆ ಹಿನ್ನೆಲೆ ಪ್ರಯಾಣಿಕರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಮತಿಯಿಂದ ಹೆಚ್ಚುವರಿ 200 ವಿಶೇಷ ಬಸ್‌ಗಳ ಕಾರ್ಯಾಚರಣೆ ಮಾಡಲಿವೆ.ಈ ಕುರಿತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಪ್ರಕಟಣೆಗೆ ತಿಳಿಸಿದ್ದು, ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 200 ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಜೂ.24ರಿಂದ ಜೂ.26ರ ವರೆಗೆ ಬೆಂಗಳೂರಿನಿಂದ ರಾಜ್ಯ ಮತ್ತು ಅಂತರ್ ರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಸಂಸ್ಥೆಯ ಘಟಕಗಳ ವ್ಯಾಪ್ತಿಯ ವಿವಿಧ ಗಮ್ಯಸ್ಥಾನಗಳಿಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Josh

ಕಿರುಸುದ್ದಿ

ಮಂಗನ ಕಾಯಿಲೆ ಪತ್ತೆ

ಸಿದ್ದಾಪುರ: ತಾಲೂಕಿನ ಕೊರ್ಲಕೈ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಮನಮನೆಯ 35 ವರ್ಷ ವಯಸ್ಸಿನ ಮಹಿಳೆಯೋರ್ವರಲ್ಲಿ ಮಂಗನ ಕಾಯಿಲೆ ಕಂಡುಬಂದಿದೆ ಎಂದು ತಾಲೂಕಾ ವೈದ್ಯಾಧಿಕಾರಿ ಡಾ.ಲಕ್ಷ್ಮೀಕಾಂತ ನಾಯ್ಕ ತಿಳಿಸಿದ್ದಾರೆ. ಸದರಿ ಮಹಿಳೆಯು ಚಿಕಿತ್ಸೆಗಾಗಿ ಸಾಗರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು ಸದರಿ ಮಹಿಳೆಯ ಆರೋಗ್ಯದಲ್ಲಿ ಸ್ಥಿರತೆ ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಭಟ್ಕಳ : ಶಿರಾಲಿಯ ಸಾರದಹೊಳೆಯ ಹಳೇಕೋಟೆ ಹನುಮಂತ ದೇವಸ್ಥಾನ ಮತ್ತು ನಾಮಧಾರಿ ಅಭಿವೃದ್ಧಿ ಸಂಘ ಮಾವಳ್ಳಿ ಹೋಬಳಿ ಇವರ ವತಿಯಿಂದ 2026-27 ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿ.ಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪಠ್ಯಪುಸ್ತಕ ವಿತರಣಾ ಕಾರ್ಯಕ್ರಮ ದೇವಸ್ಥಾನದ ಧರ್ಮದರ್ಶಿ ಸುಬ್ರಾಯ ನಾಯ್ಕ ಉದ್ಘಾಟಿಸಿದರು.ನಂತರ ಮಾತನಾಡಿದರ ಅವರು, ನಮ್ಮ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುತ್ತಿದ್ದೇವೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಿ ಸಮಾಜಕ್ಕೆ ಗೌರವ ತರಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಹಳೇಕೋಟೆ ಹನುಮಂತ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಂದ್ರ ನಾಯ್ಕ ಮಾತನಾಡಿದರು.ದೇವಸ್ಥಾನದ ಉಪಾಧ್ಯಕ್ಷ ರಾಜು ನಾಯ್ಕ ,ದೇವಸ್ಥಾದ ಮಾಜಿ ಅಧ್ಯಕ್ಷ ಆರ್.ಕೆ.ನಾಯ್ಕ, ಆಡಳಿತ ಸದಸ್ಯರಾದ ಕೃಷ್ಣ ನಾಯ್ಕಜಮೀನ್ದಾರ, ಪ್ರಮುಖರಾದ ಎಸ್. ಎಂ.ನಾಯ್ಕ, ಜೆ.ಎನ್.ನಾಯ್ಕ, ಮಾತನಾಡಿದರು. ದೇವಸ್ಥಾನದ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರಾದ ಸುಬ್ರಾಯ ನಾಯ್ಕ, ಕಾರ್ಯದರ್ಶಿ ರವೀಂದ್ರ ನಾಯ್ಕ, ವಾಸುದೇವ ನಾಯ್ಕ, ರಾಜು ಟಿ.ನಾಯ್ಕ, ನಾರಾಯಣ ನಾಯ್ಕ, ತಿಮ್ಮಪ್ಪ ನಾಯ್ಕ, ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 6 ನೇ ರ್‍ಯಾಂಕ ಪಡೆದ ವರ್ಷಿತಾ ಶಿವಕುಮಾರ ನಾಯ್ಕ, ಮೂಡ್ಕೇರಿ, ಹಾಗೂ ರಾಜ್ಯಕ್ಕೆ 8 ನೆ ರ್‍ಯಾಂಕ ಪಡೆದ ಯೋಗೇಂದ್ರ ವೆಂಕಟೇಶ ನಾಯ್ಕ, ಸಣಬಾವಿ ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ 100 ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 245 ಕ್ಕೂ ಅಧಿಕ ಪಿ.ಯು. ಪ್ರಥಮ ಹಾಗೂ ದ್ವಿತೀಯ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವನ್ನು ವಿತರಿಸಲಾಯಿತು. ಶಾರದಾ ನಾಯ್ಕ ಪ್ರಾರ್ಥಿಸಿದರು. ರಾಜು ನಾಯ್ಕ ಸ್ವಾಗತಿಸಿದರು. ಪರಮೇಶ್ವರ ನಾಯ್ಕ ನಿರೂಪಿಸಿ, ವಂದಿಸಿದರು.

ನಿಧನ ಸುದ್ದಿ

ಮಾಧವ್ ಕೃಷ್ಣ ನಾಯ್ಕ

ಅಂಕೋಲಾ: ತಾಲೂಕಿನ ಅವರ್ಸಾ ಗ್ರಾಮದ ಸಕಲಬೇಣದ ಮಾಧವ್ ಕೃಷ್ಣ ನಾಯ್ಕ (61) ಬುಧವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು, ಇಬ್ಬರು ಸೊಸೆಯಂದಿರು ಸೇರಿದಂತೆ ಹೆಂಡತಿ ಅಪಾರ ಬಂಧು ಬಳಗವಿದೆ. ಮೃತರ ಅಂತಿಮ ದರ್ಶನವನ್ನು ಹೈಸ್ಕೂಲ್ ಸಹಪಾಠಿಯಾದ ಜನಶಕ್ತಿ ವೇದಿಕೆಯ ಅಧ್ಯಕ್ಷ ರಾದ ಮಾಧವ ನಾಯಕ ಅವರ್ಸಾ ಮತ್ತು ಗ್ರಾಪಂ ಮಾಜಿ ಅಧ್ಯಕ್ಷ ಮಾರುತಿ ನಾಯಕ ಮಂಜುನಾಥ್ ನಾಯಕ ರಾಜೇಶ್ ನಾಯ್ಕ ಹಾಗೂ ಊರ ನಾಗರಿಕರು ಸ್ನೇಹಿತರು ಅಪಾರ ಬಂಧು ಬಳಗದವರು ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61605	68399
ಬಿಳಿಗೋಟು	22199	34909
ಕೆಂಪುಗೋಟು	21211	34100
ಬೆಟ್ಟೆ	40399	48219
ರಾಶಿ	49200	52199
ಚಾಲಿ	44040	47991

ಭಟ್ಕಳ : ಶಿರಾಲಿಯ ಸಾರದಹೊಳೆಯ ಹಳೇಕೋಟೆ ಹನುಮಂತ ದೇವಸ್ಥಾನ ಮತ್ತು ನಾಮಧಾರಿ ಅಭಿವೃದ್ಧಿ ಸಂಘ ಮಾವಳ್ಳಿ ಹೋಬಳಿ ಇವರ ವತಿಯಿಂದ 2026-27 ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿ.ಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪಠ್ಯಪುಸ್ತಕ ವಿತರಣಾ ಕಾರ್ಯಕ್ರಮ ದೇವಸ್ಥಾನದ ಧರ್ಮದರ್ಶಿ ಸುಬ್ರಾಯ ನಾಯ್ಕ ಉದ್ಘಾಟಿಸಿದರು.

ರಸ್ತೆ ವಿನ್ಯಾಸ ಪರಿಷ್ಕರಿಸಿ: ಸಾಲೇರ್

ಶಿರಸಿ: ನಗರದ ಅಮೆಮೆರಿಯಾ ಶಾಲೆಯ ಮುಂಭಾಗದಲ್ಲಿ ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಅತ್ಯಂತ ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಇಲಾಖೆಯ ಕಚೇರಿ ಎದುರು ಜಂಟಿ ಪ್ರತಿಭಟನೆ ನಡೆಸಿದರು.ಇದೇ ಜಾಗದಲ್ಲಿ ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಆಟೋ ಚಾಲಕನೊಬ್ಬ ಮೃತಪಟ್ಟಿರುವುದನ್ನು ಸ್ಮರಿಸಿದ ಪ್ರತಿಭಟನಾಕಾರರು, ತಕ್ಷಣವೇ ಇಲಾಖೆಯು ಎಚ್ಚೆತ್ತುಕೊಂಡು ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.ಪ್ರತಿನಿತ್ಯ ಸಾವಿರಾರು ವಿದ್ಯಾರ್ಥಿಗಳು, ಪಾಲಕರು ಓಡಾಡುವ ಈ ಕಿರಿದಾದ ರಸ್ತೆಯನ್ನು ಆಗಲಗೊಳಿಸುವ ಬದಲು, ಮಧ್ಯೆ ಡಿವೈಡರ್ ನಿರ್ಮಿಸಿ ಸಂಚಾರಕ್ಕೆ ಮತ್ತಷ್ಟು ಅಡಚಣೆ ಉಂಟುಮಾಡಲಾಗಿದೆ. ರಸ್ತೆ ತಿರುವಿನಲ್ಲಿ ವಾಹನಗಳ ಗೋಚರತೆ ಕಡಿಮೆಯಾಗಿದ್ದು, ಇದು ಸರಣಿ ಅಪಘಾತಗಳಿಗೆ ಆಹ್ವಾನ ನೀಡುವಂತಿದೆ ಎಂದು ಧರಣಿನಿರತರು ಆಕ್ರೋಶ ವ್ಯಕ್ತಪಡಿಸಿದರು.ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಿಜೆಪಿ ನಗರ ಘಟಕದ ಅಧ್ಯಕ್ಷ ಆನಂದ ಸಾಲೇರ್ ಮಾತನಾಡಿ, ಶಾಲಾ ವಲಯದಲ್ಲಿ ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಆದರೆ ಇಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ಕಾಮಗಾರಿ ನಡೆಸಲಾಗುತ್ತಿದ್ದು, ತಕ್ಷಣ ತಾಂತ್ರಿಕ ಪರಿಶೀಲನೆ ನಡೆಸಿ ರಸ್ತೆ ವಿನ್ಯಾಸ ಪರಿಷ್ಕರಿಸಬೇಕು ಎಂದು ಒತ್ತಾಯಿಸಿದರು.ಪ್ರತಿಭಟನೆಯಲ್ಲಿ ಜೆಡಿಎಸ್ ಪ್ರಮುಖ ಉಪೇಂದ್ರ ಪೈ, ಬಿಜೆಪಿ ಮುಖಂಡರಾದ ರಮಾಕಾಂತ ಭಟ್, ನಾಗರಾಜ ನಾಯ್ಕ, ವೀಣಾ ಶೆಟ್ಟಿ, ಶರ್ಮಿಳಾ ಮಾದನಗೇರಿ ಸೇರಿದಂತೆ ಉಭಯ ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಶಿರಸಿ: ನಗರದ ಅಮೆಮೆರಿಯಾ ಶಾಲೆಯ ಮುಂಭಾಗದಲ್ಲಿ ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ಅತ್ಯಂತ ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಇಲಾಖೆಯ ಕಚೇರಿ ಎದುರು ಜಂಟಿ ಪ್ರತಿಭಟನೆ ನಡೆಸಿದರು.

ಪ್ರಗತಿ ಪರಿಶೀಲನಾ ಸಭೆ | ಡಾ.ದಿಲೀಪ್ ಶಶಿ ನಿರ್ದೇಶನ

ಪ್ರವಾಸೋದ್ಯಮ ಚಟುವಟಿಕೆಗೆ ಹೆಚ್ಚಿನ ಸಾಲ ವಿತರಿಸಿ

ಕಾರವಾರ: ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಆರಂಭಿಸುವುವರಿಗೆ ಜಿಲ್ಲೆಯಲ್ಲಿನ ಎಲ್ಲಾ ಬ್ಯಾಂಕುಗಳು, ಹೆಚ್ಚಿನ ಸಂಖ್ಯೆಯಲ್ಲಿ ಸಾಲವನ್ನು ವಿತರಿಸುವ ಮೂಲಕ ಪ್ರವಾಸೋದ್ಯಮ ಬೆಳವಣಿಗೆಗೆ ಮತ್ತು ಬ್ಯಾಂಕುಗಳ ಸಾಲ ಮತ್ತು ಠೇವಣಿ ಅನುಪಾತದಲ್ಲಿ ನಿಗಧಿತ ಗುರಿ ಸಾಧಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಪ್ ಶಶಿ ನಿರ್ದೇಶನ ನೀಡಿದರು.

ಅವರು ಬುಧವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಲೀಡ್ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಕುರಿತಂತೆ ಮುಖ್ಯಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ಹೊಂದಿದೆ ಎಂದರು.

ಮಾರ್ಚ್ 2026 ರ ತ್ರೈಮಾಸಿಕ ಅಂತ್ಯದಲ್ಲಿ ಜಿಲ್ಲೆಯ ಬ್ಯಾಂಕ್‌ಗಳಲ್ಲಿ ಒಟ್ಟು ರೂ.27,064 ಕೋಟಿ ಠೇವಣಿ ಸಂಗ್ರಹ ಮತ್ತು ರೂ.12,528 ಕೋಟಿ ಸಾಲ ವಿತರಣೆ ಮಾಡಿದ್ದು, ಸಾಲ ಮತ್ತು ಠೇವಣಿ ಅನುಪಾತ ಶೇ.46.29 ಮಾತ್ರ ಇದ್ದು, ಪ್ರಸ್ತ ವರ್ಷದಲ್ಲಿ ಈ ಅನುಪಾತವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕ್‌ಗಳು ಪ್ರತ್ಯೇಕವನ್ನು ಯೋಜನೆಯನ್ನು ರೂಪಿಸಿ ನಿಗಧಿತ ಗುರಿ ಸಾಧಿಸುವಂತೆ ಸೂಚಿಸಿದರು.

ಸಭೆಯಲ್ಲಿ ವಿವಿಧ ಸರ್ಕಾರಿ ಯೋಜನೆಗಳಿಗೆ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಕರೀಂ ಅಸಾದಿ, ಮುಖ್ಯ ಯೋಜನಾಧಿಕಾರಿ ಸೋಮಶೇಖರ್ ಮೇಸ್ತಾ, ಮುಖ್ಯ ಲೆಕ್ಕಾಧಿಕಾರಿ ಆನಂದಸಾ ಹಬೀಬ್, ಕೆನರಾ ಬ್ಯಾಂಕ್ ಪ್ರಾದೇಶಿಕ ಮೆನೇಜರ್ ನಾಗರಾಜ್, ನಬಾರ್ಡ್ ಬ್ಯಾಂಕ್ ಮೆನೇಜರ್ ಸುಶೀಲ್, ಲೀಡ್ ಬ್ಯಾಂಕ್ ಮೆನೇಜರ್ ರಾಜಪ್ಪ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಎಲ್ಲಾ ಬ್ಯಾಂಕ್ ಗಳ ಅಧಿಕಾರಿಗಳು ಇದ್ದರು.

ಜಿಲ್ಲೆಯಲ್ಲಿ ಏರ್ ಪೋರ್ಟ್ ಸಹ ಶೀಘ್ರದಲ್ಲಿ ಆರಂಭವಾಗಲಿದ್ದು, ಮುಂದಿನ 5 ರಿಂದ 6 ವರ್ಷಗಳಲ್ಲಿ ಜಿಲ್ಲೆಯಲ್ಲಿ ಹೆಚ್ಚಿನ ಅಭಿವೃದ್ಧಿಯಾಗಲಿದ್ದು, ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ನಡೆಸುವವರಿಗೆ, ಬಂಡವಾಳ ಹೂಡಿಕೆದಾರರಿಗೆ ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದ ಸಾಲಗಳನ್ನು ಆದ್ಯತೆಯಲ್ಲಿ ವಿತರಿಸುವ ಮೂಲಕ, ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ಮತ್ತು ಬ್ಯಾಂಕ್‌ಗಳ ಸಾಲ ಮತ್ತು ಠೇವಣಿ ಅನುಪಾತದಲ್ಲಿ ನಿಗಧಿತ ಗುರಿ ಸಾಧಿಸಲು ಸಾಧ್ಯವಿದೆ.
■ ಡಾ.ದಿಲೀಪ್ ಶಶಿ,ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕಾರವಾರ: ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆ ನಡೆಯಿತು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಎಂ.ಎಸ್. ಅಲ್ಲಾಭಕಷ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಝಹೀರ್ ಅಬಾಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ ರಾವ್ ಮತ್ತಿತರರಿದ್ದರು.

ವಿದ್ಯಾರ್ಥಿ ಸಾವಿಗೆ ನ್ಯಾಯ ಒದಗಿಸಲು ಆಗ್ರಹ

ಸಿದ್ದಾಪುರ: ಕಾನಸೂರು ವಸತಿ ಶಾಲೆಯ ವಿದ್ಯಾರ್ಥಿ ಗೋಕುಲ ಗೌಡನ ಸಾವಿನ ತನಿಖೆ ಸರಿಯಾದ ರೀತಿಯಲ್ಲಿ ನಡೆದು ತಪ್ಪಿತ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಭಾರತೀಯ ಜನತಾ ಪಕ್ಷದ ಕಾರ್ಯಕಾರಿಣಿ ಸದಸ್ಯ ಕೆ.ಜಿ.ನಾಯ್ಕ ಹಣಜೀಬೈ ಆಗ್ರಹಿಸಿದರು.

ಕಾನಸೂರಿನ ಇಂದಿರಾ ಗಾಂಧಿ ವಸತಿ ಶಾಲೆಯಲ್ಲಿ ಮೃತಪಟ್ಟ ವಿದ್ಯಾರ್ಥಿ ಗೋಕುಲ ಕೃಷ್ಣ ಗೌಡ ಎಂಬುವವನ ಸಾವಿನ ಪ್ರಕರಣಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ತಾಲೂಕು ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ವತಿಯಿಂದ ಬುಧವಾರ ಪಟ್ಟಣದ ತಹಶೀಲ್ದಾರ ಕಚೇರಿಯ ಎದುರು ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಿಜೆಪಿ ಮಂಡಲಾಧ್ಯಕ್ಷ ಎಂ.ಕೆ.ತಿಮ್ಮಪ್ಪ ಮಾತನಾಡಿ, ವಿದ್ಯಾರ್ಥಿ ಗೋಕುಲನ ಸಾವಿಗೆ ಸಂಬಂಧಿಸಿ ವಸತಿ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಹೇಳಿಕೆಗಳು ಭಿನ್ನವಾಗಿದೆ. ಇದರಿಂದ ಇದು ಆತ್ಮಹತ್ಯೆಯಲ್ಲ ಕೊಲೆಯೆಂಬುದು ಸಾಬೀತಾಗುತ್ತದೆ. ಸೂಕ್ತ ತನಿಖೆ ನಡೆದು ತಪ್ಪಿತ್ಥರ ವಿರುದ್ಧ ಕಠಿಣ ಕ್ರಮ ಕೈಗೊಂಡು ವಿದ್ಯಾರ್ಥಿಯ ಸಾವಿಗೆ ನ್ಯಾಯ ಒದಗಿಸಬೇಕು ಎಂದರು.

ಬಿಜೆಪಿ ಜಿಲ್ಲಾ ರೈತಮೋರ್ಚಾ ಉಪಾಧ್ಯಕ್ಷ ಅನಂತಮೂರ್ತಿ ಹೆಗಡೆ, ಜೆಡಿಎಸ್ ಮುಖಂಡ ಉಪೇಂದ್ರ ಪೈ ಮಾತನಾಡಿದರು.ಬಿಜೆಪಿ ಮಂಡಲ ನಿಕಟಪೂರ್ವ ಅಧ್ಯಕ್ಷ ಮಾರುತಿ ನಾಯ್ಕ ಹೊಸೂರು, ತಾಲೂಕು ಪ್ರಧಾನ ಕಾರ್ಯದರ್ಶಿ ತೋಟಪ್ಪ ನಾಯ್ಕ, ಎಬಿವಿಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ದರ್ಶನ ಹೆಗಡೆ, ಜಿಲ್ಲಾ ವಿಶೇಷ ಆಹ್ವಾನಿತ ಗುರುರಾಜ ಶಾನಭಾಗ ಮಾತನಾಡಿದರು.

ಪ್ರತಿಭಟನೆಯ ನಂತರ ತಹಶೀಲ್ದಾರ (ಪ್ರಭಾರ) ರಮೇಶ ಹೆಗಡೆಯವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮತ್ತು ಸ್ಥಳಕ್ಕೆ ಆಗಮಿಸಿದ ಕಾರವಾರದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಉಮೇಶ ವೈ.ಕೆ. ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಪ್ರತಿಭಟನಾಕಾರರು ಮತ್ತು ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ಹೆಣ್ಣು ಮಕ್ಕಳು ಇರುವ ವಸತಿ ಶಾಲೆಗಳಿಗೆ ಮಹಿಳಾ ವಾರ್ಡನ್ ಗಳ ನೇಮಕಕ್ಕೆ ಪ್ರತಿಭಟನಾಕಾರರು ಆಗ್ರಹಿಸಿದರು. ಮನವಿಯನ್ನು ಮೇಲಾಧಿಕಾರಿಗಳಿಗೆ ವರ್ಗಾಯಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಉಮೇಶ ವೈ.ಕೆ. ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿಯ ರಾಘವೇಂದ್ರ ಶಾಸ್ತ್ರಿ ನಂದನ ಬೋರ್ಕರ್, ಅಣ್ಣಪ್ಪ ನಾಯ್ಕ, ಮಂಜುನಾಥ ಭಟ್ಟ, ಕೃಷ್ಣಮೂರ್ತಿ ಕಡಕೇರಿ, ಕೃಷ್ಣಮೂರ್ತಿ ನಾಯ್ಕ ಐಸೂರು, ಸುರೇಶ ನಾಯ್ಕ, ಜೆಡಿಎಸ್‌ನ ಸತೀಶ ಹೆಗಡೆ, ಮೃತ ವಿದ್ಯಾರ್ಥಿಯ ಪಾಲಕರು, ವಿವಿಧ ಸಂಘಟನೆಗಳ ಮುಖಂಡರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

ಜೂ.27ರಿಂದ ಹಲಸಿನ ಮೇಳ-2026

ಶಿರಸಿ: ಹಲಸಿನ ಮೇಳ-2026 ಕಾರ್ಯಕ್ರಮವು ಜೂನ್ 27 ಮತ್ತು 28ರಂದು ಶಿರಸಿಯ ಕದಂಬ ಮಾರ್ಕೆಟಿಂಗ್ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕದಂಬ ಮಾರ್ಕೆಟಿಂಗ್ ಅಧ್ಯಕ್ಷ ಶಂಭುಲಿಂಗ ಹೆಗಡೆ, ನಡಗೋಡು ತಿಳಿಸಿದರು.

ನಗರದ ಕದಂಬ ಮಾರ್ಕೆಟಿಂಗ್ ಸಂಸ್ಥೆಯಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ಕದಂಬ ಮಾರ್ಕೆಟಿಂಗ್, ಉತ್ತರ ಕನ್ನಡ ಸಾವಯವ ಒಕ್ಕೂಟ, ಓಖಿಐಒ, ಜೀವ ವೈವಿಧ್ಯ ಮಂಡಳಿ, ತೋಟಗಾರಿಕಾ, ಕೃಷಿ ಹಾಗೂ ಅರಣ್ಯ ಇಲಾಖೆ ಮತ್ತು ವನಸ್ತ್ರೀಯ ಸಹಯೋಗದಲ್ಲಿ ಇದನ್ನು ಆಯೋಜಿಸಲಾಗಿದೆ ಎಂದರು.

ಜೂನ್ 27ರಬೆಳಗ್ಗೆ 10.30ಕ್ಕೆ ಶಾಸಕಭೀಮಣ್ಣ ಟಿ. ನಾಯ್ಕ ಮೇಳ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಪಂ. ಸಿಇಒ ಡಾ. ದಿಲೀಶ್ ಸಸಿ, ಅನಂತ ಹೆಗಡೆ ಆಶೀಸರ, ಡಾ. ಸಂದೀಪ್ ಸೂರ್ಯವಂಶಿ, ಡಾ. ಸತೀಶ್ ಬಿ.ಪಿ., ಡಾ. ಶಿವಪ್ರಸಾದ್ ಗಾಂವ್ಕರ್, ಶೈಲಜಾ ಗೋನಮನೆ ಹಾಗೂ ತಂಜಾವೂರಿನ ಓಖಿಈಖಿಇ ಆಸೋಸಿಯೇಟ್ ಪ್ರೊಫೆಸರ್ ಡಾ. ಚಿದಾನಂದ ಡಿ.ವಿ. ಭಾಗವಹಿಸಲಿದ್ದಾರೆ. ಶಂಭುಲಿಂಗ ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ.

ಮೇಳದಲ್ಲಿ ಕದಂಬ ಆನ್‌ಲೈನ್ ಟ್ರೇಡಿಂಗ್ ಪ್ಲಾಟ್‌ಫಾರ್ಮ್ ಹಾಗೂ ವೆಬ್‌ಸೈಟ್ ಬಿಡುಗಡೆ, ಹಲಸಿನ ವೃಕ್ಷಾರೋಪಣ ಮತ್ತು ವಿಶೇಷ ಗೋಷ್ಠಿಗಳು ನಡೆಯಲಿವೆ. ತಜ್ಞರಾದ ಡಾ. ಕಾಂತರಾಜ್, ಡಾ. ತಿಪ್ಪಣ್ಣ ಕೆ.ಎಸ್., ನರೇಂದ್ರ ಸಕ್ಕರಾಯಪಟ್ಟಣ, ಭಾರದ್

ಕಿರುಸುದ್ದಿ

ಟ್ಯಾಲಿ ವಿಶೇಷ ತರಬೇತಿ ಕಾರ್ಯಕ್ರಮ

ಹಾವೇರಿ: ಲೆಕ್ಕಪತ್ರ ಮತ್ತು ತೆರಿಗೆ ಕ್ಷೇತ್ರದಲ್ಲಿನ ಇತ್ತೀಚಿನ ಬದಲಾವಣೆಗಳು, ಉದ್ಯಮಗಳಿಗೆ ಅಗತ್ಯವಾದ ಹಣಕಾಸು ನಿರ್ವಹಣಾ ವಿಧಾನಗಳು ಹಾಗೂ ಟ್ಯಾಲಿಯ ಸಾಫ್ಟ್‌ವೇರ್ ಪರಿಣಾಮಕಾರಿ ಬಳಕೆ ಇಂದಿನ ಅಗತ್ಯವಾಗಿದೆ. ಈ ಕುರಿತು ಅಗತ್ಯ ಜ್ಞಾನ ಆಳವಡಿಸಿಕೊಳ್ಳುವಂತೆ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳ ಸಂಘದ ಅಧ್ಯಕ್ಷ ಬಿ.ಪಿ ಪಾಟೀಲ ಹೇಳಿದರು. ನಗರದ ಸಾಯಿ ಕಂಪ್ಯೂಟರ್ಸ್‌ನಲ್ಲಿ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳ ಸಹಯೋಗದಲ್ಲಿ ಟ್ಯಾಲಿ ಕುರಿತ ವಿಶೇಷ ಮಾಹಿತಿ ಮತ್ತು ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಟ್ಯಾಲಿಯ ಸಾಫ್ಟ್‌ವೇರ್‌ನ ತರಬೇತಿ ನೀಡುವಲ್ಲಿ ಸಾಯಿ ಕಂಪ್ಯೂಟರ್ಸ್ ಸತತ 20 ವರ್ಷಗಳಿಂದ ಮಾಹಿತಿ ಮತ್ತು ತರಬೇತಿಯನ್ನು ನೀಡುತ್ತಿದ್ದು ಇದರ ಸದೂಪಯೋಗ ಪಡೆದುಕೊಳ್ಳಬೇಕು ಎಂದರು. ಸಾಯಿ ಕಂಪ್ಯೂಟರ್ಸ್‌ನ ವ್ಯವಸ್ಥಾಪಕ ಪ್ರದೀಪ ಪಾಟೀಲ ಮಾತನಾಡಿದರು. ಕಾರ್ಯಕ್ರಮದಲ್ಲಿ ಟ್ಯಾಲಿ ತರಬೇತುದಾರ ರಾಮ್, ಜಯರಾಜ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳ ಸಂಘದ ಪದಾಧಿಕಾರಿಗಳಾದ ವೈಭವ ವಾಳ್ವೇಕರ, ಸಂತೋಷ ಮಾಗಾವಿ ಮತ್ತಿತರರು ಇದ್ದರು. ಅಪೂರ್ವಾ ಕಾರ್ಯಕ್ರಮವನ್ನು ನಿರೂಪಿಸಿದರು. ಸುಪ್ರಿಯಾ ವಂದಿಸಿದರು.

ಹವಾಮಾನ ಆಧಾರಿತ ಬೆಳೆವಿಮೆ ಯೋಜನೆ

ಹಾನಗಲ್ಲ: ಪ್ರಸಕ್ತ 2026-27 ನೇ ಸಾಲಿನ ಮುಂಗಾರು ಹಂಗಾಮಿಗೆ ಹಾನಗಲ್ ತಾಲೂಕಿನಲ್ಲಿ HDFC Ergo Company ಅನ್ನು ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಗೆ ಸರ್ಕಾರವು ಅಧಿಸೂಚಿಸಿರುತ್ತದೆ. ಈ ತಾಲೂಕಿನಲ್ಲಿ ಅಡಿಕೆ, ಮಾವು, ಶುಂಠಿ ಹಾಗೂ ಹಸಿಮೆಣಸಿನಕಾಯಿ ಒಟ್ಟು ನಾಲ್ಕು ತೋಟಗಾರಿಕೆ ಬೆಳೆಗಳನ್ನು ಅಧಿಸೂಚಿಸಲಾಗಿರುತ್ತದೆ. ಆಸಕ್ತ ರೈತರುಗಳು ಪ್ರತಿ ಹೆಕ್ಟರ್ ಗೆ ಅಡಿಕೆ ಬೆಳೆಗೆ ರೂ, 6,400/-, ಮಾವು ರೂ 4,000/-, ಶುಂಠಿ ರೂ, 6500/- ಹಾಗೂ ಹಸಿಮೆಣಸಿನಕಾಯಿ ಬೆಳೆಗೆ ರೂ, 3,550/- ಗಳ ವಿಮಾ ಕಂತನ್ನು ಗ್ರಾಹಕರ ಸೇವಾ ಕೇಂದ್ರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಜು.31ರವರೆಗೆ ನೊಂದಾಯಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಹಾನಗಲ್ಲ ತೋಟಗಾರಿಕೆ ಇಲಾಖೆ ಸಂಪರ್ಕಿಸಬೇಕೆಂದು ಹಾನಗಲ್ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ಅನಾರೋಗ್ಯದಿಂದ ಬಳಲುತ್ತಿದ್ದ ಯುವಕನೊಬ್ಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸವಣೂರ ತಾಲೂಕು ಕಲಿವಾಳ ಗ್ರಾಮದಲ್ಲಿ ನಡೆದಿದೆ. ಕಲಿವಾಳ ಗ್ರಾಮದ ಲಕ್ಷ್ಮಣ ನಾಗಪ್ಪ ಮುಂದಲಮನಿ (26) ಮೃತಪಟ್ಟ ದುರ್ದೈವಿ. ಈತ ಫಿಟ್ಸ್ ಹಾಗೂ ಹೊಟ್ಟೆನೋವು ಕಾಯಿಲೆಯಿಂದ ಬಳಲುತ್ತಿದ್ದು ಸಾಕಷ್ಟು ವೈದ್ಯರ ಬಳಿ ತೋರಿಸಿದರೂ ಗುಣಮುಖರಾಗಿರಲಿಲ್ಲ. ಈ ಹಿನ್ನೆಲೆ ತನ್ನಷ್ಟಕ್ಕೆ ತಾನೇ ಮಾನಸಿಕ ಮಾಡಿಕೊಂಡು ವಿಷ ಸೇವಿಸಿ ಆಸ್ವಸ್ಥಗೊಂಡಿದ್ದಾನೆ. ಕೂಡಲೇ ಲಕ್ಷ್ಮೇಶ್ವರ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಸಹೋದರ ಸಂತೋಷ ಮುಂದಲಮನಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕಿತ್ಸೆ ಫಲಿಸದೆ ವ್ಯಕ್ತಿ ಸಾವು

ಹಾವೇರಿ: ಹೊಲದಲ್ಲಿ ಬೋರವೆಲ್ ಕೊರೆಸುವಾಗ ವ್ಯಕ್ತಿಯೊಬ್ಬರಿಗೆ ಎದೆ ನೋವು ಕಾಣಿಸಿಕೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದಾಗ್ಯೂ ಉಪಚಾರ ಫಲಿಸದೆ ಸಾವನ್ನಪ್ಪಿರುವ ಘಟನೆ ಬ್ಯಾಡಗಿ ತಾಲೂಕು ಕದಮನಹಳ್ಳಿ ಗ್ರಾಮದ ಹೊರವಲಯದಲ್ಲಿ ನಡೆದಿದೆ. ತಮಿಳುನಾಡು ಮೂಲದ ಮೇವಲ್ ತಂದೆ ಪರಮಶಿವಂ (50) ಮೃತ ದುರ್ದೈವಿ. ಇವರು ಕದಮನಹಳ್ಳಿ ಗ್ರಾಮದ ಜಮೀನೊಂದರಲ್ಲಿ ಬೊರವೆಲ್ ಕೊರೆಯಲು ಹೋದಾಗ ಎದೆನೋವು ಕಾಣಿಸಿಕೊಂಡಿದೆ. ಕೂಡಲೇ ಉಪಚಾರಕ್ಕೆಂದು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಕರೆದೊಯ್ದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಎಂ.ಕುಮರನ್ ತಂದೆ ಮೇವೆಲ್ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾನಗಲ್ಲ: ನಗರದ ಸ್ವಚ್ಛತೆ ಹಾಗೂ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ಸ್ಥಳೀಯ ಪುರಸಭೆ ಖರೀದಿಸಿರುವ ಕಸ ಸಂಗ್ರಹಣಾ ನೂತನ ಟಿಪ್ಪರ್ ವಾಹನವನ್ನು ಶಾಸಕ ಶ್ರೀನಿವಾಸ ಮಾನೆ ಲೋಕಾರ್ಪಣೆಗೊಳಿಸಿದರು.

ನಗರ ಸ್ವಚ್ಛತೆಗೆ ಆದ್ಯತೆ ನೀಡಿ: ಶಾಸಕ ಮಾನೆ

ಹಾನಗಲ್ಲ: ನಗರದ ಸ್ವಚ್ಛತೆ ಹಾಗೂ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ಸ್ಥಳೀಯ ಪುರಸಭೆ ಖರೀದಿಸಿರುವ ಕಸ ಸಂಗ್ರಹಣಾ ನೂತನ ಟಿಪ್ಪರ್ ವಾಹನವನ್ನು ಶಾಸಕ ಶ್ರೀನಿವಾಸ ಮಾನೆ ಲೋಕಾರ್ಪಣೆಗೊಳಿಸಿದರು. 2024-25 ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ 14 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿದ ವಾಹನ ಲೋಕಾರ್ಪಣೆಗೊಳಿಸಿದ ಶಾಸಕ ಮಾನೆ, ಸಾರ್ವಜನಿಕರ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆಗೆ ಸ್ವಚ್ಛತಾ ವ್ಯವಸ್ಥೆ ಅತ್ಯಂತ ಮಹತ್ವದ್ದಾಗಿದೆ. ಹೊಸ ಟಿಪ್ಪರ್ ವಾಹನದಿಂದ ಮನೆ, ಮನೆಗೆ ತೆರಳಿ ಕಸ ಸಂಗ್ರಹಣೆ ಮಾಡುವ ಕಾರ್ಯ ಇನ್ನಷ್ಟು ಸುಗಮವಾಗಲಿದೆ. ನಗರವನ್ನು ಸ್ವಚ್ಛವಾಗಿಡಲು ನೆರವಾಗಲಿದೆ ಎಂದು ಹೇಳಿದ ಅವರು ಪುರಸಭೆಯಿಂದ ಮತ್ತೆ 2 ಹೊಸ ಟ್ರ್ಯಾಕ್ಟರ್ ಖರೀದಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವೀರಪ್ಪ ಬೈಲವಾಳ, ಪುರಸಭೆ ಮಾಜಿ ಅಧ್ಯಕ್ಷರಾದ ಯಲ್ಲಪ್ಪ ಕಿತ್ತೂರ, ರಾಧಿಕಾ ದೇಶಪಾಂಡೆ, ನಾಗಪ್ಪ ಸವದತ್ತಿ, ಪರಶುರಾಮ ಖಂಡೂನವರ, ವೀಣಾ ಗುಡಿ, ಖುರ್ಷಿದ್‌ಅಹ್ಮದ್ ಹುಲ್ಲತ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಶಕೀಲ್ ಬಾಳೂರ, ಬಾಬಾಜಾನ ಕೊಂಡೆವಾಡೆ, ಗೌಸ್‌ಮೋದೀನ ತಾಂಡೂರ, ಮೇಕಾಜಿ ಕಲಾಲ, ಸುರೇಶ ನಾಗಣ್ಣನವರ, ಮುಖ್ಯಾಧಿಕಾರಿ ಜಗದೀಶ ವೈ.ಕೆ., ಶಿವಾನಂದ ಕ್ಯಾಲಕೊಂಡ, ಸಿಕಂದರ್ ವಾಲಿಕಾರ, ರಾಜಕುಮಾರ ಶಿರಪಂಥಿ, ಖಂಡೋಜಿ ಬೋಸ್ಲೆ, ಶಿವು ಭದ್ರಾವತಿ, ಘನಶಾಮ ದೇಶಪಾಂಡೆ, ಮಾಲತೇಶ ಬ್ಯಾಗವಾದಿ, ಮೌನೇಶ ಕಲಾಲ ಇದ್ದರು.

ಹಾವೇರಿ: ಜನಸಂಘದ ಸಂಸ್ಥಾಪಕ ಡಾ.ಶ್ಯಾಮಪ್ರಸಾದ ಮುಖರ್ಜಿ ಅವರ 73ನೇ ಬಲಿದಾನ ದಿನಾಚರಣೆಯ ಅಂಗವಾಗಿ ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಗೌರವ ಸಲ್ಲಿಸಲಾಯಿತು.

ಹಾವೇರಿ ತಾಪಂ ಕೆಡಿಪಿ ಸಭೆ | ಶಾಸಕ ರುದ್ರಪ್ಪ ಲಮಾಣಿ ಬೇಸರ

ವಿಬಿ ಜಿರಾಮ್‌ಜಿ ರಾಜ್ಯ ಸರ್ಕಾರಕ್ಕೆ ಹೊರೆ

ಹಾವೇರಿ: ವಿಬಿ ಜಿರಾಮ್‌ಜಿ ಯೋಜನೆ ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದ್ದು, ಇದು ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಆರ್ಥಿಕ ಹೊರೆಯಾಗಲಿದೆ. ಯೋಜನೆಯಲ್ಲಿನ ಹಲವು ?ರತ್ತುಗಳು ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂದು ವಿಧಾನಸಭಾಧ್ಯಕ್ಷ ಹಾಗೂ ಹಾವೇರಿ ಶಾಸಕ ರುದ್ರಪ್ಪ ಲಮಾಣಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ಪಾಲುದಾರಿಕೆಯನ್ನು 60:40 ಅನುಪಾತದಲ್ಲಿ ನಿಗದಿಪಡಿಸಿದ್ದರಿಂದ ರಾಜ್ಯದ ಮೇಲಿನ ವೆಚ್ಚದ ಭಾರ ಹೆಚ್ಚಾಗಲಿದೆ. ಯೋಜನೆಯಲ್ಲಿನ ಹಲವು ನಿಯಮಗಳನ್ನು ಪರಿಶೀಲಿಸುವಂತೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಪ್ರಸ್ತುತ ಪರಿಸ್ಥಿತಿಯಲ್ಲಿ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಕಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಈ ಕುರಿತು ಸಭೆಯಲ್ಲಿ ಮಾಹಿತಿ ನೀಡಿದ ನರೇಗಾ ಯೋಜನಾ ಅಧಿಕಾರಿ, ಜುಲೈ 1ರಿಂದ ರಾಜ್ಯದಲ್ಲಿ ವಿಬಿಜಿ ರಾಮ್‌ಜಿ ಯೋಜನೆ ಜಾರಿಯಾಗಲಿದೆ. ಇದರೊಂದಿಗೆ ನರೇಗಾದಲ್ಲಿ ಇದ್ದ ಕೆಲವು ನಿಯಮಗಳಲ್ಲಿ ಬದಲಾವಣೆ ಆಗಲಿವೆ. ಹೊಸ ಯೋಜನೆಯಡಿ ಬಿತ್ತನೆ ಮತ್ತು ಕೊಯ್ಲು ಅವಧಿಯಲ್ಲಿ ತಲಾ 30ದಿನಗಳಂತೆ ಒಟ್ಟು 60 ದಿನಗಳ ಕಾಲ ಕಾರ್ಮಿಕರಿಗೆ ಕೆಲಸ ನೀಡುವುದನ್ನು ಸ್ಥಗಿತಗೊಳಿಸಲಾಗುತ್ತದೆ. ಸಕ್ರಿಯ ಕಾರ್ಮಿಕರಿಗೆ ಇ-ಕೆವೈಸಿ ಕಡ್ಡಾಯ, ಆನುಷ್ಠಾನದಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ಇದು ಸಹಕಾರಿ. ಆದರೆ

ತಾಲೂಕಿನಲ್ಲಿ ಒಟ್ಟು 260 ಅಂಗನವಾಡಿ ಕೇಂದ್ರಗಳಿದ್ದು, ಅವುಗಳಲ್ಲಿ 55 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ತಿಳಿಸಿದರು. ನಗರ ಪ್ರದೇಶದ 24 ಹಾಗೂ ಗ್ರಾಮೀಣ ಭಾಗದ 31 ಕೇಂದ್ರಗಳು ಸ್ವಂತ ಕಟ್ಟಡವಿಲ್ಲದೆ ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಭಾಗದ 31 ಕೇಂದ್ರಗಳ ಪೈಕಿ 29 ಕೇಂದ್ರಗಳಿಗೆ ಈಗಾಗಲೇ ನಿವೇಶನ ಮಂಜೂರಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
■ ನಾಗರತ್ನಾ, ಸಿಡಿಪಿಒ, ಹಾವೇರಿ

ನಿಗದಿತ ಮಿತಿಗಿಂತ ಹೆಚ್ಚಿನ ಕಾಮಗಾರಿಗಳನ್ನು ಕೈಗೆತ್ತಿಕೊಂಡರೆ ಅದರ ಹೆಚ್ಚುವರಿ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ. ಹೊರಗುತ್ತಿಗೆ ನೌಕರರ ವೇತನ ಹಾಗೂ ಸಾರಿಗೆ ವೆಚ್ಚವನ್ನೂ ರಾಜ್ಯವೇ ಹೊತ್ತುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿ, ಹಾವೇರಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿಲ್ಲ ಎಂದು ತಿಳಿಸಿದರು. ಕೆಲವೆಡೆ ಮಾತ್ರ ಬೋರ್‌ವೆಲ್‌ಗಳನ್ನು ಮರುಕೊರೆಸುವ ಅಗತ್ಯವಿದ್ದು, ಈ ಉದ್ದೇಶಕ್ಕಾಗಿ ಟಾಸ್ಕ್‌ಫೋರ್ಸ್‌ಗೆ 41 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ರುದ್ರಪ್ಪ ಲಮಾಣಿ, ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹಾವೇರಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಅಷ್ಟೊಂದು ಗಂಭೀರವಾಗಿ ಕಂಡುಬಂದಿಲ್ಲ. ಆದರೆ ತುರ್ತು ಅಗತ್ಯವಿರುವ ಪ್ರದೇಶಗಳ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಬೋರ್‌ವೆಲ್ ಕೊರೆಸಲು ವಿದ್ಯುತ್ ಸಮಸ್ಯೆ ಎದುರಾಗುತ್ತಿರುವ ವಿಷಯವೂ ಸಭೆಯಲ್ಲಿ ಚರ್ಚೆಸಲಾಯಿತು.

ಸಭೆಯಲ್ಲಿ ತಾಪಂ ಆಡಳಿತಾಧಿಕಾರಿ ಮೋಹನ ದಂಡಿನ, ತಹಸೀಲ್ದಾರ್ ಶರಣಮ್ಮ, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ತಾಪಂ ಇಒ ಡಾ.ಪರಮೇಶ್ವರ ಹುಬ್ಬಳ್ಳಿ, ಎಂ.ಎಂ. ಮೈದೂರ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಿಎಂ ಭೇಟಿಯಾದ ಶಾಸಕ ಮಾನೆ

ಹಾನಗಲ್ಲ: ಕ್ಷೇತ್ರದ ಶಾಸಕ ಶ್ರೀನಿವಾಸ ಮಾನೆ ಅವರು ಬುಧವಾರ ಬೆಂಗಳೂರಿನ ಕುಮಾರ ಪಾರ್ಕ್‌ನಲ್ಲಿರುವ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರನ್ನು ಭೇಟಿ ಮಾಡಿ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆಗೊಳಿಸುವಂತೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಹಾನಗಲ್ಲ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಳ್ಳಬೇಕಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು, ಮೂಲಸೌಕರ್ಯ ಅಭಿವೃದ್ಧಿ, ರಸ್ತೆ, ಕುಡಿಯುವ ನೀರು, ಶಿಕ್ಷಣ ಹಾಗೂ ಸಾರ್ವಜನಿಕ ಸೌಲಭ್ಯಗಳ ವಿಸ್ತರಣೆಗೆ ಆಗತ್ಯ ಅನುದಾನ ಬಿಡುಗಡೆ ಮಾಡುವಂತೆ ಶಾಸಕ ಮಾನೆ ಅವರ ಮನವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಈ ಸಂದರ್ಭದಲ್ಲಿ ಸ್ಪಂದಿಸಿದರು.

ಕ್ಷೇತ್ರದ ಜನರ ಬಹುಕಾಲದ ಬೇಡಿಕೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳಿಗೆ ಶೀಘ್ರ ಆಡಳಿತಾತ್ಮಕ ಹಾಗೂ ಆರ್ಥಿಕ ಅನುಮೋದನೆ ನೀಡುವಂತೆ ಶಾಸಕ ಮಾನೆ ಅವರ ಮನವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಈ ಸಂದರ್ಭದಲ್ಲಿ ಸ್ಪಂದಿಸಿದರು.

ಕುರಿ ಕದ್ದೊಯ್ದು ಕಳ್ಳರು

ಹಾವೇರಿ: ಕುರಿ ಶೆಡ್‌ನಲ್ಲಿ ಕಟ್ಟಿದ್ದ ಮೂರು ಕುರಿಗಳನ್ನು ಕಳ್ಳತನ ಮಾಡಿರುವ ಘಟನೆ ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ನಡೆದಿದೆ. ಕನವಳ್ಳಿಯ ಆನಂದ ಬಸಪ್ಪ ಹರವಿ ಎಂಬುವವರಿಗೆ ಸೇರಿದ ಸುಮಾರು 50 ಸಾವಿರ ರೂ.ಬೆಲೆಬಾಳುವ ಕುರಿಗಳನ್ನು ಕಳವು ಮಾಡಲಾಗಿದೆ. ತಮ್ಮ ಮನೆಯ ಬಳಿ ಶೆಡ್ ನಿರ್ಮಿಸಿಕೊಂಡು ಕುರಿಗಳನ್ನು ಸಾಕಾಣಿಕೆ ಮಾಡುತ್ತಿದ್ದರು. ರಾತ್ರಿ ವೇಳೆ ಕಳ್ಳರು ಮನೆಯ ಮುಂದೆ ಕಟ್ಟಿಮೇವು ಹಾಕಿದ್ದ ಸಂದರ್ಭದಲ್ಲಿ ಹಗ್ಗದ ಸಮೇತ ಮೂರು ಕುರಿಗಳನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಸ್ವಸ್ಥ ವ್ಯಕ್ತಿ ನಾಪತ್ತೆ

ಹಾವೇರಿ: ಮನೆಯಲ್ಲಿ ಉಪಹಾರ ಸೇವಿಸಿ ಹೊರಹೋಗಿದ್ದ ವ್ಯಕ್ತಿಯೊಬ್ಬರು ವಾಪಸ್ ಮನೆಗೆ ಬಾರದೆ ಕಾಣೆಯಾಗಿರುವ ಘಟನೆ ರಾಣೇಬೆನ್ನೂರಿನ ಉಮಾ ಶಂಕರ ನಗರದ 2ನೇ ಕ್ರಾಸ್‌ನಲ್ಲಿ ನಡೆದಿದೆ. ಉಮಾಶಂಕರ ನಗರದ ನಿವಾಸಿ ಶಿವಾನಂದ ನಾಗರಾಜಪ್ಪ ಗೌಡ್ರ (43) ಎಂಬುವವರೇ ಕಾಣೆಯಾದ ವ್ಯಕ್ತಿ. ಇವರು ಮಾನಸಿಕ ಆಸ್ವಸ್ಥನಿದ್ದು, ಮನೆಯಲ್ಲಿ ಬೆಳಗ್ಗೆ ಉಪಹಾರ ಮಾಡಿ ಹೊರ ಹೋದವರು ವಾಪಾಸ್ ಬಾರದೆ ಕಾಣೆಯಾಗಿದ್ದಾರೆ ಎಂದು ಆತನ ಪತ್ನಿ ಕಾವ್ಯಾ ಗೌಡ್ರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಣ್ಣಿನ ಆರೋಗ್ಯ ನಿರ್ವಹಣೆಗೆ ಆದ್ಯತೆ ನೀಡಿ

ಬ್ಯಾಡಗಿ: ಕೃಷಿ ಭೂಮಿಯಲ್ಲಿ ಸಾವಯವ ಇಂಗಾಲದ ಪ್ರಮಾಣ ಕುಸಿತ, ಪೋಷಕಾಂಶಗಳ ಅಸಮತೋಲನ ಹಾಗೂ ನಿರಂತರ ಹವಾಮಾನ ವೈಪರೀತ್ಯದಿಂದ ಮಣ್ಣಿನ ಉತ್ಪಾದಕತೆ ಮೇಲೆ ಪ್ರತಿಕೂಲ ಪರಿಣಾಮ

ಕಿರುಸುದ್ದಿ

ಎಸ್‌ಐಆರ್ ಸಿಬ್ಬಂದಿಗೆ ಪಾಲಿಕೆಯಿಂದ ತರಬೇತಿ

ಬೆಳಗಾವಿ: ಉತ್ತರ ಮತಕ್ಷೇತ್ರದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯನಿರ್ವಹಿಸಲಿರುವ ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು, ಇತರೆ ಸಿಬ್ಬಂದಿ ಹಾಗೂ ರಾಷ್ಟ್ರಮಟ್ಟದ ವಿವಿಧ ರಾಜಕೀಯ ಪಕ್ಷಗಳ ಮತಗಟ್ಟೆ ಏಜೆಂಟರುಗಳಿಗೆ ನಗರದ ಸರ್ದಾರ್ ಶಾಲೆಯಲ್ಲಿ ಮಹಾನಗರ ಪಾಲಿಕೆಯಿಂದ ತರಬೇತಿ ಹಾಗೂ ಮಾಹಿತಿ ಕಾರ್ಯಗಾರ ಆಯೋಜಿಸಲಾಗಿತ್ತು. ಪಾಲಿಕೆ ಉತ್ತರ ಭಾಗದ ಚುನಾವಣಾ ಅಧಿಕಾರಿ ಹಾಗೂ ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ್ ಟಿ. ಪ್ರಾತ್ಯಕ್ಷಿಕೆಸಹಿತ ಮಾಹಿತಿ ನೀಡಿ ಸಿಬ್ಬಂದಿ ಪ್ರಶ್ನೆಗಳಿಗೆ ಪರಿಹಾರ ನೀಡಿದರು. ಜೂ.30 ರಿಂದ ಜು.29ರವರೆಗೆ ಎಸ್‌ಐಆರ್ ಕಾರ್ಯನಿರ್ವಹಣಾ ಅವಧಿಯಾಗಿದ್ದು, ಸಿಬ್ಬಂದಿಗಳು ತರಬೇತಿಯಲ್ಲಿ ಸರಿಯಾದ ಮಾಹಿತಿ ಪಡೆದುಕೊಂಡು ಯಾವುದೇ ಲೋಪದೋಷಗಳಾಗದಂತೆ ನಿಗದಿತ ಅವಧಿಯಲ್ಲಿ ಸರಿಯಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಲಾಯಿತು. ಮಾಹಿತಿ ಕಾರ್ಯಗಾರದಲ್ಲಿ ನಗರಸೇವಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಆನಂದ ಯಲ್ಲಟ್ಟಿಕರ್, ಗೌತಮ, ಗೊರಗೊಂಡ, ಯಡ್ರಾವಿ, ಜಗದೀಶ ಯಮಕನಮರಡಿ ಇತರರು ಉಪಸ್ಥಿತರಿದ್ದರು.

ಜು. 10ರಂದು ಕಾರ್ಯಾಗಾರ

ಬೆಳಗಾವಿ: ಕನ್ನಡ ವೃತ್ತಿ ರಂಗಭೂಮಿ ಪರಂಪರೆಯಲ್ಲಿ ರಂಗಗೀತೆಗಳಿಗೆ ಮಹತ್ವದ ಸ್ಥಾನ ಇದೆ. ಇತ್ತೀಚೆಗೆ ಕಣ್ಮರೆಯಾಗುತ್ತಿರುವ ಪರಂಪರಾಗತ ರಂಗಗೀತೆಗಳನ್ನು ಅಭಿನಯ ಪೂರ್ವಕವಾಗಿ ಕಲಿಸುವ ಕಾರ್ಯಾಗಾರವನ್ನು ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣವು, ಬೆಳಗಾವಿಯ ಸುಭಾಷ್ ನಗರದ ಕುಮಾರ ಗಂಧರ್ವ ಕಲಾ ಮಂದಿರ ಆವರಣದಲ್ಲಿ ವಿಭಾಗ ಮಟ್ಟದ ''ಅಭಿನಯ ಸಮೇತ ರಂಗಸಂಗೀತ ಕಲಿಕಾ ಕಾರ್ಯಾಗಾರ'ವನ್ನು ಜು. 10ರಂದು ಹಮ್ಮಿಕೊಂಡಿದೆ.

ಸಂಗೀತದ ಪ್ರಾಥಮಿಕ ಜ್ಞಾನವುಳ್ಳ 18 ವಯಸ್ಸಿನಿಂದ 40 ವರ್ಷದೊಳಗಿನ ಆಭ್ಯರ್ಥಿಗಳು ಸ್ವ-ವಿವರದ ಮನವಿಯೊಂದಿಗೆ ನೇರ ಸಂದರ್ಶನಕ್ಕೆ ಜುಲೈ 10 (ಶುಕ್ರವಾರ) ರಂದು ಬೆಳಗ್ಗೆ 11:30 ಗಂಟೆಗೆ ಕುಮಾರ ಗಂಧರ್ವ ಕಲಾಮಂದಿರ ಆವರಣದಲ್ಲಿ ಹಾಜರಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಹದಿನೈದು ದಿನಗಳ ರಂಗಸಂಗೀತ ಕಲಿಕಾ ಕಾರ್ಯಾಗಾರದಲ್ಲಿ ಧ್ವನಿ ಸಂಸ್ಕರಣೆ, ರಂಗ ಸಂಗೀತದ ಪ್ರಾಥಮಿಕ ಪಾಠಗಳು ಮತ್ತು ರಂಗಗೀತೆಗಳ ಅಭಿನಯಪೂರ್ವಕ ಕಲಿಕೆಯ ತರಬೇತಿ ನೀಡಲಾಗುವುದು. ತರಬೇತಿ ಪೂರೈಸಿದ ಅಭ್ಯರ್ಥಿಗಳಿಗೆ ಶಿಷ್ಯವೇತನ ಹಾಗೂ ಪ್ರಮಾಣಪತ್ರ ನೀಡಲಾಗುವುದು. ತರಬೇತಿ ನಂತರ ಸಾರ್ವಜನಿಕ ಪ್ರದರ್ಶನ ಏರ್ಪಡಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 93410-10712, 70193-13015, 08192-200635 ಗೆ ಸಂಪರ್ಕಿಸಬಹುದು ಎಂದು ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗೋಕಾಕ: ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ತಾಲೂಕ ಘಟಕ ಗೋಕಾಕ ವತಿಯಿಂದ 2026ರ ವಾರ್ಷಿಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 85% ಪ್ರತಿಶತಕ್ಕಿಂತ ಅಧಿಕ ದ್ವಿತೀಯ ಪಿಯುಸಿಯಲ್ಲಿ 80% ಪ್ರತಿಶತಕ್ಕಿಂತ ಅಧಿಕ ಅಂಕಗಳಿಸಿದ ತಾಲೂಕಿನ ಬಣಜಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಆಸಕ್ತ ವಿದ್ಯಾರ್ಥಿಗಳು ತಮ್ಮ ಅಂಕ ಪಟ್ಟಿ ಹಾಗೂ ಆಧಾರ್ ನಕಲು, ಎರಡು ಪಾಸ್‌ಪೋರ್ಟ್ ಸೈಜ್ ಫೋಟೊದೊಂದಿಗೆ ಜು. 5ರೊಳಗಾಗಿ ಸಂಘಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಈ ವಿದ್ಯಾರ್ಥಿಗಳಿಗೆ ಜು. 19ರಂದು ಬೆಳಗ್ಗೆ 10ಗಂಟೆಗೆ ಜೆಎಸ್ ಎಸ್ ಮಹಾವಿದ್ಯಾಲಯದ ಸಭಾ ಭವನದಲ್ಲಿ ನಡೆಯುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಲಖಿಮನಗೌಡ ಪಾಟೀಲ 9620020585, ಅಡವೀಶ ಅಂಗಡಿ 99022333986, ಚಿದಾನಂದ ಬುರ್ಲಿ 9900191997, ರವೀಂದ್ರ ಅಡಕೆ 9379132863 ಸಂಪರ್ಕಿಸಲು ಸಂಘದ ಅಧ್ಯಕ್ಷರಾದ ಪ್ರೋ. ಸಿ ಬಿ ಕೌಜಲಗಿ(9449545650) ತಿಳಿಸಿದ್ದಾರೆ.

ಯರಗಟ್ಟಿ : ತಾಲೂಕಿನ ಬೂದಿಗೊಪ್ಪ ಕರೆಮ್ಮ ದೇವಸ್ಥಾನದ ಮುಂಭಾಗದಲ್ಲಿ ಪಿಡಬ್ಲ್ಯೂಡಿ ರಸ್ತೆಯ ಪುಟ್‌ಪಾತ್ ಮೇಲೆ ಅತಿಕ್ರಮಣ ಅಂಗಡಿಗಳನ್ನು ತೆರವುಗೊಳಿಸಲಾಯಿತು. ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ದಂಡಾಧಿಕಾರಿ ಎಮ್. ವ್ಹಿ. ಗುಂಡಪ್ಪಗೋಳ ಅವರು ಮಾತನಾಡಿ, ರಸ್ತೆಬದಿಯ ಡಬ್ಬಾ ಅಂಗಡಿಗಳಿಂದ ಭಕ್ತರಿಗೆ ಹಾಗೂ ವಾಹನ ಸವಾರರಿಗೆ ತೊಂದರೆ ಆಗುತ್ತಿತ್ತು. ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಬೆಳಗಾವಿ: ಉತ್ತರ ವಿಧಾನಸಭಾ ಕ್ಷೇತ್ರದ ಮಹಾಂತೇಶ್ ನಗರದ ಶಿವತೀರ್ಥ ಕಾಲನಿಯಲ್ಲಿ ಬಹುದಿನಗಳಿಂದ ಸಾರ್ವಜನಿಕರು ಆಗ್ರಹಿಸುತ್ತಿದ್ದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಆಸೀಫ್ ಸೇಠ್ ಭೂಮಿ ಪೂಜೆ ಸಲ್ಲಿಸುವುದರ ಮೂಲಕ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಶಾಸಕ ಆಸೀಫ್ ಸೇಠ್ ಅವರು, ಶಿವತೀರ್ಥ ಕಾಲನಿಯಲ್ಲಿ ರಸ್ತೆ, ಚರಂಡಿ ಹಾಗೂ ವಿದ್ಯುತ್ ಸೌಲಭ್ಯಗಳ ಕೊರತೆ ಕುರಿತು ನಿವಾಸಿಗಳಿಂದ ನಿರಂತರವಾಗಿ ಬೇಡಿಕೆ ವ್ಯಕ್ತವಾಗುತ್ತಿತ್ತು ಎಂದು ಹೇಳಿದರು. ಈಗಾಗಲೇ 75 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಆಗತ್ಯವಾದ ಬೇಸ್ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಇದೀಗ 46 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ ಎಂದು ಹೇಳಿದರು.

ರಸ್ತೆ ಕಾಮಗಾರಿ ಪೂರ್ಣಗೊಂಡ ಬಳಿಕ ಚರಂಡಿ ನಿರ್ಮಾಣ, ವಿದ್ಯುತ್ ದೀಪಗಳ ಅಳವಡಿಕೆ ಹಾಗೂ ಹೆಚ್ಚುವರಿ ವಿದ್ಯುತ್ ಕಂಬಗಳ ಸ್ಥಾಪನೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಈ ವೇಳೆ ಯುವ ಕಾಂಗ್ರೆಸ್ ನಾಯಕ ಅಮನ್ ಸೇಠ್, ಗುತ್ತಿಗೆದಾರರು, ಸ್ಥಳೀಯ ನಿವಾಸಿಗಳು, ಅಧಿಕಾರಿಗಳು, ವಿವಿಧ ಗಣ್ಯರು ಸ್ಥಳೀಯರು ಸೇರಿದಂತೆ ಇತರರು ಇದ್ದರು.

ಬೆಳಗಾವಿ: ಉತ್ತರ ವಿಧಾನಸಭಾ ಕ್ಷೇತ್ರದ ಮಹಾಂತೇಶ್ ನಗರದ ಶಿವತೀರ್ಥ ಕಾಲನಿಯಲ್ಲಿ ಬಹುದಿನಗಳಿಂದ ಸಾರ್ವಜನಿಕರು ಆಗ್ರಹಿಸುತ್ತಿದ್ದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಆಸೀಫ್ ಸೇಠ್ ಭೂಮಿ ಪೂಜೆ ಸಲ್ಲಿಸುವುದರ ಮೂಲಕ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಉಪವಿಭಾಗಾಧಿಕಾರಿ ಪ್ರವೀಣ ಜೈನ ಹೇಳಿಕೆ

ಶೇ.96.96ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣ

ಬೈಲಹೊಂಗಲ: ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐ ಆರ್) ಕಾರ್ಯದ ಅಂಗವಾಗಿ ಬೈಲಹೊಂಗಲ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ ಯಶಸ್ವಿಯಾಗಿ ಸಾಗುತ್ತಿದ್ದು, ಕ್ಷೇತ್ರದಲ್ಲಿನ ಒಟ್ಟು 1,96,071 ಮತದಾರರ ಪೈಕಿ ಶೇಕಡಾ 96.96 ರಷ್ಟು ಮತದಾರರ ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ ಎಂದು ಉಪವಿಭಾಗಾಧಿಕಾರಿ ಪ್ರವೀಣ ಜೈನ ಹೇಳಿದರು.

ಅವರು ನಗರದ ತಹಶೀಲ್ದಾರ್ ಕಚೇರಿಯಲ್ಲಿ ಸುದ್ದಿ ಗೋಷ್ಠಿ ಉದ್ದೇಶಿಸಿ ಮಾತನಾಡಿ, ಪ್ರಸ್ತುತ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ 97,251 ಪುರುಷ ಮತದಾರರು, 98,824 ಮಹಿಳಾ ಮತದಾರರು ಹಾಗೂ 7 ತೃತೀಯ ಲಿಂಗದ ಮತದಾರರು ಸೇರಿ ಒಟ್ಟು 1,96,071 ಮತದಾರರಿದ್ದಾರೆ. ಮನೆಮನೆಗೆ ಭೇಟಿ ನೀಡುತ್ತಿರುವ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒಗಳು) ಮತದಾರರ ಕುಟುಂಬದ ವಿವರಗಳು, ಆಧಾರ್ ಸೇರಿದಂತೆ ಇತರೆ ದಾಖಲೆಗಳ ಆಧಾರದ ಮೇಲೆ ಮತದಾರರ ಮಾಹಿತಿಯನ್ನು ಪರಿಶೀಲಿಸುವ ಕಾರ್ಯ ಕೈಗೊಂಡಿದ್ದಾರೆ.

ಈ ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯಲ್ಲಿನ ಮಾಹಿತಿಯನ್ನು ನವೀಕರಿಸಿ, ಮುಂದಿನ ಪರಿಷ್ಕರಣೆ ಕಾರ್ಯಕ್ಕೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶೇಷ ಪರಿಷ್ಕರಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಬಿಎಲ್‌ಒಗಳು, ಮೇಲ್ವಿಚಾರಕರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಮನೆ ಮನೆಗೆ ತೆರಳಿ ಮತದಾರರ ವಿವರಗಳನ್ನು ಪರಿಶೀಲಿಸುವ ಕಾರ್ಯ ಜುಲೈ 4ರಿಂದ ಅಂತ್ಯದವರೆಗೆ ಮುಂದುವರಿಯಲಿದ್ದು, ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5ರಂದು ಪ್ರಕಟಿಸಲಾಗುವುದು ಎಂದು ತಿಳಿಸಲಾಗಿದೆ.

ಪ್ರಸ್ತುತ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ 97,251 ಪುರುಷ ಮತದಾರರು, 98,824 ಮಹಿಳಾ ಮತದಾರರು ಹಾಗೂ 7 ತೃತೀಯ ಲಿಂಗದ ಮತದಾರರು ಸೇರಿ ಒಟ್ಟು 1,96,071 ಮತದಾರರಿದ್ದಾರೆ.

ಕರಡು ಮತದಾರರ ಪಟ್ಟಿ ಪ್ರಕಟವಾದ ಬಳಿಕ ಆಗಸ್ಟ್ 5ರಿಂದ ಸೆಪ್ಟೆಂಬರ್ 4ರವರೆಗೆ ಸಾರ್ವಜನಿಕರಿಗೆ ತಮ್ಮ ಹೆಸರು ಸೇರ್ಪಡೆ, ತಿದ್ದುಪಡಿ, ಸ್ಥಳಾಂತರ, ಆಕ್ಷೇಪಣೆ ಸೇರಿದಂತೆ ವಿವಿಧ ಮನವಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ನೋಟಿಸ್ ಜಾರಿಗೊಳಿಸಿ ವಿಚಾರಣೆ ನಡೆಸಲಾಗುವುದು. ನಂತರ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 7, 2026ರಂದು ಪ್ರಕಟಿಸಲಾಗುವುದು ತಿಳಿಸಿದ್ದಾರೆ.

ಇದೇ ವೇಳೆ, ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಕೆಲ ವಲಯಗಳಲ್ಲಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ ಎಂಬ ವದಂತಿಗಳು ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ವಿಶೇಷ ತೀವ್ರ ಪರಿಷ್ಕರಣೆ ಕಾರ್ಯದಡಿ ಇದುವರೆಗೆ ಯಾವುದೇ ಹೊಸ ಮತದಾರರನ್ನು ಸೇರ್ಪಡೆಗೊಳಿಸಿಲ್ಲ ಹಾಗೂ ಯಾವುದೇ ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸುವ ಕೆಲಸವೂ ನಡೆದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ಕಾರ್ಯವು ಕೇವಲ ಮತದಾರರ ವಿವರಗಳ ಪರಿಶೀಲನೆ ಮತ್ತು ಮ್ಯಾಪಿಂಗ್‌ಗೆ ಮಾತ್ರ ಸೀಮಿತವಾಗಿದ್ದು, ಮತದಾರರ ಕುಟುಂಬ ಸಂಬಂಧಗಳು, ವಿಳಾಸ ಹಾಗೂ ದಾಖಲೆಗಳ ಮಾಹಿತಿಯನ್ನು ದೃಢೀಕರಿಸಲಾಗುತ್ತಿದೆ.

ಯಾವುದೇ ಮತದಾರರ ಹೆಸರನ್ನು ಸ್ವಯಂಪ್ರೇರಿತವಾಗಿ ಅಳಿಸುವ ಅಧಿಕಾರ ಅಧಿಕಾರಿಗಳಿಗೆ ಇಲ್ಲ. ಮತದಾರರ ಕುರಿತು ಅನುಮಾನ ಅಥವಾ ಆಕ್ಷೇಪಣೆ ಕಂಡುಬಂದರೆ ನೇರವಾಗಿ ಹೆಸರು ಅಳಿಸುವ ಬದಲು ಸಂಬಂಧಿಸಿದ ಮತದಾರರಿಗೆ ಮೊದಲು ನೋಟಿಸ್ ನೀಡಲಾಗುತ್ತದೆ. ಬಳಿಕ ಅವರಿಗೆ ತಮ್ಮ ದಾಖಲೆಗಳನ್ನು ಸಲ್ಲಿಸಲು ಹಾಗೂ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ. ಚುನಾವಣಾ ಆಯೋಗದ ನಿಯಮಾನುಸಾರ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ. ಹೀಗಾಗಿ ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗದೆ ತಮ್ಮ ಮತದಾರರ ವಿವರಗಳನ್ನು ಪರಿಶೀಲಿಸಿಕೊಳ್ಳಬೇಕು. ಅಗತ್ಯ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವ ಮೂಲಕ ತಮ್ಮ ಮತದಾನದ ಹಕ್ಕನ್ನು ಸುರಕ್ಷಿತವಾಗಿರಿಸಿಕೊಳ್ಳಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. ಈ ವೇಳೆ ತಹಸೀಲ್ದಾರ್ ಸದಾಶಿವ ಮಕ್ಕೋಜಿ, ನಗರಸಭೆ ಆಯುಕ್ತೆ ಭಾಗ್ಯಶ್ರೀ ಹುಗ್ಗಿ ಆನೇಕರು ಇದ್ದರು.

ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ: ಗುರಕನವರ

ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅವರಿಗೆ ಮನವಿ ಸಲ್ಲಿಕೆ

ಚಿಕ್ಕೋಡಿ: ಜೂ.18ರಂದು ರಾಜ್ಯ ಸರ್ಕಾರ ವಿಶೇಷ ರಾಜ್ಯಪತ್ರ ಕರಡು ತಿದ್ದುಪಡಿ ಹೊರಡಿಸುವ ಮೂಲಕ ಪಿಯು ಉಪನ್ಯಾಸಕರಿಗೆ ಪ್ರೌಢಶಾಲೆ ತರಗತಿ ಬೋಧನೆ ಹೊಣೆ ಹೊರಿಸಿದ್ದು ಸರಿಯಾದ ಕ್ರಮವಲ್ಲ ಎಂದು ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಪಿಯುಸಿ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಅಪ್ಪು ಗುರಕನವರ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅವರಿಗೆ ಬುಧವಾರ ಈ ಕುರಿತು ಮನವಿ ನೀಡಿ ಮಾತನಾಡಿದ ಅವರು, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಈಗಾಗಲೇ ವಾರಕ್ಕೆ 20 ಗಂಟೆಗಳ ಬೋಧನಾ ಹೊಣೆಗಾರಿಕೆ ನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ ಪ್ರೌಢಶಾಲೆಗಳ 9 ಮತ್ತು 10ನೇ ತರಗತಿಗೆ ಬೋಧನೆ ಹೊಣೆಗಾರಿಕೆ ವಹಿಸುವುದು ಮತ್ತಷ್ಟು ಒತ್ತಡಕ್ಕೆ ಕಾರಣವಾಗಲಿದೆ. ಅಲ್ಲದೇ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಉದ್ಯೋಗದ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ'' ಎಂದರು.

ಪಿಯುಸಿ ಉಪನ್ಯಾಸಕರಿಂದ ಮನವಿ ಸ್ವೀಕರಿಸಿ ಶಾಸಕ ಗಣೇಶ ಹುಕ್ಕೇರಿ ಮಾತನಾಡಿ, ಸಂಘಟಕರು ಈಗಾಗಲೇ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅವರ ಗಮನಕ್ಕೆ ತಂದಿದ್ದು, ಅವರೊಂದಿಗೆ ಚರ್ಚಿಸಿ ಸರ್ಕಾರದ ಗಮನ ಸೆಳೆಯುವೆ. ತಮ್ಮ ಸಮಸ್ಯೆಗೆ ಸ್ಪಂದಿಸುವುಸದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಪಿಯುಸಿ ಉಪನ್ಯಾಸಕರ ಸಂಘಟನೆ ಕಾರ್ಯಾಧ್ಯಕ್ಷ ಯು.ಎಸ್. ಶಿಂಧೆ, ಪದಾಧಿಕಾರಿಗಳಾದ ಶ್ರೀಶೈಲ ಕೋಲಾರ, ಎನ್.ಎಸ್. ಕುರುಬರ, ಸರೋಜಿನಿ ಸಮಾಜೆ, ಎ.ಎಸ್. ಹುಣಶಾಲೆ, ಅಜೀಯ ಮೊನೆ, ಮಹಾಂತೇಶ ಬಿರಾದಾರ, ಪಿ.ಎಸ್. ಕಾಂಬಳೆ, ಶಾಂತಿನಾಥ ಚೌಗಲೆ ಇತರರು ಇದ್ದರು.

ವಿಷನ್ ಕರ್ನಾಟಕದ ಮಹಾ ಪ್ರದರ್ಶನದ ಉದ್ಘಾಟನೆ
ಮೊದಲ ದಿನ ಎಂಟು ಸಾವಿರ ವಿದ್ಯಾರ್ಥಿಗಳು ಭೇಟಿ

ಬೆಳಗಾವಿ: ನಾನು ದೇಶ-ವಿದೇಶಗಳಿಗೆ ಪ್ರಯಾಣಿಸುತ್ತೇನೆ. ನಾನು ಎಲ್ಲಿಗೆ ಹೋದರೂ, ನನ್ನ ಬೆಳಗಾವಿಗೆ ಯಾವ ಹೊಸ ವಸ್ತುಗಳನ್ನು ತರಬಹುದು, ಯಾವ ಹೊಸ ವಿಷಯಗಳನ್ನು ಪ್ರಾರಂಭಿಸಬಹುದು ಎಂಬುದರ ಬಗ್ಗೆ ನಾನು ಯಾವಾಗಲೂ ಯೋಚಿಸುತ್ತೇನೆ. ಇಡೀ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ವಿಷನ್ ಕರ್ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಜಗದೀಶ ಶೆಟ್ಟರ ಹೇಳಿದರು.

ಮಂಗಳವಾರ, ದೆಹಲಿಯ ಪ್ರಯಾಸದ ಪ್ರದರ್ಶನದ ಪರವಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ ಅವರ ನೇತೃತ್ವದಲ್ಲಿ ಇಲ್ಲಿನ ಕೆಎಲ್‌ಇ ಸೊಸೈಟಿಯ ಕನ್ವೆನ್ಷನ್ ಸೆಂಟರ್‌ನಲ್ಲಿ ಪ್ರದರ್ಶನ ನಡೆಸಲಾಯಿತು.

ಕೆಎಲ್‌ಇ ಸೊಸೈಟಿಯ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾದ ''ಸೆಕೆಂಡ್ ವಿಷನ್

ಕಿರುಸುದ್ದಿ

ಸಾಂಸ್ಕೃತಿಕ ಉತ್ಸವ, ನಾಟಕ ಉತ್ಸವ ಯಶಸ್ವಿ

ಬೆಳಗಾವಿ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಹಾಗೂ ನಿಗುಣ ಶಿವಯೋಗಿ ಸಾಂಸ್ಕೃತಿಕ ಹಾಗೂ ನಾಟಕ ಕ್ರೀಡಾ ಕಲಾ ಸಂಘ, ಗೋಕಾಕ ಇವರ ಸಂಯುಕ್ತಾಶ್ರಯದಲ್ಲಿ ಎಂ. ಚಂದರಗಿ ಗ್ರಾಮದಲ್ಲಿ ಜೂ.16 ಮತ್ತು 17ರಂದು ರಾತ್ರಿ 8 ಗಂಟೆಗೆ ''ಸಾಂಸ್ಕೃತಿಕ ಉತ್ಸವ ಹಾಗೂ ನಾಟಕ ಉತ್ಸವ'' ಕಾರ್ಯಕ್ರಮವನ್ನು ಆಯೋಜಿಸಿ ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿಯ ಹಿರಿಯರಾದ ಹಣಮಂತ ಬಸಪ್ಪ ಭಜನ್ನವರ ಉದ್ಘಾಟಿಸಿದರು. ಸಂಘದ ಅಧ್ಯಕ್ಷರಾದ ಬಸಪ್ಪ ಅಕ್ಕಿಸಾಗರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾರುತಿ ಭರಮಪ್ಪ ಕರಿಗಾರ, ಉದ್ದಪ್ಪ ರಾಮಪ್ಪ ಕೌಜಲಗಿ, ಈರಪ್ಪ ಗಿರೆಪ್ಪ ಮಲ್ಲಾಡಿ, ಗೌಡಪ್ಪ ಯ. ಕರಿಗೌಡ್ರ, ಚನಬಸಪ್ಪ ರಾಮವ್ವ ಅಕ್ಕಿಸಾಗರ ಸೇರಿದಂತೆ ಹಲವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಸಪ್ಪ ಅಕ್ಕಿಸಾಗರ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಅವರ ಜೀವನಕ್ಕೆ ಉತ್ತಮ ಅವಕಾಶಗಳನ್ನು ಕಲ್ಪಿಸುತ್ತವೆ ಎಂದು ತಿಳಿಸಿದರು. ಆಧುನಿಕ ಯುಗದಲ್ಲಿ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಅಗತ್ಯವಿದ್ದು, ಯುವ ಪೀಳಿಗೆಯು ಅವುಗಳ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ಸಂಘದ ಪದಾಧಿಕಾರಿಯಾದ ಅಕ್ಕಮಹಾದೇವಿ ಮಾದರ ಮಾತನಾಡಿ, ಸಂಘದ ಉದ್ದೇಶಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕುರಿತು ವಿವರಿಸಿದರು.ಉತ್ಸವದಲ್ಲಿ ಜಾನಪದ ಸಂಗೀತ, ಸೋಬಾನ ಪದ, ಬಿಸುವಕಲ್ಲಿನ ಪದ, ಚರ್ಮವಾದ್ಯ, ಕೋಲಾಟ, ಜಾನಪದ ನೃತ್ಯ, ಕರಡಿ ಮಜಲು, ಡೊಳ್ಳಿನ ಪದಗಳು, ಹಂತಿ ಪದಗಳು, ಶ್ರೀಕೃಷ್ಣ ಪಾರಿಜಾತ, ರಾಧಾ-ಕೃಷ್ಣ, ಸಂಗ್ಯಾ-ಬಾಳ್ಯಾ ಸಣ್ಣಾಟ, ನಿಜಗುಣ ಶಿವಯೋಗಿ ಹಾಗೂ ಭಜನಾ ಪದಗಳಂತಹ ವಿವಿಧ ಕಲಾ ಪ್ರದರ್ಶನಗಳು ಪ್ರೇಕ್ಷಕರ ಮನಸೂರೆಗೊಂಡವು.ಕಾರ್ಯಕ್ರಮಕ್ಕೆ ಆಕ್ಕಮಹಾದೇವಿ ಮಾದರ ಸ್ವಾಗತ ಕೋರಿದರೆ, ಯಮನವ್ವ ಮಾದರ ವಂದನಾರ್ಪಣೆ ಸಲ್ಲಿಸಿದರು. ಗ್ರಾಮಸ್ಥರು ಹಾಗೂ ಕಲಾಭಿಮಾನಿಗಳ ಉತ್ತಮ ಸಹಕಾರದಿಂದ ಉತ್ಸವ ಯಶಸ್ವಿಯಾಗಿ ನೆರವೇರಿತು.

ಮಂಗನ ಕಾಯಿಲೆ ಪತ್ತೆ

ಸಿದ್ದಾಪುರ: ತಾಲೂಕಿನ ಕೊರ್ಲಕೈ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಮನಮನೆಯ 35 ವರ್ಷ ವಯಸ್ಸಿನ ಮಹಿಳೆಯೋರ್ವರಲ್ಲಿ ಮಂಗನ ಕಾಯಿಲೆ ಕಂಡುಬಂದಿದೆ ಎಂದು ತಾಲೂಕಾ ವೈದ್ಯಾಧಿಕಾರಿ ಡಾ.ಲಕ್ಷ್ಮೀಕಾಂತ ನಾಯ್ಕ ತಿಳಿಸಿದ್ದಾರೆ. ಸದರಿ ಮಹಿಳೆಯು ಚಿಕಿತ್ಸೆಗಾಗಿ ಸಾಗರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು ಸದರಿ ಮಹಿಳೆಯ ಆರೋಗ್ಯದಲ್ಲಿ ಸ್ಥಿರತೆ ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆ.

ಜೂ. 27ವರೆಗೆ ಮದ್ಯದ ಅಂಗಡಿ ಬಂದ್

ಬೆಳಗಾವಿ: ನಗರದಲ್ಲಿ ಜೂ. 26ರಂದು ಮೊಹರಂ ಹಬ್ಬದ ಕೊನೆಯ ದಿನದ ಮೆರವಣಿಗೆ ನಡೆಯಲಿರುವುದರಿಂದ, ಮೊಹರಂ ಹಬ್ಬದ ಮೆರವಣಿಗೆ ಕಾಲದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗೃತಾ ಕ್ರಮವಾಗಿ ಜೂ. 25 ರಂದು ಸಂಜೆ 6 ಗಂಟೆಯಿಂದ ಜೂ. 27 ರಂದು ಬೆಳಿಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟದ ಅಂಗಡಿಗಳು, ಬಾರ್/ರೆಸ್ಟೋರೆಂಟ್ಗಳು, ಕ್ಲಬ್ಗಳು ಹಾಗೂ ದಾಸ್ತಾನು ಡಿಪೋಗಳಿಂದ ಸರಬರಾಜನ್ನು ಬಂದ್ ಇಡುವಂತೆ ಬೆಳಗಾವಿ ನಗರ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು, ಹಾಗೂ ಪೊಲೀಸ್ ಆಯುಕ್ತರಾದ ಬೊರಸೆ ಭೂಷಣ್ ಗುಲಾಬರಾವ್ ಆದೇಶವನ್ನು ಹೊರಡಿಸಿರುತ್ತಾರೆ.

ನಿಧನ ಸುದ್ದಿ

ಮಹಾನಿಂಗಪ್ಪ ಬೆಳಕೂಡ

ಮೂಡಲಗಿ: ಕುರುಹಿನಶೆಟ್ಟಿ ಸಮಾಜದ ಹಿರಿಯ ಮಹಾಲಿಂಗಪ್ಪ ಶಿವಬಸಪ್ಪ ಬೆಳಕೂಡ (80) ಮಂಗಳವಾರ ನಿಧನರಾದರು.ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗ ಇದ್ದಾರೆ.



ಹಿರೇ ಬಾಗೇವಾಡಿ: ಇಲ್ಲಿಯ ಗೌಸಿಯಾ ಉರ್ದು ಪ್ರೌಢಶಾಲೆಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಹಿರೇಬಾಗೇವಾಡಿ ಇವರ ವತಿಯಿಂದ ವನಮಹೋತ್ಸವದ ನಿಮಿತ್ತ ಬುಧವಾರ ಪರಿಸರ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಧಾನ ಗುರು ಮೊಹಮ್ಮದ ಇಸಾಕ್ ನೇಗಿನಹಾಳ, ಯೋಜನಾಧಿಕಾರಿ ಯೋಗೀಶ್ ಕೆ, ಗಂಗಾ ಪಾಟೀಲ, ರಿಯಾಜ್ ದರದಾದ, ಮಹಾದೇವಿ ಇಂಚಲ, ಸೇವಾ ಪ್ರತಿನಿಧಿಗಳು ಇತರರು ಇದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಕೆ

ಬೆಳಗಾವಿ: ರಾಜ್ಯ ಹಾಗೂ ಜಿಲ್ಲೆಯಲ್ಲಿ ಹಿಂದೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಕಾರ್ಯಕರ್ತರನ್ನು ಬೆದರಿಸುವ ಮತ್ತು ಬಂಧಿಸುವ ಪೊಲೀಸರ ಕ್ರಮವನ್ನು ಖಂಡಿಸಿ, ಜೊತೆಗೆ ಅಗ್ನಿವೀರರ ನೇಮಕಾತಿ ಪ್ರಕ್ರಿಯೆಯ ಅಂತಿಮ ಹಂತವಾದ ಪೊಲೀಸ್ ಪರಿಶೀಲನೆ (ಪೊಲೀಸ್ ವೆರಿಫಿಕೇಶನ್) ವಿಳಂಬವಾಗುತ್ತಿರುವ ಕುರಿತು ಬಿಜೆಪಿ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು. ಹಿಂದೂ ಕಾರ್ಯಕರ್ತರ ವಿರುದ್ಧ ಅನಗತ್ಯವಾಗಿ ಪ್ರಕರಣಗಳನ್ನು ದಾಖಲಿಸುವುದರಿಂದ ಕಾರ್ಯಕರ್ತರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಇಂತಹ ಕ್ರಮಗಳನ್ನು ತಡೆಯುವಂತೆ ಆಗ್ರಹಿಸಿದರು. ಅಲ್ಲದೆ, ದೇಶದ ರಕ್ಷಣಾ ಪಡೆಯ ಹೊಸ ನೇಮಕಾತಿ ಯೋಜನೆಯಡಿ ಆಯ್ಕೆಯಾದ ಅಗ್ನಿವೀರರ ಪೊಲೀಸ್ ಪರಿಶೀಲನೆ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಈ ಪ್ರಕ್ರಿಯೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಯಿತು. ಮನವಿಗೆ ಸ್ಪಂದಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರು, ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣಗಳ ಕುರಿತು ಪರಿಶೀಲನೆ ನಡೆಸುವುದಾಗಿ ಹಾಗೂ ಅಗ್ನಿವೀರರ ನೇಮಕಾತಿ ಪ್ರಕ್ರಿಯೆಯ ಪೊಲೀಸ್ ಪರಿಶೀಲನೆ ವಿಳಂಬವಾಗದಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಈರಣ್ಣ ಅಂಗಡಿ, ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಮಹಾಂತೇಶ ಚನ್ನಪ್ಪಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಆನಂದ ಅತ್ತುಗೋಳ, ಮಂಜುನಾಥ ಅಷ್ಟಗಿ ಹಲವು ಮುಖಂಡರು ಉಪಸ್ಥಿತರಿದ್ದರು.

ಬೆಳಗಾವಿ: ರಾಜ್ಯ ಹಾಗೂ ಜಿಲ್ಲೆಯಲ್ಲಿ ಹಿಂದೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಕಾರ್ಯಕರ್ತರನ್ನು ಬೆದರಿಸುವ ಮತ್ತು ಬಂಧಿಸುವ ಪೊಲೀಸರ ಕ್ರಮವನ್ನು ಖಂಡಿಸಿ, ಜೊತೆಗೆ ಅಗ್ನಿವೀರರ ನೇಮಕಾತಿ ಪ್ರಕ್ರಿಯೆಯ ಅಂತಿಮ ಹಂತವಾದ ಪೊಲೀಸ್ ಪರಿಶೀಲನೆ (ಪೊಲೀಸ್ ವೆರಿಫಿಕೇಶನ್) ವಿಳಂಬವಾಗುತ್ತಿರುವ ಕುರಿತು ಬಿಜೆಪಿ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ

ವಿದ್ಯಾರ್ಥಿಗಳು ದುಶ್ಚಟದಿಂದ ದೂರವಿರಲಿ

ಚನ್ನಮ್ಮನ ಕಿತ್ತೂರು: ವಿದ್ಯಾರ್ಥಿಗಳು ದುರಭ್ಯಾಸಗಳಿಂದ ದೂರವಿದ್ದು, ಸಾಧನೆ ಮಾಡಲು ಹಲವಾರು ಅವಕಾಶಗಳಿದ್ದು ಪಿಯುಸಿ ಹಂತದಲ್ಲೇ ವಿದ್ಯಾರ್ಥಿಗಳು ಐಎಎಸ್, ಐಪಿಎಸ್ ನಂತಹ ಉನ್ನತ ಹುದ್ದೆಗಳ ಕನಸು ಕಂಡು, ದೃಢ ಸಂಕಲ್ಪದೊಂದಿಗೆ ಮುನ್ನಡೆಯಬೇಕೆಂದು ಬೆಳಗಾವಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಆರ್. ಬಸರಗಿ ಹೇಳಿದರು.

ಸ್ಥಳೀಯ ಗುರುಭವನದಲ್ಲಿ ಬುಧವಾರ ಬೆಳಗಾವಿ ಜಿಲ್ಲಾ ಪೊಲೀಸ್, ಕಿತ್ತೂರು ಪೊಲೀಸ್ ಠಾಣೆ ಹಾಗೂ ಆರ್ ಜಿ ಎಸ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಲವು ವೈರಿ ರಾಷ್ಟ್ರಗಳು ಇದರ ದುರುಪಯೋಗ ಪಡೆದು ಇಡೀ ದೇಶಗಳನ್ನೇ ಸರ್ವನಾಶ ಮಾಡಲು ಸಂಚು ರೂಪಿಸುತ್ತಿವೆ ಇದಕ್ಕೆ ಎಲ್ಲ ಯುವಕರು ಆಸ್ಪದ ಕೊಡದೆ ಉತ್ತಮ ಸಮಾಜ ನಿರ್ಮಿಸಬೇಕೆಂದರು.

ನಿಮ್ಮ ಸುತ್ತಮುತ್ತ ಎಲ್ಲಾದರೂ ಇಂತಹ ಅಕ್ರಮ ಮಾದಕದ್ರವ್ಯಗಳ ಮಾರಾಟ,ಸಾಗಾಟ ಅಥವಾ ಬಳಕೆ ಕಂಡುಬಂದಲ್ಲಿ, ತಕ್ಷಣವೇ ಜಾಗೃತರಾಗಿ ಕಾನೂನು ಮತ್ತು ಪೊಲೀಸ್ ಇಲಾಖೆಗೆ ಅಥವಾ ಕೆಎಸ್ಪಿ ಆಪ್ಯನ್ನು ಉಪಯೋಗಿಸಿ ಮಾಹಿತಿ ತಿಳಿಸುವದು ಪ್ರತಿಯೊಬ್ಬ ವಿದ್ಯಾರ್ಥಿಯ ಹಾಗೂ ನಾಗರಿಕನ ಕರ್ತವ್ಯವಾಗಿದೆ. ಜೊತೆಗೆ ಹೆಣ್ಣು ಮಕ್ಕಳು ತಮ್ಮ ಕುಟುಂಬದ ತಂದೆ, ಅಣ್ಣ, ತಮ್ಮ ಮುಂತಾದವರನ್ನು ಸರಿ ದಾರಿಗೆ ತರಲು ಪ್ರಮುಖ ಪಾತ್ರವಹಿಸಬೇಕು. ನಶಾ ಮುಕ್ತ ಕರ್ನಾಟಕ, ನಶಾಮುಕ್ತ ಭಾರತ ಮತ್ತು ಡ್ರಗ್ ಫ್ರೀ ಕರ್ನಾಟಕ ನಿರ್ಮಾಣ ಮಾಡಲು ನಾವೆಲ್ಲರೂ ಒಟ್ಟಾಗಿ ಶಪಥ ಮಾಡೋಣವೆಂದು ಹೇಳಿ ದ್ವಿ ಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ನ್ನು ಧರಿಸಬೇಕೆಂದು ತಿಳಿಸಿದರು.

ಡಿವೈಎಸ್ಪಿ ಡಾ. ವೀರಯ್ಯ ಹಿರೇಮಠ ಮಾತನಾಡಿ, ಈ ನಿಮ್ಮ ಎರಡು ವರ್ಷದ ಪಿಯುಸಿ ಜೀವನ ಅತಂತ್ಯ ಪ್ರಮುಖವಾದದ್ದು. ನೀವು ಪಡುವ ಶ್ರಮ ಮತ್ತು ವಿದ್ಯೆಯ ಮೇಲಿನ ಆಸಕ್ತಿ ನಿಮ್ಮ ಮುಂದಿನ ಜೀವನವನ್ನು ನಿರ್ಧರಿಸುತ್ತದೆ. ಆದ್ದರಿಂದ ನೀವುಗಳ ಎಚ್ಚರವಹಿಸಿ ಸ್ನೇಹಿತರ ಬಳಗ, ಮೋಬೈಲ್ ಮತ್ತು ಬೈಕ್, ಮಾದಕ ವಸ್ತುಗಳ ಸೇವನೆ ಮುಂತಾದವುಗಳು ನಿಮ್ಮನ್ನು ಅಡ್ಡದಾರಿಗೆ ಒಯ್ದು ನೀವು ಮಾನಸಿಕ ಒತ್ತಡದಲ್ಲಿ ಬಿದ್ದು ವಿದ್ಯಾಭ್ಯಾಸ ಕುಂಠಿತವಾಗುತ್ತದೆ.

ಯುವಕರು ಉತ್ತಮ ಸಮಾಜ ನಿರ್ಮಿಸಲು ಬೆಳಗಾವಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಆರ್. ಬಸರಗಿ ಸಲಹೆ

ಆದ್ದರಿಂದ ಕೆಟ್ಟ ಹವ್ಯಾಸ ಹಾಗೂ ಆಕರ್ಷಣೆಗಳ ಕಡೆಗೆ ಗಮನ ಹರಿಸದೇ ಒಳ್ಳೆಯ ರೀತಿಯಿಂದ ಓದಿ ನಿಮ್ಮ ಗುರಿಯನ್ನು ಸಾಧಿಸಿ ಮತ್ತು ಕೆಟ್ಟ ಹವ್ಯಾಸಗಳನ್ನು ಮಾಡುವದು ಕಂಡು ಬಂದರೆ, ಯಾರಾದರೂ ಹೆಣ್ಣು ಮಕ್ಕಳಿಗೆ ಚುಡಾಯಿಸುತ್ತಿದ್ದರೆ ತಕ್ಷಣವೇ ಪೊಲೀಸರ ಗಮನಕ್ಕೆ ತನ್ನಿ ಎಂದು ಹೇಳಿದರು.

ಸಿಪಿಐಶಿವಾನಂದಗುಡಗನಟ್ಟಿಕ್ಷೇತ್ರಶಿಕ್ಷಣಾಧಿಕಾರಿ ಸಿ.ವೈ. ತುಬಾಕಿ, ಪ್ರೌಢ ಶಾಲೆಯ ಮುಖ್ಯಾಧ್ಯಾಪಕ ಮಹೇಶ ಚನ್ನಂಗಿ ಮಾತನಾಡಿದರು. ಪಿಎಸ್ಐಯ್ ಗಂಗಾಧರ ಹಂಪಣ್ಣವರ, ತಾಪಂ ಎಡಿ ವಿಜಯ ಪಾಟೀಲ ಉಪಸ್ಥಿತರಿದ್ದರು.

ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಎ.ಎನ್. ವಾರದ ನಿರೂಪಿಸಿದರು.

ಜು.11ರಂದು ರಾಷ್ಟ್ರೀಯ ಲೋಕ ಅದಾಲತ್

ಬೆಳಗಾವಿ: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ದೇಶನದಂತೆ ಬರುವ ಜು.11 ರಂದು ಜಿಲ್ಲೆಯಾದ್ಯಂತ 'ರಾಷ್ಟ್ರೀಯ ಲೋಕ ಅದಾಲತ್' ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಮತ್ತು ಕಕ್ಷಿದಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬೆಳಗಾವಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಮಂಜುನಾಥ್ ನಾಯಕ ಅವರು ತಿಳಿಸಿದರು.

ಬುಧವಾರ ಬೆಳಗಾವಿ ನ್ಯಾಯಾಲಯಗಳ ಸಂಕೀರ್ಣ ಆವರಣದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿಯಲ್ಲಿ, ನಡೆದ ಪತ್ರಿಕಾಗೋಷ್ಠಿಯಲ್ಲಿ ಲೋಕ ಅದಾಲತ್ ಕುರಿತು ಅವರು ಮಾಹಿತಿ ನೀಡಿದರು.

'ಸಮಾಧಾನ ಸಮಾರೋಹ'ದಡಿ ಪ್ರಕರಣಗಳ ಇತ್ಯರ್ಥ: ಜಿಲ್ಲೆಯಲ್ಲಿ ಸಮಾಧಾನ ಸಮಾರೋಹ ಕಾರ್ಯಕ್ರಮದ ಅಡಿಯಲ್ಲಿ ಬೆಳಗಾವಿ ವ್ಯಾಪ್ತಿಯ ಒಟ್ಟು 350 ಪ್ರಕರಣಗಳನ್ನು ಇತ್ಯರ್ಥಕ್ಕೆ ಗುರುತಿಸಲಾಗಿದ್ದು, ಕಕ್ಷಿದಾರರು ಪರಸ್ಪರ ರಾಜಿ ಮಾಡಿಕೊಳ್ಳಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

1.60 ಲಕ್ಷ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮ: ಜುಲೈ 12 ರ ಒಳಗೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ದೇಶದಲ್ಲಿ ಬಾಕಿ ಇರುವ ಸುಮಾರು 1 ಲಕ್ಷದ 60 ಸಾವಿರ ಪ್ರಕರಣಗಳನ್ನು ಆದಷ್ಟು ಶೀಘ್ರವಾಗಿ ಇತ್ಯರ್ಥಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಟ್ರಾಫಿಕ್ ಚಲನ್ ದಂಡದಲ್ಲಿ 50% ರಿಯಾಯಿತಿ: ಪೊಲೀಸ್ ಇಲಾಖೆಯ ದತ್ತಾಂಶದ ಪ್ರಕಾರ ಜಿಲ್ಲೆಯಲ್ಲಿ ಸದ್ಯ 10 ಲಕ್ಷದ 54 ಸಾವಿರ ಸಂಚಾರ ನಿಯಮ ಉಲ್ಲಂಘನೆ (ಟ್ರಾಫಿಕ್ ಚಲನ್) ಪ್ರಕರಣಗಳು ಬಾಕಿ ಇವೆ. ಲೋಕ ಅದಾಲತ್ನಲ್ಲಿ ಈ ಚಲನ್ಗಳ ದಂಡದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿಗೆ ಅವಕಾಶವಿದ್ದು, ಸಾರ್ವಜನಿಕರು ಇದರ ಲಾಭ ಪಡೆಯಬಹುದು ಎಂದರು.

ಬೆಳಗಾವಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಮಂಜುನಾಥ್ ನಾಯಕ ಹೇಳಿಕೆ

ಚೆಕ್ ಬೌನ್ಸ್ ಪ್ರಕರಣಗಳ ಇತ್ಯರ್ಥ: ಜಿಲ್ಲೆಯಲ್ಲಿ ಸದ್ಯ 27 ಸಾವಿರ ಚೆಕ್ ಬೌನ್ಸ್ ಪ್ರಕರಣಗಳು ಬಾಕಿ ಇದ್ದು, ಇವುಗಳ ಶೀಘ್ರ ಇತ್ಯರ್ಥಕ್ಕಾಗಿ ಜುಲೈ 18 ರಂದು ವಿಶೇಷವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಕ್ಷಿದಾರರಿಗೆ ಸುವರ್ಣ ಅವಕಾಶ ನೀಡಲಾಗುವುದು.

ಕೋರ್ಟ್ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ಸುದೀರ್ಘ ಕಾಲದ ವಿವಾದಗಳನ್ನು ಪರಸ್ಪರ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಲೋಕ ಅದಾಲತ್ ಅತ್ಯುತ್ತಮ ವೇದಿಕೆಯಾಗಿದ್ದು, ಸಾರ್ವಜನಿಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ಜಿಲ್ಲಾ ನ್ಯಾಯಾಧೀಶರಾದ ಮಂಜುನಾಥ್ ನಾಯಕ ಅವರು ತಿಳಿಸಿದರು.

ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾದಿಕಾರದ ಸದಸ್ಯ ಕಾರ್ಯದರ್ಶಿ ಕೆ. ಎನ್. ಶಿವಕುಮಾರ್ ಹಾಜರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ರಾಯಬಾಗ: ರಾಯಬಾಗ ವಿಧಾನಸಭಾ ಕ್ಷೇತ್ರದಲ್ಲಿ 2024-25ನೇ ಸಾಲಿನಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿಗೆ ಕಾಮಗಾರಿಗಳಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ ಅವರು ಭೂಮಿಪೂಜೆ ನೆರವೇರಿಸಿದರು.

ರಾಯಬಾಗ ತಾಲೂಕಿನ ಹುಬ್ಬರವಾಡಿ ಗ್ರಾಮದಲ್ಲಿ 5 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಸುದಾರಣೆ, 5 ಲಕ್ಷ ರೂ. ವೆಚ್ಚದಲ್ಲಿ ರಾಯಬಾಗ ಪಟ್ಟಣದ ಕೆಇಬಿ ರಸ್ತೆಯಿಂದ ಶೇಖ ತೋಟದವರೆಗೆ ಕುಡುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ, 5 ಲಕ್ಷ ರೂ. ವೆಚ್ಚದಲ್ಲಿ ಕಂಚಕರವಾಡಿ ಗ್ರಾಮದ ಹನುಮಾನ ದೇವಸ್ಥಾನದ ಸಮುದಾಯ ಭವನ

ಕಿರುಸುದ್ದಿ

ಜೂ.29ರಂದು ವಿಶೇಷ ಚಿಂತನಗೋಷ್ಠಿ

ಗಲಗಲಿ: ಗ್ರಾಮದ ಗಾಲವ ಮಹರ್ಷಿ ಚಿಂತನ ವೇದಿಕೆಯ ಸತ್ಸಂಗ ಸಮಿತಿಯ ಬಳಗದವರಿಂದ ಜೂ.29ರಂದು ಸೋಮವಾರ ವಿಶೇಷ ಚಿಂತನಾಗೋಷ್ಠಿ ಏರ್ಪಡಿಸಲು ನಿರ್ಧರಿಸಲಾಗಿದೆ. ಈ ಕುರಿತ ಸೋಮವಾರ ಸಂಜೆ ನಡೆದ 208ನೇ ಚಿಂತನೆಗೋಷ್ಠಿಯಲ್ಲಿ ಈ ಬಗ್ಗೆ ನಿರ್ಧಾರ ಮಾಡಲಾಯಿತು. ಅಂದು ಸತ್ಸಂಗ ಕಾರ್ಯಕ್ರಮವು ನಾಲ್ಕನೇ ವರ್ಷದಿಂದ 5ನೇ ವರ್ಷಕ್ಕೆ ಪಾದಾರ್ಪಣೆ ಮಾಡಲಿದ್ದು, ಅಂದು ನಡೆಯುವ ವಿಶೇಷ ಚಿಂತನಾಗೋಷ್ಠಿಯ ಕಾರ್ಯಕ್ರಮದಲ್ಲಿ ಸ್ವಾಮೀಜಿಗಳನ್ನು ಹಾಗೂ ಗಣ್ಯರನ್ನು ಕರೆಸಿ ವಿಶಿಷ್ಟ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು.
ನಿಂಗಣ್ಣ ಗೋಳಿಪಲ್ಲಿ, ಎಚ್.ವೈ.ಜರಾಳಿ, ರಾಮಾಚಾರ್ಯ ಕಟ್ಟಿ ಇದ್ದರು.

ಜು.18ರಂದು ಪ್ರತಿಭಟನೆ

ಬೀಳಗಿ: ಕರ್ನಾಟಕದಲ್ಲಿ ದಶಕಗಳಿಂದ ನೆಸೆಗುದಿಗೆ ಬಿದ್ದಿರುವ ತುಳಿತಕ್ಕೊಳಗಾದ ಸಮುದಾಯಗಳ ಹಕ್ಕುಗಳನ್ನು ಜಾರಿಗೊಳಿಸಲು, ಸಾಮಾಜಿಕ ನ್ಯಾಯದ ಆಡಿಯಲ್ಲಿ ಪ್ರತಿಯೊಬ್ಬರಿಗೂ ಸಮಪಾಲು-ಸಮಬಾಳು ಸಿಗುವಂತೆ ಮಾಡಲು ನಾವೆಲ್ಲರೂ ಬೀದಿಗಿಳಿದು ಹೋರಾಟ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಹೋರಾಟಗಾರ ಯಲ್ಲಪ್ಪ ಹೆಗಡೆ ತಿಳಿಸಿದರು. ಪಟ್ಟಣದ ಜಿಎಲ್‌ಬಿಸಿ ಐಬಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾಯಯುತವಾದ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೀಳಗಿ ವಿಧಾನಸಭಾ ಮತಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಜು.18ರಂದು ಅಂಬೇಡ್ಕರ ವೃತ್ತದಿಂದ ತಹಸೀಲ್ದಾರ ಕಾರ್ಯಾಲಯದವರೆಗೆ ಕಾಲ್ನಡಿಗೆ ಮೂಲಕ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಹೋರಾಟವು ಪಕ್ಷಾತೀತ, ಜಾತ್ಯತೀತ ಅಲ್ಲದೆ, ರೈತ ಸಂಘಟನೆ ಹಾಗೂ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಮಾಜಿ ಸಚಿವ ಮುರುಗೇಶ ನಿರಾಣಿ ಈ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದರು. ರೈತ ಸಂಘದ ಮುಖಂಡ ಬಿ.ಎಸ್.ಗೋನಾಳ ಮಾತನಾಡಿ, ರೈತರ ಸಮಸ್ಯೆ ಆಗಲಿ ಜನಸಾಮಾನ್ಯರ ಸಮಸ್ಯೆಯಾಗಲಿ ಪರಿಹಾರ ನೀಡುವಲ್ಲಿ ಯಾವುದೇ ರಾಜಕೀಯ ಪಕ್ಷಗಳ ಹಿತಾಸಕ್ತಿಯು ಇಲ್ಲದಂತಾಗಿದೆ. ವಿವಿಧ ಯೋಜನೆಗಳಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಏಕರೂಪದ ಬೆಲೆ ನೀಡಬೇಕು. ಜನರು ಹಾಗೂ ರೈತರು ಜಾಗೃತಾಗಬೇಕಾಗಿದೆ ಎಂದರು. ರೈತ ಸಂಘದ ತಾಲೂಕಾಧ್ಯಕ್ಷ ಸಿದ್ದಪ್ಪ ಬಳಗಾನೂರ, ಸದಾಶಿವ ಆಗ್ನಿ, ಹುಸೇನಸಾಬ ನದಾಫ್, ಸಿದ್ದಪ್ಪ ಚಂಡಕಿ ಮತ್ತಿತರಿದ್ದರು.

ಪೊಲೀಸ್ ರೂಟ್ ಮಾರ್ಚ್

ಕಲಾದಗಿ: ಜೂ.26ರಂದು ನಡೆಯುವ ಮೋಹರಂ ಹಬ್ಬದ ನಿಮಿತ್ತ ಗ್ರಾಮದ ಪ್ರಮುಖ ಬೀದಿಯಲ್ಲಿ ಪಿಎಸ್‌ಐ ಪ್ರವೀಣ ಬೀಳಗಿ ಅವರ ನೇತೃತ್ವದಲ್ಲಿ ಪೊಲೀಸ್ ರೂಟ್ ಮಾರ್ಚ್ ನಡೆಯಿತು. ಪೋಲಿಸ್ ಠಾಣೆಯಿಂದ ಆರಂಭಗೊಂಡ ಪೊಲೀಸ್ ರೂಟ್ ಮಾರ್ಚ್ ಗುರುಲಿಂಗೇಶ್ವರ ಪ್ರೌಢ ಶಾಲೆ, ನೂರ ಅಲಿಶಾ ಬಾಬಾ ದರ್ಗಾ, ಜಾಮೀಯಾ ಮಸೀದಿ, ಮಾರಾತಾ ಓಣಿ, ಕಾಯಿಪಲ್ಯೆ ಮಾರುಕಟ್ಟೆ, ಗ್ರಾಪಂ ಕಾರ್ಯಾಲಯ, ಕೊಬ್ರಿ ಕ್ರಾಸ್, ಅಂಬೇಡ್ಕರ್ ವೃತ್ತ, ರಂಗಮಂದಿರ, ಬಸ್ ನಿಲ್ದಾಣದ ಮಾರ್ಗವಾಗಿ ಸಾಗಿ ಪೊಲೀಸ್ ಠಾಣೆಗೆ ಬಂದು ಸಮಾಪ್ತಿಯಾಯಿತು. 40ಕ್ಕೂ ಅಧಿಕ ಪೊಲೀಸರು ಹೆಜ್ಜೆ ಹಾಕಿ ಮೋಹರಂ ಹಬ್ಬಕ್ಕೆ ಸೂಕ್ತ ಬಂದೂಬಸ್ತ್ ನೀಡಲಾಗುವ ಮುನ್ಸೂಚನೆಯನ್ನು ಸಾರ್ವಜನಿಕರಿಗೆ ನೀಡಲಾಯಿತು.

ಸಂಭ್ರಮದ ಮಹೇಶ ನವಮಿ ಉತ್ಸವ

ಗುಳೇದಗುಡ್ಡ: ಪಟ್ಟಣದ ಮಾರವಾಡಿ ಸಮಾಜದ ವತಿಯಿಂದ ಮಹೇಶ ನವಮಿ ಉತ್ಸವ ಹಾಗೂ ಮಹೇಶ ದೇವರ ಭಾವಚಿತ್ರದ ಭವ್ಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೆರವೇಸಲಾಯಿತು. ಪಟ್ಟಣದ ಕಾಬ್ರಾ ಓಣಿಯಿಂದ ಆರಂಭಗೊಂಡ ಮಹೇಶನವಮಿ ದೇವರ ಭವ್ಯ ಮೆರವಣಿಗೆ ಪುರಸಭೆ, ಅರಳಿಕಟ್ಟೆ, ಚೌ ಬಜಾರ್ ಮೂಲಕ ಹಾಯ್ದು ರಾಮಚಂದ್ರ ಬಾಲಾಜಿ ಮಂದಿರಕ್ಕೆ ಬಂದು ತಲುಪಿತು. ಮಹೇಶ್ವರಿ ಸಭಾ ಜಿಲ್ಲಾ ಕಾರ್ಯದರ್ಶಿ ಸಂತೋಷ ಮಂತ್ರಿ, ಅಧ್ಯಕ್ಷ ಶ್ರೀನಿವಾಸ ಜಾಜು, ಶ್ರೀನಿವಾಸ ಇನಾನಿ, ಕಮಲಕಿಶೋರ ಮಾಲಪಾನಿ, ಸುರೇಶ ಇನಾನಿ, ಸಂಪತಕುಮಾರ ರಾಠಿ, ಗೋವಿಂದಲಾಲ ಜಾಜು, ನಂದಲಾಲ ಝುಂವರ, ಸಂತೋಷಕುಮಾರ ಮಂತ್ರಿ, ರಾಜೇಂದ್ರ ತೋತಲಾ, ಗೋವಿಂದ ಭಟ್ಟಡ, ಲತಾಬಾಯಿ ತಾಪಡಿಯಾ, ನೀತಾ ಇನಾನಿ, ರಾಮೇಶ್ವರ ರಾಠಿ, ನಂದಕಿಶೋರ ಜಾಜೂ, ಲಕ್ಷ್ಮೀನಾರಾಯಣ ಜಂವರ್, ರಾಜೇಂದ್ರ ತೋತಲಾ, ಸುರೇಶ ಇನಾನಿ, ಶ್ರೀನಿವಾಸ ಇನಾನಿ ಇತರರು ಇದ್ದರು.

ಗುಳೇದಗುಡ್ಡ: ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಸರ್ವಕಲಾವಿದರ ಒಕ್ಕೂಟದಿಂದ ಸೀಮಿಕೇರಿಯ ಲಡ್ಡು ಮುತ್ಯಾ ಆಶ್ರಮದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗುಳೇದಗುಡ್ಡದ ಜ್ಞಾನ ಸಿಂಧು ಕಲಾ ತಂಡದ ವತಿಯಿಂದ ಸಂಗೀತ ಕಾರ್ಯಕ್ರಮ ನಡೆಯಿತು. ತಂಡದ ಅಧ್ಯಕ್ಷ ಶಂಕರ ಮುಂದಿನಮನಿ, ರೇಖಾ ಮಡಿವಾಳ, ಗಗನ ಗಡದ, ಕಾರ್ತಿಕ ಅಲದಿ, ಸನ್ನಿಧಿ ಸುಳ್ಳದ, ಸೌಭಾಗ್ಯಾ ಧೂಪದ, ಜಯಶ್ರೀ ಬೆಳಗಲ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ನಿವೃತ್ತಿ ಜೀವನ ಸಮಾಜಮುಖಿಯಾಗಲಿ

ಮುಧೋಳ: ಸರ್ಕಾರಿ ನೌಕರಿ ನಿವೃತ್ತಿ ಸಹಜ. ಆದರೆ ಮನಸ್ಸಿಗೆ ವಯಸ್ಸು ಆಗಲ್ಲ ನಿವೃತ್ತ ಜೀವನ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿ ಈರ್ವರು ಶಿಕ್ಷಕ ದಂಪತಿಯರು ಯಶಸ್ವಿ ಕಾಣಲಿ ಎಂದು ಹಿರಿಯ ಸಾಹಿತಿ ಡಾ.ಶಿವಾನಂದ ಕುಬಸದ ಹೇಳಿದರು.ನಗರದ ಕಸಾಪ ಭವನದಲ್ಲಿ ಶಿಕ್ಷಕಿ, ಮುಖ್ಯೋಪಾಧ್ಯಯರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡಿರುವ ಶಿಕ್ಷಕಿ ಅನಸೂಯಾ ಪಂಚಾಕ್ಷರಿ ಹಿರೇಮಠ ಅವರನ್ನು ವಿದ್ಯಾರ್ಥಿವೃಂದ, ನೌಕರರ ಬಳಗ, ಇತರರಿಂದ ಜರುಗಿದ ಗೌರವ ಸತ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.ಗೌರವ ಸನ್ಮಾನ ಸ್ವೀಕರಿಸಿದ ಶಿಕ್ಷಕಿ ಅನಸೂಯಾ ಮಾತನಾಡಿ, ಪಾಲಕರಿಗೆ ಹೊರೆಯಾಗದೇ ಅವರ ಕಷ್ಟ ಜೀವನ ಅರಿತು ಪ್ರಾಥಮಿಕ ಹಾಗು ಮೂರು ವರ್ಷದ ಪದವಿ ಶಿಕ್ಷಣವನ್ನು ಕಷ್ಟಪಟ್ಟು ಓದಿದರೆ ಮುಂದಿನ ನೂರು ವರ್ಷದ ಜೀವನ ಸುಗಮವಾಗಿ ಸಾಗಿಸಬಹುದು ಎಂದರು.ಅಧ್ಯಕ್ಷತೆ ವಹಿಸಿದ್ದ ಎನ್.ಎಂ.ಪುರಾಣಿಕಮಠ, ಸಾನ್ನಿಧ್ಯ ವಹಿಸಿದ್ದ ವಿರಕ್ತಮಠದ ಬಸವಲಿಂಗ ಶ್ರೀಗಳು, ಲೋಕಾಪೂರ ಪಟ್ಟಣದ ಚಂದ್ರಶೇಖರ ಶ್ರೀಗಳು ಮಾತನಾಡಿದರು. ಕಸಾಪ ಅಧ್ಯಕ್ಷ ಆನಂದ ಪೂಜಾರಿ, ಕುಮಾರ ಮಠದ ಬೆಂಗಳೂರು, ನ್ಯಾಯವಾದಿ ಬಿ.ಸಿ.ಹಿರೇಮಠ, ಬಿಆರ್‌ಸಿಒ. ಎ.ಆರ್. ಭಬ್ಬಿ, ನೌಕರರ ಸಂಘದ ಸಂ.ಕಾ ಆರ್.ಎಸ್.ನಿಡೋಣಿ, ಪಿ.ಬಿ.ಹಿರೇಮಠ, ಪತ್ರಕರ್ತ ಎ.ಜೆ.ಕುಲಕರ್ಣಿ, ಬಿ.ಎಚ್.ಬೀಳಗಿ, ಬಿ.ಜಿ.ಮಠ ನಾಗರಬೆಟ್ಟ, ಸುಜಾತಾ ಬಳೂಲಮಟ್ಟಿ ಧಾರವಾಡ ಇತರರಿದ್ದರು. ಅಕ್ಕು ನುಗ್ಲಿ ಪ್ರಾರ್ಥಿಸಿದರು. ನೀಲಮ್ಮ ಮುತ್ತಗಿ ನಿರೂಪಿಸಿದರು. ಕಜಾಪ ಅಧ್ಯಕ್ಷ ರಮೇಶ ಆರಕೇರಿ ಸ್ವಾಗತಿಸಿದರು. ಸಂಗಮೇಶ ಹವಾಲ್ದಾರ ವಂದಿಸಿದರು.

ಮುಧೋಳ: ನಗರದ ಕಸಾಪ ಭವನದಲ್ಲಿ ಶಿಕ್ಷಕಿ, ಮುಖ್ಯೋಪಾಧ್ಯಯರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡಿರುವ ಶಿಕ್ಷಕಿ ಅನಸೂಯಾ ಪಂಚಾಕ್ಷರಿ ಹಿರೇಮಠ ಅವರನ್ನು ವಿದ್ಯಾರ್ಥಿವೃಂದ, ನೌಕರರ ಬಳಗ, ಇತರರಿಂದ ಜರುಗಿದ ಗೌರವ ಸತ್ಕಾರ ಸಮಾರಂಭವನ್ನು ಯ ಸಾಹಿತಿ ಡಾ.ಶಿವಾನಂದ ಕುಬಸದ ಉದ್ಘಾಟಿಸಿದರು.

ಅಪ್ರಾಪ್ತರ ಕೈಗೆ ದ್ವಿಚಕ್ರ ವಾಹನಗಳು | ಕೈ ಕಟ್ಟಿ ಕುಳಿತ ಪೊಲೀಸ್ ಇಲಾಖೆ

ಪೋಷಕರಿಗಿರಲಿ ಕಾನೂನಿನ ಅರಿವು

ನಿತೀಶ ಪಾಟೀಲ

ಕಲಾದಗಿ: ಇತ್ತೀಚೆಗೆ ಗ್ರಾಮದಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಪೋಷಕರು ತಮ್ಮ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದು ಇಂತಹ ಮಕ್ಕಳ ಪ್ರಾಣದ ಜೊತೆ ಚೆಲ್ಲಾಟವಾಡುವ ಪೋಷಕರಿಗೆ ಕಾನೂನಿನ ಮೂಲಕ ಪೊಲೀಸ್ ಇಲಾಖೆಯಿಂದ ತಕ್ಕ ಪಾಠ ಕಲಿಸಬೇಕು ಎಂದು ಗ್ರಾಮದ ಹಿರಿಯ ನಾಗರಿಕರ ಆಗ್ರಹವಾಗಿದೆ.

ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಾಲನೆ ಮಾಡುವುದು ಮೋಟಾರು ಕಾಯಿದೆ ಅನ್ವಯ ಶಿಕ್ಷಾರ್ಹ ಅಪರಾಧವಾಗಿದ್ದು ಇಂತಹ ಮಕ್ಕಳಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ನೀಡಿದ ಪೋಷಕರು ಹಾಗೂ ವಾಹನ ಮಾಲೀಕರಿಗೆ ನ್ಯಾಯಾಲಯವು ದಂಡ ಹಾಗೂ ಸೆರೆವಾಸದ ಶಿಕ್ಷೆ ವಿಧಿಸಿದಂತಹ ಸಾಕಷ್ಟು ಪುರಾವೆಗಳಿದ್ದರೂ ಕಾನೂನಿನ ಅರಿವಿರುವಂತಹ ಪೋಷಕರೇ ಯಾವುದಕ್ಕೂ ಕ್ಯಾರೆ ಎನ್ನದೇ ತಮ್ಮ ಅಪ್ರಾಪ್ತ ಮಕ್ಕಳಿಗೆ ವಾಹನ ಚಾಲನೆ ಮಾಡಲು ನೀಡುತ್ತಿರುವುದು ವಿಪರ್ಯಾಸ.

ಗ್ರಾಮದಲ್ಲಿ ಅನೇಕ ಅಪ್ರಾಪ್ತ ಮಕ್ಕಳು ದ್ವಿಚಕ್ರ ವಾಹನ ಚಾಲನೆ ಮಾಡುತ್ತಿರುವುದು ಪೊಲೀಸ್ ಇಲಾಖೆಯ ಗಮನದಲ್ಲಿದ್ದರೂ ಅದೇಕೂ ಅಂತಹ ಮಕ್ಕಳ ಪೋಷಕರಿಗೆ ಕಾನೂನಿನ ಆಸ್ತ್ರದ ಮೂಲಕ ಪಾಲಕರಿಗೆ ತಕ್ಕ ಪಾಠ ಕಲಿಸಬೇಕಾದ ಪೊಲೀಸ್ ಇಲಾಖೆಕೈಕಟ್ಟಿಕುಳಿತಿದೆ.ಗ್ರಾಮಒಂದರಲ್ಲೇ 3 ಪ್ರೌಢ ಶಾಲೆಗಳು, 2 ಪದವಿ ಪೂರ್ವ ವಿದ್ಯಾಲಯಗಳು, ಪ್ರಥಮ ದರ್ಜೆ ಕಾಲೇಜುಗಳಿದ್ದರೂ ಅವರಿಗೆ ಮೋಟಾರು ಕಾಯಿದೆ ಬಗ್ಗೆ ತಿಳುವಳಿಕೆ ನೀಡಿ ಸರಿ ತಪ್ಪುಗಳ ಬಗ್ಗೆ ಪ್ರಾಥಮಿಕ ಹಂತದಲ್ಲೇ ಕಾನೂನು ತಿಳುವಳಿಕೆ ನೀಡಬೇಕು. ಆವಾಗ ಗ್ರಾಮದಲ್ಲಿ ಅಲ್ಪ ಪ್ರಮಾಣದ ಅಪಘಾತಗಳು ಕಡಿಮೆಯಾಗಬಹುದು ಎಂದು ಹಿರಿಯ ನಾಗರೀಕರ ಆಶಯ.

ಗ್ರಾಮದ ಅನೇಕ ರಸ್ತೆಗಳು ಕಿರಿದಾಗಿದ್ದು, ಅಂತಹ ಪ್ರದೇಶಗಳಲ್ಲಿಯೇ ಅತ್ಯಂತ ವೇಗವಾಗಿ ಯಾವುದರ ಪರಿವೇ ಇಲ್ಲದಂತೆ ವಾಹನಗಳನ್ನು ವೇಗವಾಗಿ ಚಲಾಯಿಸುತ್ತಿದ್ದಾರೆ. ಗ್ರಾಮದಲ್ಲಿ ಹದಿಹರೆಯದ ಯುವಕರು ದ್ವಿಚಕ್ರ ವಾಹನಗಳ ಸೈಲೆನ್ಸರ್‌ಗಳಿಂದ ಕರ್ಕಶ ಶಬ್ದ ಮಾಡುತ್ತಾ ಗಲ್ಲಿಗಳಲ್ಲಿ ತಿರುಗುತ್ತಿರುವುದರಿಂದ ಹಿರಿಯ ಕಿರಿಯರ ಸಮೇತ ಹಸೂಗೂಸುಗಳಿಗೆ ಕಿರಿಕಿರಿಯಾಗುತ್ತಿದ್ದು ಶೀಘ್ರವೇ ಪೋಲಿಸಇಲಾಖೆಇದಕ್ಕೊಂದು ಅಂತ್ಯ ಕಾಣಿಸಬೇಕು ಎಂದು ಸಾರ್ವಜನಿಕರ ಆಗ್ರಹವಾಗಿದೆ.

ವಿಶೇಷ

ಅಪ್ರಾಪ್ತ ಮಕ್ಕಳು ದ್ವಿಚಕ್ರ ವಾಹನ ಚಾಲನೆ ಮಾಡುವುದು ಶಿಕ್ಷಾರ್ಹ ಅಪರಾದ. ಕಲಾದಗಿ ಗ್ರಾಮದಲ್ಲಿ ಈ ಬಗ್ಗೆ ಇಲಾಖೆಯಿಂದ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತೇವೆ. ಮತ್ತು ವಾಹನ ಚಾಲನೆ ಮಾಡುವ ಅಪ್ರಾಪ್ತ ಮಕ್ಕಳು ಹಾಗೂ ಪಾಲಕರ ವಿರುದ್ಧ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಲಾಗುವುದು.
■ ರಾಮಣ್ಣ ಬಿರಾದಾರ, ಸಿಪಿಐ, ಬಾಗಲಕೋಟೆ ಗ್ರಾಮೀಣ

ಸಂಜೆ ಹೊತ್ತು ವಿಶ್ರಾಂತಿಗಾಗಿ ಮನೆ ಮುಂದೆ ಕೂತಾಗ ದ್ವಿಚಕ್ರ ವಾಹನ ಸವಾರರು ವೇಗವಾಗಿ ಸಂಚರಿಸುತ್ತಿದ್ದು ಮನೆಯ ಮಕ್ಕಳು ವೃದ್ಧರೂ ಮನೆ ಬಿಟ್ಟು ಹೊರಗೆ ಬಾರದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಪಘಾತವಾಗಿ ಜೀವಹಾನಿಯಾದರೆ ಯಾರು ಹೊಣೆ? ಕೂಡಲೇ ಪೋಲಿಸ ಇಲಾಖೆಯವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.
■ ದೊಡ್ಡಪ್ಪ ಗುಂಜುಟಗಿ, ಹಿರಿಯ ನಾಗರಿಕರು

ದೌರ್ಜನ್ಯ ಪ್ರಕರಣ ಗಂಭೀರವಾಗಿ ಪರಿಗಣಿಸಿ

ಬಾಗಲಕೋಟೆ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಪ್ರಕರಣಗಳ ತನಿಖೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ತಪ್ಪಸ್ಥರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಜಿಲ್ಲಾಮಟ್ಟದ ಜಾಗೃತಿ ನಿಯಂತ್ರಣ ಹಾಗೂ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೌರ್ಜನ್ಯ ಪ್ರಕರಣದಡಿ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 196 ಪ್ರಕರಣಗಳ ಪೈಕಿ 46 ಬಿಡುಗಡೆಯಾಗಿದ್ದು, ಅದರಲ್ಲಿ 19 ಪ್ರಕರಣಗಳಿಗೆ ಶಿಕ್ಷೆಯಾಗಿತ್ತವೆ. 83 ಪ್ರಕರಣ ವಿಲೇವಾರಿಯಾಗಿದ್ದು, 113 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿವೆ. ಪೊಲೀಸ್ ಠಾಣೆಯಲ್ಲಿ 2025-26ನೇ ಸಾಲಿನಲ್ಲಿ 73, 2026-27ನೇ ಸಾಲಿನಲ್ಲಿ25 ಪ್ರಕರಣಗಳು ದಾಖಲಾಗಿರುತ್ತವೆ ಎಂದರು.

ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟಪಂಗಡದ ಕಾಲೋನಿಗಳಲ್ಲಿ ಸ್ಮಶಾನದ ಬಗ್ಗೆ ಸಭೆಗೆ ಸಮಿತಿ ಸದಸ್ಯರು ತಿಳಿಸಿದಾಗ ಈ ವಿಷಯದ ಬಗ್ಗೆ ಮಾತನಾಡಿದ ಬಾಗಲಕೋಟೆ ಶಾಸಕ ಉಮೇಶ ಮೇಟಿ ಅವರು ಈ ಬಗ್ಗೆ ಪರಿಶೀಲಿಸುವುದಾಗಿ ಹೇಳಿತ್ತಾರೆ ಹೊರತು ಯಾವುದೇ ಕೆಲಸಗಳು ಆಗುತ್ತಿಲ್ಲ. ಇದರಿಂದ ತುಂಬಾ ಸಮಸ್ಯೆಯಾಗಿತ್ತಿದೆ ಎಲ್ಲಿ ಸ್ಮಶಾನಗಳು ಇರುವದಿಲ್ಲ, ಅವುಗಳ ಪಟ್ಟಿಯನ್ನು ಪಡೆದುಕೊಂಡ ಸಮಾಜ ಕಲ್ಯಾಣ ಇಲಾಖೆ, ತಹಶೀಲ್ದಾರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಸ್ಮಶಾನ ನಿರ್ಮಾಣಕ್ಕೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಕಳೆದ 2025-26ನೇ ಸಾಲಿನಲ್ಲಿ 73 ದೌರ್ಜನ್ಯ ಪ್ರಕರಣಗಳಿಗೆ ಒಟ್ಟು 1.28 ಕೋಟಿ ರೂ. ಗಳ ಪರಿಹಾರ ನೀಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಸಿದ್ದಾರ್ಥ ಗೋಯಲ್, ಜಿಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಜಿ.ಮನ್ನಿಕೇರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ ಸೇರಿದಂತೆ ಉಸ್ತುವಾರಿ ಸಮಿತಿಯ ಸದಸ್ಯರಾದ ಯಮನಪ್ಪ ಪೂಜಾರ, ಶಿವಾನಂದ ಮಾದರ, ಫಕೀರಪ್ಪ ಮಾದರ, ಬಸವರಾಜ ಪಾತ್ರೋಟ, ಗೋವಿಂದಪ್ಪ ಕೌಲಗಿ, ದ್ಯಾಮಣ್ಣ ಗಾಳಿ ಶ್ರೀಕಾಂತಗೌಡ ಗೌಡರ, ಅಕ್ಬರಸಾಬ ಉಪಸ್ಥಿತರಿದ್ದರು.

ಮಾದಕ ದ್ರವ್ಯ ಸಮಾಜಕ್ಕೆ ಮಾರಕ

ಬಾಗಲಕೋಟೆ: ಮಾದಕ ದ್ರವ್ಯ ಮಾರಾಟ ಮತ್ತು ಸೇವನೆ ಅಪರಾಧ. ಮಾದಕ ದ್ರವ್ಯ ಸೇವನೆ ವ್ಯಕ್ತಿಗತ ವ್ಯಸನವಾದರೂ ಇದು ಸಮಾಜಕ್ಕೆ ಮಾರಕ ಎಂದು ಬೆಳಗಾವಿ ಉತ್ತರ ವಲಯ ಪೊಲೀಸ್ ಮಹಾನಿರೀಕ್ಷಕ ಸಂದೀಪ ಪಾಟೀಲ ಹೇಳಿದರು.

ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಶತಾಬ್ದಿ ಸಭಾಭವನದಲ್ಲಿ ಬುಧವಾರ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಮಾದಕದ್ರವ್ಯ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂತ್ರಜ್ಞಾನದ ಬೆಳವಣಿಗೆಯಿಂದ ಇಂದಿನ ದಿನಗಳಲ್ಲಿ ಡ್ರಗ್ಸ್ ಸೇವನೆ ಪತ್ತೆ ಹಚ್ಚುವುದು ಸುಲಭವಾಗ

ಕಿರುಸುದ್ದಿ

ಚನ್ನಬಸವಣ್ಣ ಲಂಗೋಟಿಗೆ ಡಿಜಿ ಪ್ರಶಂಸಾ ಪದಕ

ಸಿಂದಗಿ: ತಾಲೂಕಿನ ಚಾಂದಕವಠೆ ಗ್ರಾಮದ ಐಪಿಎಸ್ ಅಧಿಕಾರಿ ಚೆನ್ನಬಸವಣ್ಣ ಲಂಗೋಟಿ ಅವರು 2026ನೇ ಸಾಲಿನ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಪ್ರಶಂಸಾ ಪದಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಮೈಸೂರಿನ ಪೊಲೀಸ್ ಅಕಾಡೆಮಿಯ ನಿರ್ದೇಶಕರಾಗಿರುವ ಇವರು ಬೆಳಗಾವಿ, ಬೆಂಗಳೂರು, ಬೀದರ್ ನಲ್ಲಿ ಸೇವೆ ಸಲ್ಲಿಸಿದ್ದಾರೆ. ಮಹಿಳಾ ಸಮುದಾಯದ ಸುರಕ್ಷತೆಗಾಗಿ ಇವರು ಬೀದರ ಜಿಲ್ಲೆಯಲ್ಲಿ ಸ್ಥಾಪಿಸಿದ ಅಕ್ಕ ಪಡೆ ಅತ್ಯಂತ ಜನಪ್ರಿಯಗೊಂಡು ರಾಜ್ಯವ್ಯಾಪ್ತಿ ಬಳಸಲಾಗುತ್ತಿದೆ. ಅಲ್ಲದೇ ದಕ್ಷಿಣ ಸುಡಾನ್‌ನಲ್ಲಿ ವಿಶ್ವ ಸಂಸ್ಥೆಯ ಪೊಲೀಸ್ ಸಲಹೆಗಾರರಾಗಿ ಹಾಗೂ ಕಾರ್ಯಾಚರಣೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ಅಂತರ್‌ರಾಷ್ಟ್ರೀಯ ಅನುಭವ ತಮ್ಮದಾಗಿಸಿಕೊಂಡಿದ್ದಾರೆ. ಕವಿ, ಸಾಹಿತಿ, ಬರಹಗಾರರಾಗಿ ಗುರುತಿಸಿಕೊಂಡಿರುವ ಚೆನ್ನಬಸಪ್ಪ ಲಂಗೋಟಿ ಇವರ ಸೇವಾ ದಕ್ಷತೆ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗೆ ಭಾಜನರಾಗಿದ್ದಕ್ಕೆ ಜಾನಪದ ಸಾಹಿತಿ ಇನ್ಸ್‌ಪೆಕ್ಟರ್ ಜ್ಯೋತಿರ್ಲಿಂಗ ಹೊನಕಟ್ಟಿ, ಆರಕ್ಷಕ ಬರಹಗಾರ ಮೌಲಾಲಿ ಆಲಗೂರ, ಶಿಕ್ಷಕ ಶರಣು ಲಂಗೋಟಿ ಹರ್ಷ ವ್ಯಕ್ತಪಡಿಸಿದೆ.

ಮಕ್ಕಳಿಗೆ ಶಿಸ್ತು ಮುಖ್ಯ

ಸಿಂದಗಿ: ಮಕ್ಕಳು ತಮ್ಮ ಗುರಿಯತ್ತ ಸಾಗಬೇಕಾದರೆ ಶಿಸ್ತು ಬಹಳ ಮುಖ್ಯ. ಶಿಸ್ತನ್ನು ಮೈಗೂಡಿಸಿಕೊಂಡು ಚನ್ನಾಗಿ ಓದಿ ವಿದ್ಯಾವಂತರಾಗಿ ದೊಡ್ಡ ದೊಡ್ಡ ಕೆಲಸಕ್ಕೆ ಸೇರಬೇಕು. ನೀವು ಬಡವರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಸೋಮನಗೌಡ ಎಸ್. ಕಲ್ಲೂರ ಹೇಳಿದರು. ಸಿಂದಗಿಯ ವಿದ್ಯಾನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜಯಪುರದ ವನಶ್ರೀ ಫೌಂಡೇಶನ್ ಹಾಗೂ ವನಶ್ರೀ ಸೌಹಾರ್ದ ಸಹಕಾರಿ ಬ್ಯಾಂಕ್ ಇವರ ಸಹಯೋಗದಲ್ಲಿ ಶಾಲಾ ಮಕ್ಕಳಿಗೆ ಉಚಿತ ಶಾಲಾಬ್ಯಾಗ್ ಹಾಗೂ ಸಾಮಗ್ರಿಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, ನಿಮ್ಮನ್ನೆಲ್ಲ ನೋಡಿದರೆ ನಮ್ಮ ಬಾಲ್ಯದ ನೆನಪಾಗುತ್ತದೆ. ಜೀವನದಲ್ಲಿ ಎಲ್ಲರೂ ಕಷ್ಟದಿಂದ ಓದಿ ಮುಂದೆ ಬರಬೇಕು. ನೀವು ದೇಶದ ಉತ್ತಮ ಪ್ರಜೆಯಾಗಿ ದೇಶಕ್ಕೆ ನಿಮ್ಮದೇ ಆದ ಕೊಡುಗೆ ನೀಡಬೇಕು. ಪ್ರಸಕ್ತ ಸಾಲಿನಲ್ಲಿ ಶಾಲಾ ಶಿಕ್ಷಕರ ಸಮ್ಮುಖದಲ್ಲಿ ಮಕ್ಕಳಿಗೆ ಬ್ಯಾಗ್ ವಿತರಣೆ ಮಾಡಿದ್ದು ಈ ಮೂಲಕ ಸಂಸ್ಥಾಪಕ ಅಧ್ಯಕ್ಷ ರಾಕೇಶ್ ಎಸ್. ಕಲ್ಲೂರ ಅವರ ನೇತೃತ್ವದಲ್ಲಿ ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದರು. ಸಂತೋಷ ಶ್ಯಾಪೇಟಿ, ಮಹೇಶ ನಾಯಕ, ಅಭಿಷೇಕ ಕಲಶೆಟ್ಟಿ ಸೇರಿದಂತೆ ಶಾಲೆಯ ಮುಖ್ಯ ಗುರುಗಳು, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ವಿಜಯಪುರ: ಸರ್ಕಾರಿ ನೌಕರರ ಸಹಕಾರಿ ಬ್ಯಾಂಕ್ ನಿಯಮಿತ, ವಿಜಯಪುರ ವತಿಯಿಂದ ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿಯ ಮಕ್ಕಳಿಗೆ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ದ್ವಿತೀಯ ಪರೀಕ್ಷೆಯಲ್ಲಿ 80% ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಅರ್ಹ ವಿದ್ಯಾರ್ಥಿಗಳಿಗೆ ''ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ಬ್ಯಾಂಕಿನ ಪ್ರಧಾನ ಕಚೇರಿ ಅಥವಾ ಯಾವುದೇ ಶಾಖೆಯಲ್ಲಿ ನಿಗದಿತ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಸಲ್ಲಿಸಬಹುದು. ಅರ್ಜಿಯನ್ನು ಜೂ.25ರಿಂದ ವಿತರಣೆ ಆರಂಭವಾಗಿದೆ. ಜು.13ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮೀಪದ ಸರ್ಕಾರಿ ನೌಕರರ ಸಹಕಾರಿ ಬ್ಯಾಂಕ್ ನಿಯಮಿತ, ವಿಜಯಪುರ ಶಾಖೆ ಅಥವಾ ಪ್ರಧಾನ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ನೌಕರರ ಸಹಕಾರಿ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಎಂ.ಕೆ.ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪ್ರಾಪ್ತನಿಂದ ವಾಹನ ಚಾಲನೆ: ಪಾಲಕರಿಗೆ ದಂಡ

ನಿಡಗುಂದಿ: ಅಪ್ರಾಪ್ತ ಬಾಲಕನಿಗೆ ಮೋಟಾರು ಸೈಕಲ್ ಚಲಾಯಿಸಲು ಕೊಟ್ಟ ತಂದೆಗೆ ನ್ಯಾಯಾಲಯಕ್ಕೆ ದಂಡ ತೆತ್ತಿದ ಘಟನೆ ನಡೆದಿದೆ. ಪಟ್ಟಣದ ಕಾಲೇಜ್ ರಸ್ತೆಯಲ್ಲಿ ಅಪ್ರಾಪ್ತ ಬಾಲಕನು ಮೋಟಾರು ಸೈಕಲ್ ಚಲಾಯಿಸುತ್ತಿರುವುದನ್ನು ಗಮನಿಸಿದ ಪಟ್ಟಣದ ಪೊಲೀಸ್ ಅಧಿಕಾರಿಗಳು ವಾಹನ ಜಪ್ತಿ ಮಾಡಿ ಪ್ರಕರಣ ದಾಖಲಿಸಿದ್ದರು. ಬಸವನಬಾಗೇವಾಡಿಯ 1ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ ಜೂ.23ರಂದು ಆರೋಪಿ ತಾಲೂಕಿನ ಮಸೂತಿ ಗ್ರಾಮದ ಬಸಪ್ಪ ಸಂಗಪ್ಪ ಮೇಲಿನಮನಿ ಈತನಿಗೆ ತನ್ನ ಅಪ್ರಾಪ್ತ ಮಗನಿಗೆ ವಾಹನ ಚಲಾವಣೆ ಮಾಡಲು ಮೋಟರ್ ಸೈಕಲ್ ನೀಡಿದ ಆರೋಪಕ್ಕಾಗಿ ಕಲಂ 1999 ಎ ಮೋಟಾರ್ ವೆಹಿಕಲ್ ಆಕ್ಟ್ ಅಡಿಯಲ್ಲಿ 25,000 ದಂಡ ಮತ್ತು ಮುಂದಿನ 6 ತಿಂಗಳವರೆಗೆ ವಾಹನದ ನೋಂದಣಿ ರದ್ದುಪಡಿಸಲಾಗಿದೆ. ಅಪ್ರಾಪ್ತ ಬಾಲಕನಿಗೆ 19 ವರ್ಷ ಆಗುವವರೆಗೂ ಲೈಸೆನ್ಸ್ ನೀಡದಂತೆ ಆದೇಶ ಮಾಡಿದೆ.

ದೇವರಹಿಪ್ಪರಗಿ: ಪಟ್ಟಣದ ಎ.ಬಿ.ಸಾಲಕ್ಕಿ ಪ.ಪೂ ಕಾಲೇಜಿನ ಸಭಾಭವನದಲ್ಲಿ ಮಾದಕ ದ್ರವ್ಯ ದುರ್ಬಳಕೆ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ಕಾರ್ಯಕ್ರಮ ನಡೆಯಿತು. ಪಿಎಸ್‌ಐ ಸಚಿನ್ ಆಲಮೇಲಕರ, ಸ್ಥಳೀಯ ಕಾಲೇಜಿನ ಪ್ರಾಂಶುಪಾಲ ವಿ.ಜಿ.ಹೂನಳ್ಳಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಕೆ.ವಿ.ಒಡೆಯರ, ವಿ.ಆರ್.ಹಿರೇಮಠ, ಪೊಲೀಸ್ ಪೇದೆಗಳಾದ ಎಂ.ಎಸ್.ತೊರವಿ, ಸಿದ್ದು ಗಂಗನಹಳ್ಳಿ, ಶ್ರೀಕಾಂತ ಸಿಂಧನೂರ ಸೇರಿ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಮಾದಕ ದ್ರವ್ಯಗಳ ಅರಿವು ಅಗತ್ಯ: ಪಿಎಸ್‌ಐ

ದೇವರಹಿಪ್ಪರಗಿ: ಮಾದಕ ದ್ರವ್ಯಗಳ ಬಗೆಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಮಕ್ಕಳು, ಯುವಕರು ಮಾದಕ ದ್ರವ್ಯಗಳತ್ತ ಆಕರ್ಷಿತ ರಾಗುತ್ತಿರುವುದು ಆಪಾಯಕಾರಿ ಬೆಳವಣಿಗೆಯಾಗಿದೆ ಎಂದು ಪಿಎಸ್‌ಐ ಸಚಿನ್ ಆಲಮೇಲಕರ ಕಳವಳ ವ್ಯಕ್ತಪಡಿಸಿದರು. ಪಟ್ಟಣದ ಎ.ಬಿ.ಸಾಲಕ್ಕಿ ಪ.ಪೂ ಕಾಲೇಜಿನ ಸಭಾಭವನದಲ್ಲಿ ಮಾದಕ ದ್ರವ್ಯ ದುರ್ಬಳಕೆ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಯಾವುದೇ ದುಶ್ಚಟ ಹಾಗೂ ಮಾದಕ ದ್ರವ್ಯ ವ್ಯಸನಿಗಳಾಗದೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಉಜ್ವಲ ಭವಿಷ್ಯ ರೂಪಿಸಿಕೊಳ್ಳಿ. ಹಾಗೂ ಮಾದಕ ವಸ್ತುಗಳನ್ನು ಮಾರಾಟ ಮತ್ತು ಸೇವನೆ ಮಾಡುವುದು ಕಾನೂನು ಬಾಹಿರ. ತಾಲೂಕನ್ನು ಮಾದಕ ವಸ್ತುಗಳಿಂದ ಮುಕ್ತಗೊಳಿಸಲು ಸಾರ್ವಜನಿಕರು ವಿದ್ಯಾರ್ಥಿಗಳು ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದರು. ಸ್ಥಳೀಯ ಕಾಲೇಜಿನ ಪ್ರಾಂಶುಪಾಲ ವಿ.ಜಿ.ಹೂನಳ್ಳಿ ಮಾತನಾಡಿ, ಯುವ ಪೀಳಿಗೆಯಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಅರಿವು ಹಾಗೂ ವ್ಯಸನದಿಂದ ಮುಕ್ತಗೊಳಿಸುವಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಜಾಗೃತಿ ಮುಖ್ಯವಾಗಿದೆ ಎಂದು ಹೇಳಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಕೆ.ವಿ.ಒಡೆಯರ, ವಿ.ಆರ್.ಹಿರೇಮಠ, ಪೊಲೀಸ್ ಪೇದೆಗಳಾದ ಎಂ.ಎಸ್.ತೊರವಿ, ಸಿದ್ದು ಗಂಗನಹಳ್ಳಿ, ಶ್ರೀಕಾಂತ ಸಿಂಧನೂರ ಸೇರಿ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಕೊಲ್ಹಾರ: ಪಟ್ಟಣದಲ್ಲಿ ರಾಷ್ಟ್ರೀಯ ಸಂಗೊಳ್ಳಿ ರಾಯಣ್ಣ ಸೇನೆ ತಾಲೂಕು ಘಟಕ ಕೊಲ್ಹಾರದ ಸಿದ್ದು ಭಾವಿಕಟ್ಟಿ ಸಂಸ್ಥಾಪಕ ಅಧ್ಯಕ್ಷರ ನೇತೃತ್ವದಲ್ಲಿ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. ಅಧ್ಯಕ್ಷರಾಗಿ ಮಹಾಂತೇಶ ಸರೂರ, ಉಪಾಧ್ಯಕ್ಷರಾಗಿ ನಿಂಗಪ್ಪ ಪೂಜಾರಿ, ಕಾರ್ಯದರ್ಶಿಯಾಗಿ ದರಿಯಪ್ಪ ಕೊಂತಿಕಲ್ ಯುವ ಘಟಕದ ಅಧ್ಯಕ್ಷರಾಗಿ ರಾಘವೇಂದ್ರ ಕಲಗುರ್ಕಿ ಹಾಗೂ ಪದಾಧಿಕಾರಿಗಳಾಗಿ ಮುತ್ತು ಮಸೂತಿ, ಅಂಬರೀಶ ಸಲಗರ ಅವರಿಗೆ ಆದೇಶ ಪತ್ರವನ್ನು ಸಂಸ್ಥಾಪಕ ಅಧ್ಯಕ್ಷ ಸಿದ್ದು ಭಾವಿಕಟ್ಟಿ ಹಾಗೂ ತಾಲೂಕು ಅಧ್ಯಕ್ಷ ಮಹಾಂತೇಶ ಸರೂರ ಅವರು ವಿತರಿಸಿದರು.

ಜು.21, 22ರಂದು 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಅರ್ಥಪೂರ್ಣವಾಗಿ ಸಮ್ಮೇಳನ ಆಚರಿಸೋಣ

ಸಿಂದಗಿ: ನಗರದಲ್ಲಿ ಜು.21 ಮತ್ತು 22ರಂದು ನಡೆಯಲಿರುವ 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಾಲೂಕಾಡಳಿತದಿಂದ ಸಂಪೂರ್ಣ ಸಹಕಾರ ನೀಡುವುದಾಗಿ ತಾಲೂಕು ದಂಡಾಧಿಕಾರಿ ಕರೆಪ್ಪ ಬೆಳ್ಳಿ ಭರವಸೆ ವ್ಯಕ್ತಪಡಿಸಿದರು.

ನಗರದ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಡೆದ 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಭೆಯಲ್ಲಿ ಮಾತನಾಡಿದ ಅವರು, ನನ್ನ ಆಡಳಿತಾವಧಿಯಲ್ಲಿ ತಾಲೂಕಿನಲ್ಲಿ ಜಿಲ್ಲಾ ಸಮ್ಮೇಳನ ನಡೆಯುತ್ತಿರುವುದು ಅತ್ಯಂತ ಸಂತೋಷಕರ ಸಂಗತಿ. ಕನ್ನಡಮ್ಮನ ನುಡಿ ತೇರನೆಳೆದು ಸೇವೆ ಮಾಡುವ ಸೌಭಾಗ್ಯ ನಮಗೆ ದೊರಕಿರುವದು ನಮ್ಮೆಲ್ಲರ ಅದೃಷ್ಟ. ಸಾಹಿತ್ಯ ಸಮ್ಮೇಳನವನ್ನು ಅರ್ಥಪೂರ್ಣವಾಗಿ, ಮಾದರಿಯಾಗಿ ಆಚರಿಸೋಣ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿ, ಸಿಂದಗಿಯಲ್ಲಿ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಸಮ್ಮೇಳನದ ತಯಾರಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ. ಅಕ್ಷರ ಜಾತ್ರೆಯ ಯಶಸ್ಸು ಪ್ರತಿ ಕನ್ನಡಿಗನ ಸಹಕಾರದ ಜೊತೆ ಜೊತೆಗೆ

ತಾಲೂಕಾಡಳಿತದ ಮೇಲೆಯೂ ಗುರುತರ ಜವಾಬ್ದಾರಿ ಇದೆ. ಸಿಂದಗಿ ಮತಕ್ಷೇತ್ರದ ಶಾಸಕ ಅಶೋಕ ಮನಗೂಳಿ ಅವರು ಈಗಾಗಲೇ ತಾಲೂಕಾಡಳಿತ ಹಾಗೂ ತಾಲೂಕಿನ ಹಿರಿಯರೊಂದಿಗೆ ಸಭೆಯನ್ನು ಮಾಡಿ ಸೂಕ್ತ ಸೂಚನೆಗಳನ್ನು ನೀಡಿದ್ದಾರೆ ಎಂದರು.

ತಾಲೂಕು ಘಟಕದ ಅಧ್ಯಕ್ಷ ವೈ.ಸಿ.ಮಯೂರ ಮಾತನಾಡಿ, 14 ವರ್ಷಗಳ ಹಿಂದೆ ಸಿಂದಗಿಯಲ್ಲಿ ಜಿಲ್ಲಾ ಸಮ್ಮೇಳನ ಜರುಗಿದೆ. ಈಗ ಮತ್ತೊಮ್ಮೆ ಜಿಲ್ಲಾ ಸಮ್ಮೇಳನ ಆಚರಣೆ ಮಾಡುವ ಸುಯೋಗ ದೊರೆತದ್ದು ತಾಲೂಕಿನ ಸುದೈವ. 21ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಯಶಸ್ಸಿಗೆ ಶಾಸಕರು ಹಾಗೂ ತಾಲೂಕ ಆಡಳಿತಕ್ಕೆ ಗೌರವ ದೊರಕುವುದು ಎಂದರು.

ತಾಲೂಕು ಗೌರವ ಕಾರ್ಯದರ್ಶಿ ಆನಂದ ಶಾಬಾದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ, ಸಾಹಿತಿ ಸೈನಾಬಿ ಮಸಳಿ ಪ್ರಾರ್ಥಿಸಿದರು. ಶಿಕ್ಷಕ ಮಹೆತಾಬ ಕಾಗವಾಡ ಗೀತಗಾಯನ ಮಾಡಿದರು. ಪದಾಧಿಕಾರಿಗಳಾದ ಶಾಂತು ರಾಣಾಗೋಳ, ಎಸ್.ಎಸ್.ಸಾತಿಹಾಳ, ವರ್ಷಾ ಪಾಟೀಲ, ಸುನಂದಾ ಯಂಪೂರೆ, ರಾಮಕೃಷ್ಣ ಹೆಬ್ಬಾಳ, ಶಿವಾನಂದ ಶಿವಸಿಂಪಗೇರ, ಡಾ.ಪ್ರಕಾಶ ರಾಗರಂಜಿನಿ, ಆನಸೂಯ ಪಾರಗೊಂಡ, ಅಂಬರೀಶ ಚೌಗಲೆ, ಖಲೀಲ ಬಡಿಗೇರ, ವಿಶ್ವನಾಥ ಪಾಟೀಲ ಇದ್ದರು.

ಸಮರ್ಪಕವಾಗಿ ಅನುದಾನ ಬಳಸಿ: ಎಡಿಸಿ

ವಿಜಯಪುರ: ಸರ್ಕಾರಿ ಹಾಗೂ ಅರೆ ಸರ್ಕಾರಿ ಕಚೇರಿಗಳಲ್ಲಿ ವಿಶಿಷ್ಟಚೇತನರಿಗೆ ಯಾವುದೇರೀತಿಯಅಡೆತಡೆಯುಂಟಾಗದಂತೆ ಅಗತ್ಯ ಸೌಲಭ್ಯ ಕಲ್ಪಿಸಿ, ವಿಶಿಷ್ಟಚೇತನರಿಗಾಗಿ ಮೀಸಲಿರುವ ಶೇ.5ರಷ್ಟು ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಆಪರ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ವಿಶೇಷ ಚೇತನರ ಕುಂದುಕೊರತೆಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಎಲ್ಲಾ ಇಲಾಖೆಗಳ ಕಚೇರಿಗಳ ಸೂಚನಾ ಫಲಕಗಳಲ್ಲಿ ವಿಶೇಷ ಚೇತನರಿಗಾಗಿ ಮೀಸಲಿರುವ ಶೇ.5ರ ಅನುದಾನ ಹಾಗೂ ಸೌಲಭ್ಯಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಗೋಚರಿಸುವಂತೆ ಪ್ರದರ್ಶಿಸಬೇಕು ಎಂದು ಸೂಚಿಸಿದರು.

ಸರ್ಕಾರಿ ಬಸ್‌ಗಳಲ್ಲಿ ವಿಶೇಷ ಚೇತನರಿಗೆ ಒದಗಿಸಲಾಗುವ ಪ್ರಯಾಣ ಸೌಲಭ್ಯಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವಂತೆ ತಿಳಿಸಿದ ಅವರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ವಿಶೇಷ ಚೇತನರ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಆಧಾರ್ ಕಾರ್ಡಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಿ, ವಿಶೇಷ ಚೇತನರಿಗೆ ಅಗತ್ಯ ಸೇವೆಗಳು ಸುಲಭವಾಗಿ ದೊರೆಯುವಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅಲ್ಲದೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಬಳಕೆಗೆ ಅನುಕೂಲವಾಗುವ ವಿಶೇಷ ಚೇತನರ ಸ್ನೇಹಿ ಶೌಚಾಲಯಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಜಗದೀಶ ಕೆ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸಂಪತ್ ಗುಣಾರಿ, ಮಹಾನಗರ ಪಾಲಿಕೆಯ ಮಹಾವೀರ ಬೋರಣ್ಣನವರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಎ. ಉಪ್ಪಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿ ನಿರ್ಮಲ ಸುರಪುರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಕೊಲ್ಹಾರ: ತಾಲೂಕಿನ ರೋಣಿಹಾಳ 110/11ಕೆ.ವಿ ಉಪಕೇಂದ್ರದ ಮೊದಲನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ನಿಮಿತ್ತ ಉಪಕೇಂದ್ರ ವ್ಯಾಪ್ತಿಯ ಕೊಲ್ಹಾರ, ಕುಬಕಡ್ಡಿ, ರೋಣಿಹಾಳ, ಹಳ್ಳದಗೆಣ್ಣೂರ, ಚಿಕ್ಕ ಗರಸಂಗಿ, ಹಿರೇ ಗರಸಂಗಿ, ಮುಳವಾಡ ಇಂಡಸ್ಟ್ರಿಯಲ್ ಏರಿಯಾ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಜೂ.25ರಂದು ಗುರುವಾರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಕಾರಣ ಗ್ರಾಹಕರಿಗೆ ಸಹಕರಿಸಲು ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಮಲೇರಿಯಾ ಜಾಗೃತಿ ಅಗತ್ಯ

ಮುದ್ದೇಬಿಹಾಳ: ತಾಲೂಕಿನ ಯರಗಲ್ಲ ಗ್ರಾಮದ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ನಿಯಂತ್ರಣ ಅಧಿಕಾರಿಗಳ ಕಾರ್ಯಾಲಯ ಹಾಗೂ ಜಿಲ್ಲಾಡಳಿತ, ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಗರ

ಕಿರುಸುದ್ದಿ

ಜೂ.29ಕ್ಕೆ ಮಾರಮ್ಮದೇವಿ ಜಾತ್ರಾ ಮಹೋತ್ಸವ

ಶ್ರೀರಾಮನಗರ: ಗ್ರಾಮದ ಜುಮ್ಮಾ ಮಸೀದಿ ಸಮೀಪದ ಶ್ರೀಮಾರಮ್ಮದೇವಿಯ 8ನೇ ವರ್ಷದ ಜಾತ್ರಾ ಮಹೋತ್ಸವ ಕಾರ್ಯಕ್ರಮವು ಜೂ.29ರಂದು ಭಕ್ತಿಭಾವದಿಂದ ನಡೆಯಲಿದೆ. ಅಂದು ಬೆಳಿಗ್ಗೆ 8 ಗಂಟೆಗೆ ಮಾರಮ್ಮದೇವಿ ದೇವಾಲಯದಲ್ಲಿ ಅಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿದ್ದು, ನಂತರ ಗಂಗಾಪೂಜೆ ಮತ್ತು ವಿವಿಧ ಧಾರ್ಮಿಕ ವಿಧಿವಿಧಾನಗಳು ಜರುಗಲಿವೆ. ಬೆಳಿಗ್ಗೆ 10ರಿಂದ 11ಗಂಟೆಯವರೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವಿಯ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ನಡೆಯಲಿದ್ದು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ದೇವಸ್ಥಾನ ಸಮಿತಿ ಕೋರಿದೆ. ಮಧ್ಯಾಹ್ನ 12.00 ಗಂಟೆಯಿಂದ ಸಾಮೂಹಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಈ ಅಮೃತೋತ್ಸವ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಭಾಗವಹಿಸಬೇಕು. ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮಸ್ಥರು ಹಾಗೂ ಜಾತ್ರಾ ಸಮಿತಿಯ ಸದಸ್ಯರು ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮನವಿ ಮಾಡಲಾಗಿದೆ.

ಗಂಗಾದೇವಿಯ ಜಯಂತಿ ಆಚರಣೆ

ಗಂಗಾವತಿ: ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ಗಂಗಾಮತ ಸಮಾಜದ ವತಿಯಿಂದ ಗಂಗಾದೇವಿಯ ಜಯಂತಿಯನ್ನು ಆದ್ದೂರಿಯಾಗಿ ಬುಧವಾರ ಆಚರಣೆ ಮಾಡಲಾಯಿತು. ಜಯಂತಿಯ ಹಿನ್ನೆಲೆಯಲ್ಲಿ ಗಂಗಾದೇವಿಯ ಭಾವಚಿತ್ರವನ್ನು 100ಕ್ಕೂ ಅಧಿಕ ಕುಂಭ, ಕಳಶಗಳೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ನಂತರ ಜಯಂತಿ ಅಂಗವಾಗಿ ಗಂಗಾದೇವಿ ದೇವಸ್ಥಾನದಲ್ಲಿ ದೇವಿಯ ಮೂರ್ತಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಮಹಾಮಂಗಳಾರತಿ, ವಿಶೇಷ ಹೂವಿನ ಅಲಂಕಾರ ಸೇರಿದಂತೆ ನಾನಾ ಧಾರ್ಮಿಕ ಪೂಜಾ ಕಾಯ9ಕ್ರಮಗಳು ಜರುಗಿದವು. ರಥೋತ್ಸವದ ಹಿನ್ನೆಲೆಯಲ್ಲಿ ರಥಕ್ಕೆ ರಥ ಏರಿಸುವುದು, ಮಡಿ ತೇರು ರಥೋತ್ಸವ ಕಾರ್ಯಕ್ರಮಗಳು ಜರುಗಿದವು. ನಂತರ ಪ್ರತಿ ವರ್ಷದಂತೆ ಈ ಭಾರಿಯು ಸಹ ಸಾಮೂಹಿಕ ವಿವಾಹ ಜರುಗಿದವು. ಸಂಜೆ ಗ್ರಾಮಸ್ಥರು ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರು, ಗಂಗಾಮತ ಸಮಾಜದ ಮುಖಂಡರ ಸಮ್ಮುಖದಲ್ಲಿ ರಥೋತ್ಸವ ಜರುಗಿತು. ಮಹಿಳೆಯರು ರಥೋತ್ಸವ ಎಳೆಯುವ ಮೂಲಕ ಗಮನ ಸೆಳೆದರು. ಹೆಬ್ಬಾಳ ಮಠದ ನಾಗಭೂಷಣ ಶ್ರೀಗಳು, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪ, ಪ್ರಮುಖರಾದ ಸಿಂಗನಾಳ ವಿರುಪಾಕ್ಷಪ್ಪ, ರಾಜಶೇಖರಪ್ಪ ಮುಸ್ಟೂರ ಹಾಗೂ ಹೊಸಳ್ಳಿ ಗ್ರಾಮದ ಗಂಗಾಮತ ಸಮಾಜದ ಮುಖಂಡರಿದ್ದರು.

ಸೌಹಾರ್ದಯುತವಾಗಿ ಮೊಹರಂ ಆಚರಿಸಿ

ಕುಕನೂರು: ತಾಲೂಕಿನ ಕುದುರೆಮೋತಿ ಗ್ರಾಮದಲ್ಲಿ ನಡೆಯಲಿರುವ ಐತಿಹಾಸಿಕ ಹಿನ್ನೆಲೆ ಹೊಂದಿರುವ ಮೊಹರಂ ಆಚರಣೆ ಸರ್ವ ಧರ್ಮೀಯರು ಸೇರಿ ಕೊಂಡು ಸೌಹಾರ್ದಯುತವಾಗಿ ಆಚರಿಸುವ ಉದ್ದೇಶದಿಂದ ಗ್ರಾಮದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಶಾಂತಿ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಬೆವೂರು ಪೊಲೀಸ್ ಠಾಣಾ ಅಧಿಕಾರಿ ಪಿಎಸ್‌ಐ ಟಿ.ಗುರುರಾಜ ಮಾತನಾಡುತ್ತ ಮೊಹರಂ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕರಿಸಬೇಕು. ಯಾವುದೇ ವದಂತಿಗಳಿಗೆ ಕಿವಿಗೊಡದೆ. ಪರಸ್ಪರ ಸಹಬಾಳ್ವೆ ಮತ್ತು ಸಹೋದರತ್ವದ ಮನೋಭಾವದಿಂದ ಹಬ್ಬವನ್ನು ಆಚರಿಸಬೇಕೆಂದರು. ದಳಪತಿ ಹನಮಗೌಡ ಪೊ.ಪಾಟೀಲ ಮಾತನಾಡಿ, ಗ್ರಾಮಸ್ಥರು ಹಾಗೂ ಯುವಕರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಿ ಹಬ್ಬವನ್ನು ಯಶಸ್ವಿಯಾಗಿ ನಡೆಸಲು ಸಹಕರಿಸುತ್ತಾರೆ ಎಂದರು. ಪಿಎಸ್‌ಐ ಸಂಗನಗೌಡ, ವೇಷಗಾರ ಸಮಾಜದ ಮುಖಂಡರಾದ ಚಿನ್ನಪ್ಪ, ದುರಗಪ್ಪ ದೊಪಂ, ಮೇಶ, ಚಂದಪ್ಪರ ಕಾರ್ಯಕ್ರಮದ ನಿರೂಪಣೆ ಮಂಜುನಾಥ ಗಟ್ಟೆಪ್ಪನವರ್, ಗ್ರಾಮದ ಮುಖಂಡರಾದ ಬಸಪ್ಪ ದೊಡ್ಡಮನಿ, ಸುಭಾಷ್ ಈಡಿಗೇರ, ಡಾ.ಹುಸೇನಬಾಷ ಮಕಾಂದರ್, ಹಾಸೀಮಸಾಬ ದಿ ಮಾಕಾಂದರ್, ಗ್ರಾಪಂ ಮಾಜಿ ಸದಸ್ಯ ಮಾಬುಸಾಬ ಮಕಂದಾರ್, ಶರಣಯ್ಯ ಜಂಗಮೂರು,ರವಿ ಕಟಗಿ, ಮುಖಂಡರಾದನ ದ್ಯಾಮಣ್ಣ ಉಚ್ಚಲಕುಂಟಿ, ಆ ಮಹಾಂತಪ್ಪ ಶಿಡ್ಲಳ್ಳಿ, ಶಿವಪ್ಪ ವ ಬೇವಿನಗಿಡದ್, ಉಮೇಶ ಪ ತಲ್ಲೂರ, ಪಂಪಾಪತಿ ವಣಗೇರಿ ಇತರರಿದ್ದರು.

ಸಿಂಧನೂರು: ವಿದ್ಯುತ್ ಕ್ಷೇತ್ರವನ್ನು ಟಾಟಾ ಕಂಪನಿಗೆ ನೀಡಲು ಕೇಂದ್ರ ಸರ್ಕಾರ ಮುಂದಾಗಿರುವುದನ್ನು ಖಂಡಿಸಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಮಿತಿಯಿಂದ ಜೆಸ್ಕಾಂ ಎಇಇ ಶ್ರೀನಿವಾಸ ಯಾದವಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ವಿಬಿಜಿರಾಮ್‌ಜಿಯಲ್ಲಿ 125 ದಿನ ಕೆಲಸ

ಯಲಬುರ್ಗಾ: ನರೇಗಾ ಯೋಜನೆಯಂತೆಯೇ ವಿಬಿಜಿ ರಾಮ್ ಜಿ ಕೂಡ ಅಕುಶಲ ಕೂಲಿಕಾರರಿಗೆ ನಿರಂತರ ಕೆಲಸ ಇರುವುದರಿಂದ ಯಾವುದೇ ಆತಂಕ ಪಡುವ ಅವಶ್ಯಕತೆ ಇಲ್ಲ, ಇದರಲ್ಲಿ 125 ದಿನಗಳ ಕೆಲಸ ನೀಡಲಾಗುವುದು ಎಂದು ತಾಪಂ ಇಒ ನೀಲಗಂಗಾ ಬಬಲಾದ ಹೇಳಿದರು.

ತಾಲೂಕಿನ ಬಳೂಟಗಿ ಗ್ರಾಪಂ ವ್ಯಾಪ್ತಿಯ ಚಿಕ್ಕೊಪ್ಪ ಗ್ರಾಮದಲ್ಲಿ ನರೇಗಾ ಯೋಜನೆಯಡಿ ನಡೆಯುತ್ತಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕೂಲಿಕಾರರನ್ನುದ್ದೇಶಿಸಿ ಮಾತನಾಡಿದ ಅವರು ಜು.1 ರಿಂದ ವಿಬಿಜಿರಾಮ್ ಜಿ ಯೋಜನೆ ಜಾರಿಗೆ ಬರಲಿದ್ದು, ಅದರಲ್ಲೂ ಕೂಡ ನಿರಂತರ ಕೆಲಸ ಲಭ್ಯ ಇರಲಿದೆ. ಹೀಗಾಗಿ ಆತಂಕ ಪಡುವ ಅವಶ್ಯಕತೆ ಇಲ್ಲ. ನರೇಗಾ ಯೋಜನೆಯಡಿ ಸರಿಯಾಗಿ ಕೆಲಸ ನಿರ್ವಹಿಸಿ ವೇತನ ಪಡೆಯಬಹುದು ಎಂದರು. ಗ್ರಾಮೀಣ ಪ್ರದೇಶದ ಅಕುಶಲಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸಿ, ದೀರ್ಘ ಕಾಲ ಬಾಳಿಕೆ ಬರುವ ಸಮುದಾಯ ಸ್ವತ್ತುಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸುವ ಮೂಲಕ ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಜೊತೆಯಾಗಿ ನಿಂತಿರುವ ಉದ್ಯೋಗ ಖಾತ್ರಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ತಾಲೂಕು ಐಇಸಿ ಸಂಯೋಜಕರು, ಎನ್‌ಆರ್‌ಎಲ್‌ಎಂ ಸಂಯೋಜಕರು, ಆರ್‌ಜಿಪಿಆರ್ ಫೆಲೊ, ಜಿಕೆಎಂ, ಕಾಯಕ ಬಂಧುಗಳು, ಕೂಲಿಕಾರರು ಇದ್ದರು.

ಯಲಬುರ್ಗಾ: ತಾಲೂಕಿನ ಬಳೂಟಗಿ ಗ್ರಾಪಂ ವ್ಯಾಪ್ತಿಯ ಚಿಕ್ಕೊಪ್ಪ ಗ್ರಾಮದಲ್ಲಿ ನರೇಗಾ ಯೋಜನೆಯಡಿ ನಡೆಯುತ್ತಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ತಾಪಂ ಇಒ ನೀಲಗಂಗಾ ಬಬಲಾದ ಭೇಟಿ ನೀಡಿ ಪರಿಶೀಲಿಸಿದರು.

ಪ್ರಗತಿ ಪರಿಶೀಲನಾ ಸಭೆ | ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿಕೆ

ಗ್ಯಾರಂಟಿ ದುರುಪಯೋಗಕ್ಕೆ ಬ್ರೇಕ್

ಕಲಬುರಗಿ: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಜನರ ಆರ್ಥಿಕ ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಿದ್ದು,ಯೋಜನೆಗಳ ದುರುಪಯೋಗವನ್ನು ತಡೆಗಟ್ಟುವ ಮೂಲಕ ಅರ್ಹ ಫಲಾನುಭವಿಗಳಿಗೆ ಮಾತ್ರ ಸೌಲಭ್ಯ ತಲುಪುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಯೋಜನೆಗಳ ಅನುಷ್ಠಾನ ವೇಳೆ ಪತ್ತೆಯಾದ ಅಕ್ರಮಗಳನ್ನು ತಡೆಯಲು ಸರ್ಕಾರ ಕ್ರಮಕೈಗೊಂಡಿದ್ದು,ತಪ್ಪಾಗಿವರ್ಗಾವಣೆಯಾಗಿದ್ದ ಸುಮಾರು 14 ರಿಂದ 15 ಕೋಟಿ ಮೊತ್ತವನ್ನು ಈಗಾಗಲೇ ವಾಪಸ್ ಪಡೆಯಲಾಗಿದೆ. ಉಳಿದಿರುವ ಸುಮಾರು 100 ಕೋಟಿ ಮೊತ್ತದ ವಸೂಲಾತಿಗೆ ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

ಪರಿಶೀಲನೆ ವೇಳೆ ಮೃತಪಟ್ಟವರ ಖಾತೆಗಳಿಗೆ ಹಣ ಜಮೆಯಾಗಿರುವುದು, ಒಂದೇ ಬ್ಯಾಂಕ್ ಖಾತೆಗೆ 20ಕ್ಕೂ ಹೆಚ್ಚು ಫಲಾನುಭವಿಗಳನ್ನು ಲಿಂಕ್ ಮಾಡಿರುವುದು ಹಾಗೂ ಬ್ಯಾಂಕ್ ಖಾತೆ ಇಲ್ಲದಿದ್ದರೂ ಹಣ ವರ್ಗಾವಣೆಯಾಗಿರುವಂತಹ ಗಂಭೀರ ಲೋಪಗಳು ಬೆಳಕಿಗೆ ಬಂದಿವೆ. ಗೃಹಲಕ್ಷ್ಮಿ ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ 9,156 ಮೃತ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅವರ ಖಾತೆಗಳಿಗೆ ಒಟ್ಟು

ಅನ್ನಭಾಗ್ಯ ಯೋಜನೆಯಲ್ಲಿ ಅಕ್ರಮ ತಡೆ

ಅನ್ನಭಾಗ್ಯ ಯೋಜನೆಯಡಿ ಆಹಾರ ಇಲಾಖೆ ಕೈಗೊಂಡ ಕ್ರಮಗಳ ಕುರಿತು ಮಾಹಿತಿ ನೀಡಿದ ಅವರು, ನಿಯಮ ಉಲ್ಲಂಘಿಸಿದ 14 ನ್ಯಾಯಬೆಲೆ ಅಂಗಡಿಗಳ ಪರವಾನಗಿ ರದ್ದುಪಡಿಸಲಾಗಿದೆ. ಅಲ್ಲದೆ 6,874 ಬೋಗಸ್ ಪಡಿತರ ಚೀಟಿಗಳನ್ನು ರದ್ದುಪಡಿಸಿ, 9,631 ಕ್ವಿಂಟಾಲ್ ಅಕ್ರಮ ಆಹಾರ ಧಾನ್ಯಗಳನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

4.27 ಕೋಟಿ ಜಮೆಯಾಗಿದೆ. ಈ ಪೈಕಿ 5,336 ಖಾತೆಗಳಲ್ಲಿ ಹಣ ವರ್ಗಾವಣೆಯನ್ನು ತಡೆಹಿಡಿಯಲಾಗಿದ್ದು, ಇದುವರೆಗೆ ಕೇವಲ 25.84 ಲಕ್ಷ ಮಾತ್ರ ವಸೂಲಿ ಮಾಡಲಾಗಿದ್ದು ,ಮುಂದಿನ 8 ರಿಂದ 10 ದಿನಗಳೊಳಗೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಮನೆ ಮನೆ ಸಮೀಕ್ಷೆ ನಡೆಸಿ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ಯಾರಂಟಿ ಯೋಜನೆಗಳಡಿ ಫಲಾನುಭವಿಗಳ ಖಾತೆಗೆ ಜಮೆಯಾಗುವ ಹಣವನ್ನು ಕೆಲವು ಬ್ಯಾಂಕುಗಳು ಹಳೆಯ ಸಾಲಗಳಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿವೆ. ಇದು ನಿಯಮಬಾಹಿರವಾಗಿದ್ದು, ಇಂತಹ ಕ್ರಮಗಳನ್ನು ತಕ್ಷಣ ನಿಲ್ಲಿಸುವಂತೆ ಬ್ಯಾಂಕುಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ ಸಂಕನೂರ, ಜಿಲ್ಲಾ ಪಂಚಾಯತ ಮುಖ್ಯ ಯೋಜನ ಅಧಿಕಾರಿ ಶರಣ್ಣಯ್ಯ ಎಸ್. ಮಠಪತಿ, ಉಪಾಧ್ಯಕ್ಷರಾದ ವಿಜಯಕುಮಾರ ಕಟ್ಟಿಮನಿ,ಸೋಮಶೇಖರ ಹಿರೇಮಠ, ಸುರೇಶ್ ತಿಪ್ಪಶೆಟ್ಟಿ, ನರಸಿಂಹಲು ಕುಂಬಾರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಗತ್ಯ ಶಿಷ್ಟಾಚಾರ ಪಾಲನೆ: ಡಾ.ಸುರೇಶ ಇಟ್ನಾಳ

ಕೊಪ್ಪಳ: ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಅಳವಡಿಸಿದ 33 ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ ಸಮಾರಂಭಕ್ಕೆ ಕೊಪ್ಪಳ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆಗಳಿಂದ ಎಲ್ಲ ರೀತಿಯ ಅಗತ್ಯ ಶಿಷ್ಟಾಚಾರಕ್ಕೆ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಹೇಳಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಸಭೆ ನಡೆಸಿ ಅವರು ಮಾಹಿತಿ ನೀಡಿದರು.

ಕೇಂದ್ರ ಜಲಶಕ್ತಿ ಸಚಿವರು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಸಂಸದರು ಮತ್ತು ಶಾಸಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಜೂ.25ರಂದು ಬೆಳಗ್ಗೆ ಐಆರ್ ಬಿನಲ್ಲಿ ಹೆಲಿಪ್ಯಾಡಗೆ ಆಗಮಿಸುವ ಮುಖ್ಯಮಂತ್ರಿಗಳು ಹಾಗೂ ಗಣ್ಯರು ಮೊದಲಿಗೆ ಜಲಾಶಯದ ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಸಮಾರಂಭದಲ್ಲಿ ಭಾಗಿಯಾಗುವರು. ಬಳಿಕ ಮುನಿರಾಬಾದ್ ಗ್ರಾಮದಲ್ಲಿನ ಸರ್ಕಾರಿ ಹೈಸ್ಕೂಲ್ ಗ್ರೌಂಡ್ ನಲ್ಲಿಸಾರ್ವಜನಿಕಸಮಾರಂಭನಡೆಯಲಿದೆ. ಕಾರ್ಯಕ್ರಮದಲ್ಲಿ ಅಂದಾಜು 15 ಸಾವಿರ ಜನರು ಪಾಲ್ಗೊಳ್ಳಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ ಮಾತನಾಡಿ, ಕಾರ್ಯಕ್ರಮವು ಶಾಂತಿಯುತವಾಗಿ ನಡೆಯುವ ದಿಶೆಯಲ್ಲಿ ಭದ್ರತೆಗಾಗಿ ಅಗತ್ಯ ಸಂಖ್ಯೆಯಲ್ಲಿಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆರು ಜನ ಎಸ್‌ಪಿ,

25 ಜನ ಡಿವೈಎಸ್ಪಿ, 25ಕ್ಕೂ ಹೆಚ್ಚು ಜನ ಸಿಪಿಐ ಮತ್ತು ಪಿಎಸ್‌ಐ ಹಾಗೂ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್‌ಪಿ ಸೇರಿದಂತೆ ವಿವಿಧ ಪೊಲೀಸ್ ತುಕಡಿಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. 150 ಬಸ್ಸುಗಳಿಗೆ ಹಾಗೂ 250ಕ್ಕೂ ಹೆಚ್ಚು ಬೇರೆ ಬೇರೆ ವಾಹನಗಳಿಗೆ ಬೇರೆ ಬೇರೆ ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದು, ಸಾರ್ವಜನಿಕರು ನಿಗದಿತ ಸ್ಥಳದಲ್ಲಿ ವಾಹನ ನಿಲ್ಲಿಸಿ ಸಹಕರಿಸಬೇಕು. ಸಿಎಂ ಕಾರ್ಯಕ್ರಮದ ಭದ್ರತಾ ಹಿನ್ನೆಲೆಯಲ್ಲಿ ಪಂಪಾವನದ ಮುಂದಿನ ರಸ್ತೆ ಹಾಗೂ ಸುತ್ತಲಿನ ಪ್ರದೇಶದಲ್ಲಿ ಯಾರಿಗೂ ಸಹ ಪ್ರವೇಶಕ್ಕೆ ಅವಕಾಶವಿರುವುದಿಲ್ಲ. ಹುಲಿಗಿ ಕ್ರಾಸ್‌ನಿಂದ ಹೊಸಪೇಟೆಯತ್ತ ಹೋಗುವ ಮತ್ತು ಬರುವ ವಾಹನಗಳ ಸಂಚಾರಕ್ಕೆ ಸಹ ಸೂಕ್ತ ಮಾರ್ಗಸೂಚಿ ನಿಗದಿಪಡಿಸಲಾಗಿದೆ. ಸಿಎಂ ಕಾರ್ಯಕ್ರಮ ಹಿನ್ನೆಲೆಯಲ್ಲಿ ಭದ್ರತಾ ದೃಷ್ಟಿಯಿಂದ ಸುಮಾರು 4 ಗಂಟೆಗಳ ಸಮಯದವರೆಗೆ ಜನತೆ ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಮೇಶ್ವರ ಇದ್ದರು.

ಮೇಧಾವಿ ಶಿಕ್ಷಕರಾಗಿದ್ದ ಅನ್ನದಾನಪ್ಪ ನಿಂಗೋಜಿ

ಯಲಬುರ್ಗಾ: ಶಿಕ್ಷಕರಾದ ಅನ್ನದಾನಪ್ಪ ನಿಂಗೋಜಿ ಅವರು ತಮ್ಮ ಜೀವನದುದ್ದಕ್ಕೂ ಮೌಲ್ಯಯುತ ಉದಾತ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಒಬ್ಬ ಮೇಧಾವಿ ಶಿಕ್ಷಕರಾಗಿದ್ದರು ಎಂದು ಗಜೇಂದ್ರಗಡದ ನಿವೃತ್ತ ಉಪನ್ಯಾಸಕ ಹಾಗೂ ಚಿಂತಕ ಪ್ರೊ.ಬಿ.ಎ.ಕೆಂಚರೆಡ್ಡಿ ಹೇಳಿದರು.

ಪಟ್ಟಣದ ಎಸ್.ಎ.ನಿಂಗೋಜಿ ಬಿ.ಎಡ್. ಕಾಲೇಜನಲ್ಲಿ ಆಯೋಜಿಸಿದ್ದ ದಿ.ಶಿಕ್ಷಕರಾದ ಅನ್ನದಾನಪ್ಪ ನಿಂಗೋಜಿ ಅವರ 17ನೇ ವರ್ಷದ ಪುಣ್ಯತಿಥಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅನ್ನದಾನಪ್ಪನವರು ಶಿಕ್ಷಕರಾಗಿದ್ದರು ಸಹ ಸರಳ ಸಜ್ಜನಿಕೆಯ ವ್ಯಕ್ತಿತ್ವ,ಸಾಮಾಜಿಕ ಕಾಳಜಿ ಪ್ರಗತಿಪರ ವಿಚಾರಗಳು ಅವರ ಸಾಹಿತ್ಯದಲ್ಲಿ ಒಳಗೊಂಡಿದೆ ಎಂದರು.

ಅವರ ಪ್ರಕಟಿತ ನಾಲ್ಕು ಕಾವ್ಯದಲ್ಲಿ ಬಂಡಾಯವು ರಾರಾಜಿಸುತ್ತಿದೆ. ಸಮಗ್ರ ಸಾಹಿತ್ಯದ ಬಗ್ಗೆ ಸಂಶೋಧನೆಯ ಅಗತ್ಯತೆ ಇದೆ ಎಂದು ಪ್ರತಿ ಪಾದಿಸಿದರು. ಜತೆಗೆ ಅವರ ನಿಸ್ವಾರ್ಥ ಸೇವೆಯ ಫಲವಾಗಿ ನಿಂಗೋಜಿ ಕುಟುಂಬದವರು ನಮ್ಮ ಭಾಗದಲ್ಲಿ ಶಿಕ್ಷಣ ಹೊಸ ಕ್ರಾಂತಿಯನ್ನೆ ಸೃಷ್ಟಿಸಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ಹೇಳಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೀರಪ್ಪ ನಿಂಗೋಜಿ ಮಾತನಾಡಿ, ಅನ್ನದಾನಪ್ಪ ನಿಂಗೋಜಿ ಅವರ

ಕಿರುಸುದ್ದಿ

ಶಾಸಕ ಗಣೇಶಗೆ ಸಚಿವ ಸ್ಥಾನ ನೀಡಲು ಒತ್ತಾಯ

• **ಬಳ್ಳಾರಿ:** ಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರದಲ್ಲಿ ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಬುಧವಾರ ನಗರದಲ್ಲಿ ಬೆಂಬಲಿಗರು, ಸಾವಿರಾರು ಅಭಿಮಾನಿಗಳು, ಕಾರ್ಯಕರ್ತರು ಬೃಹತ್ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಒತ್ತಾಯಿಸಿದರು. ನಗರದ ಏಳುಮಕ್ಕಳ ತಾಯಮ್ಮ ದೇವಿ ದೇಗುಲದ ಬಳಿ ಜಮಾಯಿಸಿದ ಕಂಪ್ಲಿ ಹಾಗೂ ಕುರುಗೋಡು ಭಾಗದಿಂದ ಆಗಮಿಸಿದ್ದ ಸಾವಿರಾರು ಅಭಿಮಾನಿಗಳು, ಕಾರ್ಯಕರ್ತರು, ಬೆಂಬಲಿಗರು ಮೋತಿ ವೃತ್ತದ ಮೂಲಕ ನಗರದ ಹೃದಯ ಭಾಗ ರಾಯಲ್ ವೃತ್ತದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಶಾಸಕ ಜೆ.ಎನ್.ಗಣೇಶ ಅವರ ಭಾವಚಿತ್ರ ಹಿಡಿದು, ಕೂಡಲೇ ನೂತನ ಸರ್ಕಾರದಲ್ಲಿ ಎರಡು ಬಾರಿ ದಾಖಲೆ ಗೆಲುವು ಸಾಧಿಸಿದ ನಾಯಕ ಜೆ.ಎನ್.ಗಣೇಶ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ವರಿಷ್ಠರನ್ನು, ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು. ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಕ್ಷೇತ್ರದ ಶಾಸಕ ಜೆ.ಎನ್.ಗಣೇಶ ಅವರು ಎರಡು ಬಾರಿ ಕ್ಷೇತ್ರದಲ್ಲಿ ಅಭೂತಪೂರ್ವ ಗೆಲವು ಸಾಧಿಸಿ, ಇತಿಹಾಸ ಸೃಷ್ಟಿಸಿದ್ದಾರೆ ಎಂದರು. ಕುರುಗೋಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಬಸವನಗೌಡ ಅವರು ಮಾತನಾಡಿ, ಕ್ಷೇತ್ರದ ಜನಪ್ರಿಯ ಶಾಸಕ ಜೆ.ಎನ್. ಗಣೇಶ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಜಿಲ್ಲೆಯ ಅಭಿವೃದ್ಧಿ ಚಿತ್ರಣವೇ ಬದಲಾಗಲಿದೆ ಎಂದರು. ಕಂಪ್ಲಿ ಪುರಸಭೆ ಅಧ್ಯಕ್ಷ ಮಂಜುನಾಥ್, ತಾಪಂ ಮಾಜಿ ಸದಸ್ಯ ಷಣ್ಮುಖಿ, ರಘು, ರಾಮಕೃಷ್ಣ, ಕಂಪ್ಲಿ ಪುರಸಭೆ ಮಾಜಿ ಅಧ್ಯಕ್ಷ ಪ್ರಸಾದ್, ಕರ್ಚೇಡು ಬಾದಾಮಿ ರವಿ ಕುಮಾರ್, ಬಸರಕೋಡು ಗೋವಿಂದರಾಜು ಸೇರಿದಂತೆ ಅಪಾರ ಅಭಿಮಾನಿಗಳಿದ್ದರು.

ಕಾಂಗ್ರೆಸ್ ವಿರುದ್ಧ ಕಿಚಡಿ ಕೊಟ್ರೇಶ್ ಆಕ್ರೋಶ

• **ವಿಜಯನಗರ:** ಬೆಂಗಳೂರಿನಲ್ಲಿ ಇತ್ತೀಚೆಗೆ ಗೆ ನಡೆದ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭ ಹಾಗೂ ಕಾಂಗ್ರೆಸ್ ರ‍್ಯಾಲಿಯಿಂದಾಗಿ ಉಂಟಾದ ಭಾರಿ ಟ್ರಾಫಿಕ್ ಜಾಮ್‌ನಿಂದಾಗಿ, ಕಡುಬಡತನದಲ್ಲೂ ವರ್ಷವಿಡೀ ಓದಿದ್ದ ಹತ್ತಾರು ವಿದ್ಯಾರ್ಥಿನಿಯರು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರ ತಲುಪಲಾಗದೆ 'ನೀಟ್'

ಮರುಪರೀಕ್ಷೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ. ಕಾಂಗ್ರೆಸ್ ನಾಯಕರ ಬೇಜವಾಬ್ದಾರಿತನ ಖಂಡನೀಯ ಎಂದು ಬಿಜೆಪಿ ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಕಿಚಡಿ ಕೊಟ್ರೇಶ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಮಾಹಿತಿ ಇದ್ದರೂ, ಕಾಂಗ್ರೆಸ್ ಹಠಕ್ಕೆ ಬಿದ್ದು ಆದ್ದೂರಿ ರ‍್ಯಾಲಿ ನಡೆಸಿರಸ್ತೆ ಬಂದ್ ಮಾಡಿದ್ದರಿಂದ ಬೆಂಗಳೂರಿನ ಆರ್.ಸಿ. ಕಾಲೇಜು ಕೇಂದ್ರದ ಇಬ್ಬರು ವಿದ್ಯಾರ್ಥಿನಿಯರು ಸೇರಿದಂತೆ ಹಲವರು ಮಧ್ಯಾಹ್ನ 1:30ರ ಗೇಟ್ ಕ್ಲೋಸಿಂಗ್ ಸಮಯದ ನಂತರ ಕೇಂದ್ರ ತಲುಪಿದ್ದರಿಂದ ಪರೀಕ್ಷೆಯಿಂದ ವಂಚಿತರಾಗಿದ್ದಾರೆ. ಪರೀಕ್ಷಾ ಕೇಂದ್ರಗಳ ಮುಂದೆ ವಿದ್ಯಾರ್ಥಿನಿಯರು ಕಣ್ಣೀರು ಹಾಕಿರುವುದು ಪೋಷಕರಿಗೆ ತೀವ್ರ ನೋವುಂಟು ಮಾಡಿದೆ. ಒಂದೆಡೆ ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು ಎಂದು ತಮ್ಮ ಭದ್ರತಾ ಕಾನ್ವಾಯ್ ತಡೆದು 45 ನಿಮಿಷ ವಿಮಾನ ನಿಲ್ದಾಣದಲ್ಲೇ ಕಾಯುವ ಮೂಲಕ ನೈಜ ಕಾಳಜಿ ಮೆರೆದಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರು ಅಧಿಕಾರದ ಹಪಾಹಪಿಗೆ ಬಡ ವಿದ್ಯಾರ್ಥಿಗಳ ಭವಿಷ್ಯವನ್ನೇ ಕತ್ತಲೆಗೆ ದೂಡಿದ್ದಾರೆ ಎಂದು ಟೀಕಿಸಿದರು. ರಾಜ್ಯ ಸರ್ಕಾರ ತಕ್ಷಣವೇ ನೊಂದ ವಿದ್ಯಾರ್ಥಿಗಳ ಬಹಿರಂಗ ಕ್ಷಮೆಯಾಚಿಸಬೇಕು ಮತ್ತು ಅವರಿಗೆ ನ್ಯಾಯ ಒದಗಿಸಬೇಕು ಎಂದು ಕಿಚಡಿ ಕೊಟ್ರೇಶ್ ಒತ್ತಾಯಿಸಿದ್ದಾರೆ.

ಕರೂರು: ಸಮೀಪದ ಉತ್ನೂರ್ ಗ್ರಾಮದಲ್ಲಿ ಎರಡು ಹನಿಗಳು ಊರಿವ ವಿರುದ್ಧ ನಿರಂತರ ಗೆಲುವು ಕಡ್ಡಾಯವಾಗಿ ಐದು ವರ್ಷದ ಒಳಗಿನ ಮಕ್ಕಳಿಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಅಂಬೇಡ್ಕರ್ ಭವನ ಕಾಮಗಾರಿ ವೀಕ್ಷಿಸಿದ ಶಾಸಕ

• **ಬೀದರ್:** ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಔರಾದ(ಬಿ) ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಅಂಬೇಡ್ಕರ್ ಭವನದ ಕಾಮಗಾರಿ ಸ್ಥಳಕ್ಕೆ ಇತ್ತೀಚೆಗೆ ದಿಢೀರ್ ಭೇಟಿ ನೀಡಿ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಕಾಮಗಾರಿಯ ಗುಣಮಟ್ಟ ಹಾಗೂ ಪ್ರಗತಿ ಕುರಿತು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ಮಾಹಿತಿ ಪಡೆದ ಅವರು, ಕಟ್ಟಡ ನಿರ್ಮಾಣಕ್ಕೆ ಬಳಸುವ ಕಬ್ಬಿಣ, ಸಿಮೆಂಟ್ ಸೇರಿದಂತೆ ಎಲ್ಲ ಸಾಮಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು. ಕಟ್ಟಡ ನಿರ್ಮಾಣ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳು ಹಾಗೂ ಅವರ ಸಂದೇಶವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಈ ಭವನ ನಿರ್ಮಾಣವಾಗಬೇಕು. ಸಾರ್ವಜನಿಕರಿಗೆ ಅನುಕೂಲವಾಗುವ ಎಲ್ಲ ಮೂಲಸೌಕರ್ಯಗಳನ್ನು ಅಳವಡಿಸಿ ಮಾದರಿ ಕಟ್ಟಡವಾಗಿ ರೂಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವಾಜಿರಾವ ಪಾಟೀಲ ಮುಂಗನಾಳ, ಸಚಿನ ರಾಠೋಡ, ಶ್ರೀನಿವಾಸ ಖೂಬಾ, ದಯಾನಂದ ಘೂಳೆ, ಪ್ರಕಾಶ ಅಲ್ಮಾಜೆ, ಬಸವರಾಜ ಹಳ್ಳೆ, ಕೇರಬಾ ಪವಾರ, ಗುಂಡಪ್ಪ ಮುಧಾಳೆ, ಅಂಬಾದಾಸ ನೇಳಗೆ, ಪ್ರಕಾಶ ಭಂಗಾರೆ, ಆನಂದ ದ್ಯಾಡೆ, ಎಂ.ಡಿ ಸಲಾವೋದ್ದೀನ್ ಸೇರಿದಂತೆ ಇಲಾಖೆಯ ಅಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಬೀದರ್: ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಔರಾದ(ಬಿ) ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಅಂಬೇಡ್ಕರ್ ಭವನದ ಕಾಮಗಾರಿ ಸ್ಥಳಕ್ಕೆ ಇತ್ತೀಚೆಗೆ ದಿಢೀರ್ ಭೇಟಿ ನೀಡಿ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಕೃಷಿ ಪರಿಕರ ವಿತರಕರ, ಮಾರಾಟಗಾರರ ಸಭೆ | ತಹಶೀಲ್ದಾರ್ ಸಲಹೆ

ರೈತ ಸ್ನೇಹಿ ಮಾರಾಟಗಾರರಾಗಿ

• **ಸಿರುಗುಪ್ಪ:** ಮಾರಾಟಗಾರರು ರಸಗೊಬ್ಬರವನ್ನು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದು ಹಾಗೂ ಇತರೆ ವಸ್ತುಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಒತ್ತಾಯಿಸಿ ಗೊಬ್ಬರ ವಿತರಣೆ ಮಾಡದಂತೆ ರೈತ ಸ್ನೇಹಿ ಮಾರಾಟಗಾರರು ಆಗುವಂತೆ ತಹಶೀಲ್ದಾರ್ ಗೌಸಿಯ ಬೇಗಂ ಹೇಳಿದರು.

ನಗರದ ಸಿಡಿಪಿಒ ಕಚೇರಿಯಲ್ಲಿ ಕೃಷಿ ಇಲಾಖೆಯ ವತಿಯಿಂದ ಬುಧವಾರ ಆಯೋಜಿಸಿದ ಗುಣ ನಿಯಂತ್ರಣ ಕಾರ್ಯಕ್ರಮದಡಿ ಕೃಷಿ ಪರಿಕರ ವಿತರಕರ ಹಾಗೂ ಮಾರಾಟಗಾರರ ಸಭೆಯಲ್ಲಿ ಮಾತನಾಡಿದರು. ರಸಗೊಬ್ಬರ ಮಾರಾಟದ ದೈನಂದಿನ ಆಂಕಿ-ಅಂಶಗಳನ್ನು ಇಲಾಖೆಗೆ ಸಲ್ಲಿಸುವುದು, ಕಡ್ಡಾಯವಾಗಿ ಎಫ್‌ಐಡಿ ಮುಖಾಂತರ ರಸಗೊಬ್ಬರ ವಿತರಣೆ ಮಾಡುವುದು, ಬೆಲೆಪಟ್ಟಿಯನ್ನು ಮಳಿಗೆಗಳಲ್ಲಿ ಪ್ರದರ್ಶಿಸುವುದು ಹಾಗೂ ರೈತರಿಗೆ ಅಧಿಕೃತ ಬಿಲ್ ನೀಡುವುದು ಸೇರಿದಂತೆ ಇಲಾಖೆಯ ಎಲ್ಲ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ರೆಡ್ಡಿ ಮಾತನಾಡಿ, ತಾಲೂಕಿನಲ್ಲಿ ಈವರೆಗೆ ಮಳೆಯ ಪ್ರಮಾಣ ನಿರೀಕ್ಷಿತಕಿಂತ ಹೆಚ್ಚಾಗಿದೆ. ಜೂನ್ ತಿಂಗಳಲ್ಲಿ ಬರುವ ನಿರಂತರ ಮಳೆಯು ಕಡಿಮೆಯಾಗಿದೆ. ಹೆಚ್ಚು ನೀರು ಬೇಕಾಗುವ ಬೆಳೆಗಳನ್ನು ಬೆಳೆಯದೆ, ಅಲ್ಪ ನೀರಿನಲ್ಲಿ ಬೆಳೆಯುವ ವಿವಿಧ ಬೆಳೆಗಳನ್ನು ಬೆಳೆಯುವಂತೆ ಮಾರ್ಗದರ್ಶನ ನೀಡಬೇಕು. ರೈತರು ಬೆಳೆ ನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸಿ ಸೂಕ್ತ ಕೃಷಿ ಕ್ರಮಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ರೈತರು ಕೇವಲ ಯೂರಿಯಾ ರಸಗೊಬ್ಬರದ ಮೇಲೆಯೇ ಅವಲಂಬಿತರಾಗದೆ ಇತರೆ ಪೋಷಕಾಂಶಯುಕ್ತ ಗೊಬ್ಬರಗಳನ್ನೂ ಬಳಸಬೇಕು ಎಂದು ತಿಳಿಸಿದರು.

ರೈತರು ಹಾಗೂ ರೈತ ಸಂಘದ ಮುಖಂಡರು ಮತ್ತು ಮಾರಾಟಗಾರರು ರಸಗೊಬ್ಬರ ಖರೀದಿಸುವ ಸಂದರ್ಭದಲ್ಲಿ ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದರು. ಕೃಷಿಕ ಸಮಾಜ ಸಂಘದ ತಾಲ್ಲೂಕು ಅಧ್ಯಕ್ಷ ನಾಗರುದ್ರಗೌಡ, ಉಪಾಧ್ಯಕ್ಷ ನರಸನಗೌಡ, ಕೃಷಿ ಪರಿಕರ ಮಾರಾಟಗಾರರ ಸಂಘದ ತಾಲೂಕು ಅಧ್ಯಕ್ಷ ಮಾಧವಯ್ಯ ಶೆಟ್ಟಿ, ಕೃಷಿ ಇಲಾಖೆಯ ಅಧಿಕಾರಿಗಳು ಇದ್ದರು.

ತಾಳೆ ಕೃಷಿಯಿಂದ ನಿರ್ದಿಷ್ಟ ಆದಾಯ

• **ಕುರುಗೋಡು:** ರೈತರು ತಾಳೆ ಕೃಷಿ ಕೈಗೊಳ್ಳುವುದರಿಂದ ನಿರ್ದಿಷ್ಟ ಆದಾಯ ಪಡೆಯಬಹುದು ಎಂದು ತೋಟಗಾರಿಕೆ ಜಂಟಿ ನಿರ್ದೇಶಕ ಶಶಿಕಾಂತ್ ಕೋಟಿ ಹೇಳಿದರು. ತಾಲೂಕಿನ ಮುಷ್ಟಗಟ್ಟೆ ಗ್ರಾಮದ ಹೊರವಲಯದಲ್ಲಿ ತೋಟಗಾರಿಕೆ ಬೆಳೆಯದ ತಾಳೆ ಬೆಳೆ ಬೆಳೆದ ರೈತ ಶ್ರೀಕಾಂತ ತೋಟದಲ್ಲಿ ತೋಟಗಾರಿಕೆ ಇಲಾಖೆಯ ಬೆಳೆ ಪರಿವೀಕ್ಷಣೆ ವೇಳೆ ಬುಧವಾರ ಅವರು ರೈತರಿಗೆ ಮಾಹಿತಿ ವೇಳೆ ಮಾತನಾಡಿದರು. 'ತಾಳೆ ಬೆಳೆ ನಾಟಿ ಮಾಡಿದ 4 ವರ್ಷಗಳ ಬಳಿಕ ಫಸಲು ಬರುತ್ತದೆ. ಮಾರುಕಟ್ಟೆಗಾಗಿ ಪರದಾಡುವಂತಿಲ್ಲ. ಕಳ್ಳರ ಭಯವಿಲ್ಲ ತೋಟಗಾರಿಕೆ ಇಲಾಖೆಯ ವತಿಯಿಂದ ನೇರವಾಗಿ ರೈತರಿಗೆ ಸಬ್ಸಿಡಿ ಹಾಗೂ ಸಹಾಯಧನ ಇದೆ ತಾಳೆ ಫಸಲನ್ನು ಉತ್ತಮ ಬೆಲೆಗೆ ಖರೀದಿ ಮಾಡುತ್ತದೆ' ಎಂದು ಹೇಳಿದರು. ತಾಳೆ ಕೃಷಿಗೆ ಇಲಾಖೆಯಿಂದ ಸಹಾಯ ಧನವೂ ದೊರಕುತ್ತದೆ. ತಿಂಗಳಿಗೆ ಎರಡು ಬಾರಿ ಕೊಯ್ಲು ಮಾಡಿ ಮಾರಾಟ ಮಾಡಲು ಅವಕಾಶವಿದೆ. ರೈತರು ತೋಟಗಾರಿಕೆ ಇಲಾಖೆ ಸಂಪರ್ಕಿಸಿ ತಾಳೆ ಕೃಷಿಯ ಮಾಹಿತಿ ಪಡೆಯಬೇಕು ಎಂದು ಸಲಹೆ ನೀಡಿದರು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಶಂಕ್ರಪ್ಪ ಜೆ. ಹಾಗೂ ರೈತರು ಮತ್ತು ಇತರರು ಇದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

• **ಹಗರಿಬೊಮ್ಮನಹಳ್ಳಿ:** ವಿದ್ಯುತ್ ಖಾಸಗೀಕರಣದಿಂದ ರೈತರನ್ನು ಸಂಕಷ್ಟಕ್ಕೆ ತಳ್ಳುತ್ತದೆ ಸಾರ್ವಜನಿಕ ವಲಯಕ್ಕೆ ತೀವ್ರ ತೆರನಾದ ಸಮಸ್ಯೆ ಉಂಟಾಗುತ್ತದೆ. ಜೊತೆಗೆ ಉದ್ಯೋಗವನ್ನು ಕಡಿತಗೊಳಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ವಿದ್ಯುತ್ ಟಾಟಾ ಪವರ್ ಕಂಪನಿಯ ವಿದ್ಯುತ್ ವಿತರಣಾ ಲೈಸೆನ್ಸ್ ಕೋರಿ ವಿದ್ಯುತ್ ಕಾಯ್ದೆ ಪ್ರಕಾರ ಕೆಇಆರ್‌ಸಿಗೆ ಸಲ್ಲಿಸಿರುವ ಟಾಟಾ ಕಂಪನಿಯ ಅರ್ಜಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕೂಡಲೇ ತಿರಸ್ಕರಿಸಬೇಕೆಂದು ಸಿಐಟಿಯುನ ರಾಜ್ಯ ಉಪಾಧ್ಯಕ್ಷ ಆರ್.ಎಸ್.ಬಸವರಾಜ ಆಗ್ರಹಿಸಿದರು. ಬುಧವಾರ ವಿದ್ಯುತ್ ಖಾಸಗೀಕರಣ ವಿರೋಧಿಸಿ ಸಿಐಟಿಯು ಹಗರಿಬೊಮ್ಮನಹಳ್ಳಿಯ ಜಸ್ಕಾಂ ಇಲಾಖೆಯ ಕಚೇರಿಯ ಮುಂದೆ ಪ್ರತಿಭಟಿಸಲಾಯಿತು.

ಈ ವೇಳೆ ಮಾತನಾಡಿದ ಅವರು ದೇಶದಲ್ಲಿ ಹೆಚ್ಚು ಕೃಷಿ ಹವಾಮಾನ ವೈವಿಧ್ಯಕ್ಕೆ ಹೆಸರಾಗಿರುವ ಕರ್ನಾಟಕ ರಾಜ್ಯವು ಹಲವು ಪ್ರಮುಖ ಬೆಳೆಗಳನ್ನು ಬೆಳೆಯುತ್ತದೆ. ಸುಮಾರು.40 ಲಕ್ಷಕ್ಕೂ ಹೆಚ್ಚು ಕೃಷಿನೀರಾವರಿ ಪಂಪ್‌ಸೆಟ್ ಗಳನ್ನು ಆಶ್ರಯಿಸಿ ರೈತರು ಕೃಷಿ ನಡೆಸುತ್ತಿದ್ದಾರೆ. 19 ಜಿಲ್ಲೆಗಳು ಸರಾಸರಿಗಿಂತ ಹೆಚ್ಚು ಪಂಪ್ ಸೆಟ್ ಗಳು ಇರುವ ಜಿಲ್ಲೆಗಳಾಗಿದ್ದು, ನೇರ ನಗದು ವರ್ಗಾವಣೆ ಹಾಗೂ ಸ್ಮಾರ್ಟ್ ಮೀಟರ್ ಅಳವಡಿಕೆ ರೈತ ವಿರೋಧಿ ಕ್ರಮವಾಗಿದೆ. ಸಂಚಾಲಕರು ಎಸ್. ಜಗನ್ನಾಥ ವಿದ್ಯುತ್ ಖಾಸಗೀಕರಣದ ಹುನ್ನಾರ ಕ್ರಮೇಣ ರೈತರು ವ್ಯವಸಾಯ ಕ್ಷೇತ್ರವನ್ನು ಬಿಡುವಂತಾಗಿ ರಾಜ್ಯದ ಹಾಗೂ ದೇಶದ ಆಹಾರ ಭದ್ರತೆಗೆ ತೀವ್ರ ತೊಂದರೆ ಉಂಟಾಗುತ್ತದೆ.

ರಾಜ್ಯದ ಎಲ್ಲ ನಾಗರಿಕರು ಕಟ್ಟಲಾದ ತೆರಿಗೆ ಹಣದಲ್ಲಿ ಕಟ್ಟಲಾದ ಈ ಸಾರ್ವಜನಿಕ ರಂಗದ ಆಸ್ತಿ ದಶ ಲಕ್ಷಾಂತರ ಕೋಟಿ ರೂ.ಗಳನ್ನು ಖಾಸಗಿ ಕಂಪೆನಿಗೆ ಕೊಡುವ ಹುನ್ನಾರವಾಗಿದೆ ಎಂದು ಆರೋಪಿಸುವ ಮೂಲಕ ಟಾಟಾ ಪವರ್ ಕಂಪನಿಯ ಅರ್ಜಿಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣಆಯೋಗವು ತಿರಸ್ಕರಿಸಬೇಕೆಂದು ಆಗ್ರಹಿಸಿದರು.

ಜೆಸ್ಕಾಂ ಇಲಾಖೆಯ ಎಫ್‌ಡಿಸಿ ರಾಮು ಮತ್ತು ಎಸ್‌ಡಿಸಿಗಳಾದ ನಾರಪ್ಪ ಹಾಗೂ ಚಂದ್ರಮ್ಮ, ವಿದ್ಯುತ್ ಗುತ್ತಿಗೆದಾರರ ಸಂಘ ಅಧ್ಯಕ್ಷ ರಾಘವೇಂದ್ರ, ಸದಸ್ಯರಾದ ತಿಮ್ಮಣ್ಣ.ರಾಮು ರಾಘವೇಂದ್ರ, ವಿಶ್ವನಾಥ್, ಕೊಟ್ರೇಶ್, ಸಿಐಟಿಯುನ ಇತರ ಕಾರ್ಯಕರ್ತರು ಇದ್ದರು.

ಬೈಕ್ ಕಳ್ಳನ ಬಂಧನ: 41 ಬೈಕ್ ವಶ

• **ಬಳ್ಳಾರಿ:** ಹೀರೋ ಹೋಂಡಾ ಬೈಕ್‌ಗಳನ್ನೂ ಕದ್ದು ಮಾರಾಟ ಮಾಡುತ್ತಿದ್ದ ಆರೋಪಿ ಆಟೋ ಚಾಲಕ ಸ್ಪ್ಲೆಂಡರ್ ಸಿದ್ದಾರೆಡ್ಡಿಯನ್ನು ಬಂಧಿಸುವಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದು, ಕದ್ದಿರುವ 41 ಬೈಕ್ ಗಳನ್ನೂ ವಶಕ್ಕೆ ಪಡೆದು ನ್ಯಾಯಾಂಗ ವಶಕ್ಕೆ ನೀಡಲಾಗಿದೆ ಎಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಹೇಳಿದರು.

ನಗರದ ಡಿಎಆರ್ ಮೈದಾನದಲ್ಲಿ ಕಳ್ಳತನ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಬೈಕ್‌ಗಳನ್ನು ಪ್ರದರ್ಶಿಸಿ ಬುಧವಾರ ಮಾತನಾಡಿದರು.

ಪಟ್ಟಣದ ನಿಟ್ಟೂರು ನರಸಿಂಹ ಮೂರ್ತಿ ಬಯಲು ಜಾಗದಿಂದ ಮುಕ್ಕಣ್ಣ ಎನ್ನುವವರ ಸಿಲ್ವರ್ ಕಲರ್ ಹೀರೋ ಫ್ಯಾಷನ್ ಪ್ರೊ.ಬೈಕ್ ಕಳ್ಳತನವಾದ ಕುರಿತು ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸಿದ ವೇಳೆ ಬಳ್ಳಾರಿಯ ಅಶೋಕ್ ನಗರ ನಿವಾಸಿ ಸ್ಪ್ಲೆಂಡರ್ ಸಿದ್ದಾರೆಡ್ಡಿ ಎನ್ನುವ ಆರೋಪಿ ಬೈಕ್ ಗಳನ್ನೂ ಕದ್ದು ಮಾರಾಟ ಮಾಡುತ್ತಿರುವ ಕುರಿತು ಪತ್ತೆಯಾಗಿದೆ.

ಈ ಕುರಿತು ಎಎಸ್ಪಿ ನವೀನ್ ಕುಮಾರ್, ಸಿರುಗುಪ್ಪ ಡಿವೈಎಸ್ಪಿ ಮಹಾಂತೇಶ ಕೋನಬೇವು, ಸಿಪಿಐ ವೈ.ಎಸ್. ಹನುಮಂತಪ್ಪ, ಪಿಎಸ್‌ಐ ಪರಶರಾಮ್ ಸೇರಿದಂತೆ ನಮ್ಮ ವಿವಿಧ ಅಧಿಕಾರಿಗಳ ನೇತೃತ್ವದ ತಂಡ ವಿಶೇಷ ಕಾರ್ಯಾಚರಣೆ ನಡೆಸಿ, ಕಳ್ಳತನ ವಾಗಿದ್ದ 41 ಬೈಕ್ ಗಳನ್ನ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ನಮ್ಮ ಸಿಬ್ಬಂದಿಗಳ, ಅಧಿಕಾರಿಗಳ ತಂಡಕ್ಕೆ ಅಭಿನಂದನೆಗಳನ್ನು ತಿಳಿಸುವೆ ಎಂದರು. ವಶಪಡಿಸಿಕೊಂಡ 41 ಬೈಕ್ ಗಳಲ್ಲಿ ಬಳ್ಳಾರಿ ಜಿಲ್ಲೆ 16, ವಿಜಯನಗರ 4, ಚಿತ್ರದುರ್ಗ 21 ಬೈಕ್ ಗಳು ಒಳಗೊಂಡಿವೆ. ಆರೋಪಿ ಸಿದ್ದಾರೆಡ್ಡಿ ವಾಹನ ಮಾರಾಟ ಮಾಡುವಾಗ ನಂಬಿಕೆ ಬರುವ ರೀತಿಯಲ್ಲಿ ನಡೆದುಕೊಳ್ಳುವುದು ಜ